ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 28 ಶನಿವಾರ 2022

ಸಂಪುಟ: 43 | ಸಂಚಿಕೆ: 42 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಕರ್ನಾಟಕದಲ್ಲಿ ಬಂಡವಾಳ ಹೂಡಲು
25 ಕಂಪನಿಗಳ ಉತ್ಸುಕತೆ

● ದಾವೋಸ್ ಹೂಡಿಕೆ ಸಮಾವೇಶದಿಂದ ಮರಳಿದ ಮುಖ್ಯಮಂತ್ರಿ ಬೊಮ್ಮಾಯಿ ಮಾಹಿತಿ ವಿನಿಮಯ; 65 ಸಾವಿರ ಕೋಟಿ ಹೂಡಿಕೆ ಭರವಸೆ ● ರಾಜಕೀಯ ಸ್ಥಿರತೆ ವಿಚಾರ ಉದ್ಯಮಿಗಳು ಸಾಮಾನ್ಯವಾಗಿ ಪ್ರಸ್ತಾಪಿಸುವ ಸಂಗತಿ ● ಹೂಡಿಕೆದಾರರಿಗೆ ಅನುಕೂಲ ಕಲ್ಪಿಸಲು ರಾಜ್ಯ ಸರ್ಕಾರದಿಂದ ಎಲ್ಲಾ ಸಿದ್ಧತೆ

ಬೆಂಗಳೂರು, ಮೇ 27(ಕೆಎಂಶಿ)– ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆ ಇಲ್ಲ. ಅಸ್ಥಿರತೆ ಇದ್ದರೆ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಉದ್ದಿಮೆದಾರರು ಮುಂದೆ ಬರುತ್ತಿದ್ದರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಖಾರವಾಗಿ ಪ್ರಶ್ನಿಸಿದ್ದಾರೆ.

ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಭಾಗವಹಿಸಿ, ಹಿಂತಿರುಗಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು 25 ಕಂಪನಿಗಳು ಮುಂದೆ ಬಂದಿವೆ. ಅಂದಾಜು 65 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆಗೆ ಬದ್ಧತೆ ತೋರಿವೆ. ಇದು ಕೈಗಾರಿಕೆ ಸ್ಥಾಪನೆಗೆ ರಾಜ್ಯ ನೀಡುತ್ತಿರುವ ಪ್ರೋತ್ಸಾಹ ಹಾಗೂ ನೀತಿಗೆ ಸಿಕ್ಕಂತಹ ಫಲ ಎಂದರು.

ನೆರೆಯ ಆಂಧ್ರಪ್ರದೇಶಕ್ಕಿಂತ ಕರ್ನಾಟಕದಲ್ಲೇ ಹೆಚ್ಚು ಬಂಡವಾಳ ಹೂಡಲು ಉದ್ದಿಮೆದಾರರು ಆಸಕ್ತಿ ಹೊಂದಿದ್ದಾರೆ. ಈ ಪ್ರಮಾಣದಲ್ಲಿ ಒಪ್ಪಂದವಾಗಿದ್ದರೆ, ಇನ್ನು 80 ಸಾವಿರ ಕೋಟಿಯಷ್ಟು ಬಂಡವಾಳ ▶ 8ನೇ ಪುಟಕ್ಕೆ



ರಾಜ್ಯದಲ್ಲಿ 5 ಲಕ್ಷ ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ

ಬೆಂಗಳೂರು: ಮುಂಬರುವ ನವೆಂಬರ್ ತಿಂಗಳಿನಲ್ಲಿ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 5 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯಾಗುವ ನಿರೀಕ್ಷೆಯಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ವಿಶ್ವಾಸ ವ್ಯಕ್ತಪಡಿಸಿದರು.

ದಾವೋಸ್‌ನಿಂದ ಬೆಂಗಳೂರಿಗೆ ಆಗಮಿಸಿದ ಅವರು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಈಗಾಗಲೇ ನಿಗದಿಯಾಗಿರುವಂತೆ ನವೆಂಬರ್ 2ರಿಂದ 4ರವರೆಗೆ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಲಿದೆ ಎಂದರು.

ವಿಧಾನಪರಿಷತ್‌ಗೆ ಬಿಜೆಪಿಯ ಸವದಿ, ಕೇಶವಪ್ರಸಾದ್, ನಾರಾಯಣಸ್ವಾಮಿ, ಹೇಮಲತಾ, ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್, ನಾಗರಾಜ ಯಾದವ್, ಜೆಡಿಎಸ್‌ನ ಶರವಣ ಅವಿರೋಧ ಆಯ್ಕೆ



ಲಕ್ಷ್ಮಣ ಸವದಿ | ಕೇಶವಪ್ರಸಾದ್ | ಹೇಮಲತಾ | ನಾರಾಯಣಸ್ವಾಮಿ | ಅಬ್ದುಲ್ ಜಬ್ಬಾರ್ | ನಾಗರಾಜ ಯಾದವ್ | ಶರವಣ

ಬೆಂಗಳೂರು, ಮೇ 27 (ಕೆಎಂಶಿ)–ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಕೆ.ಅಬ್ದುಲ್ ಜಬ್ಬಾರ್ ಸೇರಿದಂತೆ ಏಳು ಮಂದಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ನಾಮಪತ್ರ ಹಿಂಪಡೆಯಲು ಕಡೇ ದಿನವಾದ ಇಂದು ನಾಮಪತ್ರ ಸಲ್ಲಿಸಿದ್ದ ಯಾವುದೇ ಉಮೇದುದಾರರು ತಮ್ಮ ನಾಮಪತ್ರ ಹಿಂಪಡೆಯದಿದ್ದದ್ದು ಹಾಗೂ ನಿಗದಿತ 7 ಸ್ಥಾನಗಳಿಗೆ ಏಳೇ ಜನ ಕಣದಲ್ಲಿ ಉಳಿದಿದ್ದರು. ಹಾಗಾಗಿ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾಗೂ ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಪ್ರಕಟಿಸಿದ್ದಾರೆ.

ಮೇ 24 ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು, ಮೇ 25 ರಂದು ಪರಿಶೀಲನೆ ಹಾಗೂ ಮೇ 27 ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿತ್ತು.

ಭಾರತೀಯ ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ಲಕ್ಷ್ಮಣ ಸವದಿ, ಟಿ. ನಾರಾಯಣ ಸ್ವಾಮಿ, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಎಸ್. ಕೇಶವ ಪ್ರಸಾದ್, ಕಾಂಗ್ರೆಸ್‌ನಿಂದ ಕೆ.ಅಬ್ದುಲ್ ಜಬ್ಬಾರ್ ಹಾಗೂ ಎಮ್. ನಾಗರಾಜ ಯಾದವ್, ಜೆಡಿಎಸ್ ಪಕ್ಷದಿಂದ ಟಿ.ಎ. ಶರವಣ ಅವರು ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳಾಗಿದ್ದಾರೆ.

ಇಂದು ನಾಮಪತ್ರ ಹಿಂಪಡೆಯುವ ಸಮಯ ಮೀರಿದ ನಂತರ ನಾಮಪತ್ರ ಸಲ್ಲಿಸಿದ್ದ 7 ಅಭ್ಯರ್ಥಿಗಳಿಗೆ ಚುನಾವಣಾಧಿಕಾರಿ ಹಾಗೂ ರಾಜ್ಯ ವಿಧಾನಸಭೆಯ ಕಾರ್ಯದರ್ಶಿಗಳೂ ಆದ ವಿಶಾಲಾಕ್ಷಿ ಅವಿರೋಧ ಆಯ್ಕೆಯ ಪ್ರಮಾಣ ಪತ್ರಗಳನ್ನು ವಿತರಿಸಿದರು.

ವಂದಿತಾ ಶರ್ಮ ರಾಜ್ಯದ ನೂತನ ಮುಖ್ಯ ಕಾರ್ಯದರ್ಶಿ

ಬೆಂಗಳೂರು– ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯಾಗಿ ವಂದಿತಾ ಶರ್ಮ ಅವರು ನೇಮಕವಾಗಿದ್ದಾರೆ. ಈ ಸಂಬಂಧ ಶುಕ್ರವಾರ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಇವರು ಹಾಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾಗಿದ್ದಾರೆ.



ಹಾಲಿ ಮುಖ್ಯ ಕಾರ್ಯದರ್ಶಿಯಾಗಿರುವ ಪಿ.ರವಿಕುಮಾರ್ ಅವರ ಅಧಿಕಾರಾವಧಿ ಇದೇ ತಿಂಗಳ 31ಕ್ಕೆ ಕೊನೆಗೊಳ್ಳಲಿದೆ. ತೆರವಾಗಲಿರುವ ಈ ಸ್ಥಾನಕ್ಕೆ ಸರ್ಕಾರ ವಂದಿತಾ ಶರ್ಮರನ್ನು ನೇಮಿಸಿದೆ. 1986–ಬ್ಯಾಚ್‌ನ ಐಎಎಸ್ ▶ 8ನೇ ಪುಟಕ್ಕೆ

ವಸತಿ ಬಡಾವಣೆ ನಕ್ಷೆ ಅನುಮೋದನೆಗೆ ಲಂಚ ಸ್ವೀಕಾರ
ನಿವೃತ್ತಿಗೆ ಇನ್ನು ಐದೇ ದಿನವಿದ್ದ ಮುಡಾ ಟಿಪಿಎಂ ಜಯಸಿಂಹ ಎಸಿಬಿ ಬಲೆಗೆ
ಡೇಟಾ ಎಂಟ್ರಿ ಆಪರೇಟರ್ ನಾಗೇಂದ್ರ ಕೂಡಾ ಎಸಿಬಿ ವಶಕ್ಕೆ

ಮೈಸೂರು, ಮೇ 27(ಆರ್‌ಕೆ)– ಖಾಸಗಿ ವಸತಿ ಬಡಾವಣೆ ನಕ್ಷೆ ಅನುಮೋದನೆಗೆ ಡೆವಲಪರ್‌ನಿಂದ ಲಂಚ ಸ್ವೀಕರಿಸುತ್ತಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಗರ ಯೋಜಕ ಸದಸ್ಯ (TPM) ಹಾಗೂ ಡೇಟಾ ಎಂಟ್ರಿ ಆಪರೇಟರ್ (DEO) ಎಸಿಬಿ ಬಲೆಗೆ ಬಿದ್ದಿದ್ದಾರೆ.



ಜಯಸಿಂಹ

ನಗರ ಯೋಜನಾ ಜಂಟಿ ನಿರ್ದೇಶಕರೂ ಆದ ನಗರ ಯೋಜಕ ಸದಸ್ಯ ಜಿ.ಎಸ್. ಜಯಸಿಂಹ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಟಿಪಿಎಂ ಶಾಖೆಯ ಡೇಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ನಾಗೇಂದ್ರ ಎಸಿಬಿ ಪೊಲೀಸರ ಬಲೆಗೆ ಬಿದ್ದವರು.



ನಾಗೇಂದ್ರ

ಮೈಸೂರಿನಲ್ಲೇ ವಸತಿ ಬಡಾವಣೆ ಅಭಿವೃದ್ಧಿಗೆ ನಕ್ಷೆ ಅನುಮೋದನೆಗೆ ಬೆಂಗಳೂರಿನ ಡೆವಲಪರ್ ವೇಣುಗೋಪಾಲ್ ಅವರಿಂದ 50 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದಾಗ ಇಂದು ಮಧ್ಯಾಹ್ನ 12.35ರ ವೇಳೆಗೆ ಮುಡಾ ಕಚೇರಿ ಟಿಪಿಎಂ ಸೆಕ್ಷನ್‌ನಲ್ಲಿ ಹಣದ ಸಹಿತ ಜಯಸಿಂಹ ಮತ್ತು ನಾಗೇಂದ್ರ ಅವರನ್ನು ▶ 8ನೇ ಪುಟಕ್ಕೆ

ಶ್ರವಣಬೆಳಗೊಳ– ಕುಶಾಲನಗರ ರೈಲು ಮಾರ್ಗ ಸಮೀಕ್ಷೆ

ಮಡಿಕೇರಿ,ಮೇ 27– ಭಾರತೀಯ ರೈಲ್ವೆ, ರಾಜ್ಯದಲ್ಲಿ ಮತ್ತೊಂದು ಹೊಸ ರೈಲು ಮಾರ್ಗ ಯೋಜನೆ ಜಾರಿಗೆ ಮುಂದಾಗಿದೆ. ಶ್ರವಣಬೆಳಗೊಳ–ಕುಶಾಲನಗರ ನಡುವಿನ ಹೊಸ ರೈಲು ಮಾರ್ಗ ಸಮೀಕ್ಷೆಗೆ ನೈರುತ್ಯ ರೈಲ್ವೆ ಪ್ರಧಾನ ಕಚೇರಿಗೆ ಸೂಚನೆ ನೀಡಲಾಗಿದೆ.

ಶ್ರವಣಬೆಳಗೊಳ–ಹೊಳೆನರಸೀಪುರ–ಕೊಣನೂರು–ಕುಶಾಲನಗರ ರೈಲ್ವೆ ಯೋಜನೆ



ಸಮೀಕ್ಷೆ ನಡೆಸಲು ನಿರ್ದೇಶನ ನೀಡಲಾಗಿದೆ. ರೈಲ್ವೆ ಬೋರ್ಡ್ ಯೋಜನಾ ನಿರ್ವಾಹಕ ಪಂಕಜ್ ಕುಮಾರ್ ಮೇ 12 ರಂದು, ಪತ್ರ ಮುಖೇನಾ ಸೂಚನೆ ನೀಡಿದ್ದಾರೆ. ಇದರೊಂದಿಗೆ ಹಾಸನ ಜಿಲ್ಲೆಯ ಶ್ರವಣಬೆಳಗೊಳ ▶ 8ನೇ ಪುಟಕ್ಕೆ

ದಕ್ಷಿಣ ಪದವೀಧರ ಕ್ಷೇತ್ರ
20 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ: ಹಿಂಪಡೆಯಲು ಮೇ 30 ಕಡೇ ದಿನ

ಮೈಸೂರು, ಮೇ 27(ಎಸ್‌ಬಿಡಿ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯ ಎಲ್ಲಾ 20 ಸ್ಪರ್ಧಾಕಾಂಕ್ಷಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ. ಶುಕ್ರವಾರ ನಡೆದ ನಾಮಪತ್ರ ಪರಿಶೀಲನೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಿ.ಎಂ.ಮಧು, ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್, ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಎಸ್‌ಡಿಪಿಐನ ರಫತ್ ಉಲ್ಲಾ ಖಾನ್, ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಕರ್ನಾಟಕ)ದ ಎನ್.ವೀರಭದ್ರಸ್ವಾಮಿ, ಪಕ್ಷೇತರ ಅಭ್ಯರ್ಥಿಗಳಾದ ಅಮ್ಜದ್ ಖಾನ್, ಡಾ.ಜೆ.ಅರುಣ್‌ಕುಮಾರ್, ಸಿ.ಕಾವ್ಯಶ್ರೀ, ▶ 8ನೇ ಪುಟಕ್ಕೆ

ಮಕ್ಕಳ ಮೆದುಳನ್ನೇ ಕೇಸರಿಗೊಳಿಸುವುದು ಸರಿಯಲ್ಲ

ಮತ್ತೆ ಪರಿಷ್ಕರಣೆ ಆಗುವವರೆಗೆ ಈಗಿರುವ ಪಠ್ಯವನ್ನೇ ಮುಂದುವರಿಸಲು ಎಂಎಲ್‌ಸಿ ಹೆಚ್.ವಿಶ್ವನಾಥ್‌ಆಗ್ರಹ



ಮೈಸೂರು, ಮೇ 27(ಆರ್‌ಕೆಬಿ)– ಬಟ್ಟೆ ಕೇಸರಿಯಾದರೆ ಹೋಗಲಿ..., ಮಕ್ಕಳ ಮೆದುಳನ್ನೇ ಕೇಸರಿಗೊಳಿಸುವುದು ಸರಿಯಲ್ಲ. ಮತ್ತೆ ಪರಿಷ್ಕರಣೆ ಆಗುವವರೆಗೆ ಈಗಿರುವ ಪಠ್ಯವನ್ನೇ ಮುಂದುವರಿಸುವಂತೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಪರಿಷ್ಕರಿಸಿರುವ ವಿವಾದಿತ ಪಠ್ಯಮುದ್ರಣಕ್ಕಾಗಿ ಖರ್ಚು ಮಾಡಿರುವ 38 ಕೋಟಿ ಹೋದರೂ ಪರವಾಗಿಲ್ಲ ಆದರೆ ಆ ಪಠ್ಯವನ್ನು ವಿದ್ಯಾರ್ಥಿಗಳಿಗೆ ವಿತರಿಸಬಾರದು. ಮತ್ತೆ ಪರಿಷ್ಕರಣೆ ಆಗುವವರೆಗೂ ಈಗಿರುವ ಪಠ್ಯವನ್ನೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಈ ಹಿಂದೆ ಪ್ರೊ.ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಪಠ್ಯ ಪರಿಷ್ಕರಣೆ ಆಗಿತ್ತು. ಆ ವೇಳೆ ಜಾತ್ಯತೀತ, ವೈಚಾರಿಕ ವಿಷಯಗಳಿದ್ದವು. ಆದರೆ ಈಗ ಒಂದೇ ಒಂದು ಪಾಠವನ್ನೂ ಮಾಡದ ರೋಹಿತ್ ಚಕ್ರವರ್ತಿ ಕೈಗೆ ಜವಾಬ್ದಾರಿ ಒಪ್ಪಿಸಿ, ಎಲ್ಲರೂ ಅಸಹ್ಯ ಪಡುವ ರೀತಿ ಪಠ್ಯ ಪರಿಷ್ಕರಿಸಲಾಗಿದೆ. ಬಟ್ಟೆಯೇನೋ ಕೇಸರಿಯಾದರೆ ಹೋಗಲಿ, ಆದರೆ ಮಕ್ಕಳ ಮೆದುಳನ್ನೇ ಕೇಸರೀಕರಣಗೊಳಿಸುವುದು ಸರಿಯಲ್ಲ. ಸಂಘ ಪರಿವಾರದ ಕೈಗೆ ಮಕ್ಕಳ ಬೋಧನೆ ಒಪ್ಪಿಸುವುದು ಸಹಾ ತಪ್ಪು. ಹೀಗಾಗಿ ಮುಖ್ಯಮಂತ್ರಿಗಳು ಕೂಡಲೇ ಮಧ್ಯ ಪ್ರವೇಶಿಸಬೇಕು ಎಂದು ಆಗ್ರಹಿಸಿದರು.

ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಲ್ಲಿ ಜಾತ್ಯತೀತತೆಯ ಸ್ಪಂದನೆ ಇರಬೇಕಾಗಿತ್ತು. ಆದರೆ ಸಚಿವರ ಕಾರಣದಿಂದಾಗಿ ಒಂದೇ ಜಾತಿಯ ಎಂಟು ಮಂದಿ ಇದ್ದಾರೆ. ಅಲ್ಲದೆ, ರಾಜ್ಯದಲ್ಲಿ ಬಿ.ಟಿ.ಲಲಿತಾ ನಾಯಕ್ ಅವರಂತಹ ಅನೇಕ ಘಟಾನುಘಟಿಗಳಿದ್ದರೂ ನಿರ್ಲಕ್ಷಿಸಿ ಸಮಿತಿಯಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಿಲ್ಲ ಎಂದು ಟೀಕಿಸಿದರು.

ಕುವೆಂಪು, ಲಂಕೇಶ್ ಬೇಡ ಎನ್ನುತ್ತ ಆ ಚಕ್ರವರ್ತಿ ಸೂಲಿಬೆಲೆ ಬಗ್ಗೆ ಮಕ್ಕಳು ಓದುವಂತೆ ಮಾಡುವುದು ಸರಿಯೇ ಎಂದು ಪ್ರಶ್ನಿಸಿದರು. ಇದೇ ವೇಳೆ ಈಗಿನ ರೋಹಿತ್ ಚಕ್ರತೀರ್ಥ ಸಮಿತಿ ರದ್ದುಗೊಳಿಸಿ, ಹೊಸ ಪಠ್ಯಪುಸ್ತಕದ ಬದಲು ಈಗಿನ ಪಠ್ಯಪುಸ್ತಕವನ್ನೇ ಮುಂದಿನ ಪರಿಷ್ಕರಣೆವರೆಗೆ ಮುಂದುವರಿಸಬೇಕೆಂದು ಆಗ್ರಹಿಸಿದರು.

> ದುರ್ಯೋಧನ, ದುಶ್ಯಾಸನರ ದುರಹಂಕಾರದಿಂದಾಗಿ ಅವರಿಗೆ ಪಾಠ ಕಲಿಸಲು ಹೊರಕ್ಕೆ ಬಂದೆವು. ಆದರೆ ನಾವು ತಪ್ಪು ಮಾಡಿದೆವು ಎಂದು ಜನರು ಹೇಳುತ್ತಿದ್ದಾರೆ. ಇದು ಪಶ್ಚಾತಾಪವೋ, ತಾಪವೋ ಎಂಬುದು ಮುಂದೆ ಗೊತ್ತಾಗಲಿದೆ.
> - **ಹೆಚ್.ವಿಶ್ವನಾಥ್**, ವಿಧಾನ ಪರಿಷತ್ ಸದಸ್ಯರು

ಬಿ.ವೈ.ವಿಜಯೇಂದ್ರಗೆ ತಪ್ಪಿದ ಟಿಕೆಟ್; ಹೈಕಮಾಂಡ್‌ಗೆ ಸಲ್ಯೂಟ್

ಬಿ.ಎಸ್.ಯಡಿಯೂರಪ್ಪನವರ ಪುತ್ರ ಬಿ.ವೈ.ವಿಜಯೇಂದ್ರ ಅವರಿಗೆ ವಿಧಾನ ಪರಿಷತ್ ಚುನಾವಣೆ ಟಿಕೆಟ್ ನಿರಾಕರಿಸಿದ ಹೈಕಮಾಂಡ್‌ಗೆ ಸಲ್ಯೂಟ್ ಹೇಳುವುದಾಗಿ ಹೆಚ್.ವಿಶ್ವನಾಥ್ ತಿಳಿಸಿದರು. ವಿಜಯೇಂದ್ರ ಇಲ್ಲದೆ ಬಿಜೆಪಿ ಇಲ್ಲವೋ, ಅಪ್ಪನನ್ನು ಜೈಲಿಗೆ ಕಳಿಸಿದ್ದು ಯಾರು, ಜೊತೆಗೆ ಅಪ್ಪ ಅಧಿಕಾರದಿಂದ ಕೆಳಗಿಳಿಯಲು ತಾನೇ ಕಾರಣನಲ್ಲವೇ ಎಂದು ಕೇಳಿದರು. ವಿಜಯೇಂದ್ರಗೆ ಟಿಕೆಟ್ ನೀಡದಿರುವುದು ಬಿಜೆಪಿಗೆ ಒಳ್ಳೆಯದೇ ಆಯಿತು. ಬೇಕಿದ್ದರೇ ಚುನಾವಣೆಯಲ್ಲಿ ಗೆದ್ದು ಬರಲಿ, ಕಳೆದ ಬಾರಿ ಬಂದಿದ್ದಂತೆ ಮುಂದೆಯೂ ವರುಣಕ್ಕೇ ಬಂದು ಸ್ಪರ್ಧೆ ಮಾಡಲಿ ಎಂದು ಕಿಡಿಕಾರಿದರು.

ವಾಕ್ ಮತ್ತು ಶ್ರವಣ ಸಂಸ್ಥೆಗೆ ಸಂಸದೆ ಸುಮಲತಾ ಅಂಬರೀಶ್ ಭೇಟಿ

ಕಾರ್ಯಚಟುವಟಿಕೆ ವೀಕ್ಷಣೆ, ಮಂಡ್ಯದಲ್ಲೂ ಸಂಸ್ಥೆ ಆರಂಭಕ್ಕೆ ಸಲಹೆ



ಮೈಸೂರು, ಮೇ 27(ಆರ್‌ಕೆ)– ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH)ಗೆ ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಇಂದು ಭೇಟಿ ನೀಡಿದ್ದರು.

ಮಧ್ಯಾಹ್ನ 12.30 ಗಂಟೆಗೆ ಆಗಮಿಸಿದ ಅವರು, ಸಂಸ್ಥೆಯ ಆವರಣದಲ್ಲಿರುವ ವಿಶೇಷ ಶಿಕ್ಷಣ ವಿಭಾಗಕ್ಕೆ ತೆರಳಿ ವಿಶೇಷ ಮಕ್ಕಳಿಗೆ ಚಿಕಿತ್ಸೆ, ತರಬೇತಿ ಕುರಿತು ಮಾಹಿತಿ ಪಡೆದರಲ್ಲದೆ, ವಿಶೇಷ ಚೇತನ ಹಾಗೂ ಮಾತು ಬಾರದ ಮಕ್ಕಳ ಚಲನ–ವಲನಗಳನ್ನು ವೀಕ್ಷಿಸಿದರು.

ನಂತರ ಚಿಕಿತ್ಸಾ ಸೇವಾ ವಿಭಾಗದ ಕಾರ್ಯವೈಖರಿ, ರೋಗಿಗಳಿಗೆ ನೀಡುತ್ತಿರುವ ವಿವಿಧ ಥೆರಪಿ, ಚಿಕಿತ್ಸಾ ವಿಧಾನಗಳು, ನೂತನ ತಂತ್ರಜ್ಞಾನದ ವೈದ್ಯಕೀಯ ಉಪಕರಣಗಳ ಬಳಕೆ ಕುರಿತು ವಿವರ ಪಡೆದುಕೊಂಡ ಸುಮಲತಾ ಅವರಿಗೆ ಬೋರ್ಡ್ ಮೀಟಿಂಗ್ ಹಾಲ್‌ನಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಪ್ರಾಧ್ಯಾಪಕರು ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಮಾಹಿತಿ ನೀಡಿದರು.

ಎಲ್ಲಾ ವಿಭಾಗಗಳ ಸೇವೆಯಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ ಎಂಬುದು ಮನವರಿಕೆಯಾದ ಕಾರಣ, ಮಂಡ್ಯ ನಗರದಲ್ಲೂ ವಾಕ್ ಮತ್ತು ಶ್ರವಣ ಸಂಸ್ಥೆಯ ಶಾಖೆಯನ್ನು ತೆರೆದಲ್ಲಿ ವಿಶೇಷ ಚೇತನ ಮಕ್ಕಳು ಹಾಗೂ ರೋಗಿಗಳಿಗೆ ಅಗತ್ಯ ವೈದ್ಯಕೀಯ ಸೇವೆ ತಲುಪಿಸಬಹುದು. ಈ ಬಗ್ಗೆ ಪ್ರಯತ್ನ ಮಾಡಬೇಕೆಂದು ಅವರು ಇದೇ ಸಂದರ್ಭ ಸಲಹೆ ನೀಡಿದರು.

ವಾಕ್ ಮತ್ತು ಶ್ರವಣ ದೋಷವಿರುವ ಹಲವು ಮಂದಿ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾಗಿದೆ ಆದರೆ, ಎಲ್ಲಾ ಮೂಲಭೂತ ಸೌಕರ್ಯ ಹೊಂದಿರುವ ಆಯಿಷ್ ಸಂಸ್ಥೆ ಶಾಖೆಯನ್ನೇ ತೆರೆದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ಸಂಸದರು ಅಭಿಪ್ರಾಯಪಟ್ಟರು. ಪ್ರಾಧ್ಯಾಪಕರಾದ ಡಾ. ಪಿ. ಮಂಜುಳಾ, ಡಾ. ಆಶಿಸ್ ಕೆ ಅಬ್ರಾಹಂ, ಡಾ. ಸಂದೀಪ್, ಡಾ. ಸಂಗೀತಾ ಹಾಗೂ ಇತರರು ಸುಮಲತಾ ಅಂಬರೀಶ್ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸಂಸ್ಥೆಯ ವಿಭಾಗಗಳನ್ನು ಪರಿಚಯಿಸಿದರು.

ಅಪ್ರಾಪ್ತ ಬಾಲಕಿ ವಿವಾಹ: ಆಟೋ ಚಾಲಕನ ವಿರುದ್ಧ ಕೇಸ್

ಬೈಲಕುಪ್ಪೆ, ಮೇ 27– ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ, ಮದುವೆ ಆದ ಆರೋಪದ ಮೇಲೆ ಆಟೋ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ. ಪಿರಿಯಾಪಟ್ಟಣ ತಾಲೂಕು ತಿರುಮಲಾಪುರ ಗ್ರಾಮದ ಆಟೋ ಚಾಲಕ ಮಹೇಶ್ ಆರೋಪಕ್ಕೆ ಗುರಿಯಾದವನಾಗಿದ್ದು, ಈತ 7ನೇ ತರಗತಿ ವಿದ್ಯಾರ್ಥಿನಿಯನ್ನು ಅಪಹರಿಸಿ ಮದುವೆಯಾಗಿದ್ದು, ಈ ವಿಚಾರ ತಿಳಿದ ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿರುವ ಸರ್ಕಾರಿ ಬಾಲ ಮಂದಿರದ ಅಧೀಕ್ಷಕಿ ಶ್ರೀಮತಿ ಶಾರದಾದೇವಿ ಅವರು ಬಾಲಕಿ ಮತ್ತು ಆಕೆಯ ತಾಯಿಯ ಹೇಳಿಕೆ ಪಡೆದು ಬೈಲಕುಪ್ಪೆ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವಿವರ: 12 ವರ್ಷದ ವಿದ್ಯಾರ್ಥಿನಿ ತಂದೆಯನ್ನು ಕಳೆದುಕೊಂಡಿದ್ದು, ತಾಯಿಯೊಂದಿಗೆ ತಾತನ ಮನೆಯಲ್ಲಿ ವಾಸವಿದ್ದಾಳೆ. ಕಳೆದ ಏಪ್ರಿಲ್ 15ರಂದು ಬೆಳಗ್ಗೆ ಆಕೆಗೆ ಪರಿಚಯವಿರುವ ಆಟೋ ಚಾಲಕ ಮಹೇಶ್, ಕುಶಾಲನಗರದಲ್ಲಿ ಕೆಲಸ ಮಾಡುವ ಬಾಲಕಿಯ ತಾಯಿಗೆ ಅಪಘಾತವಾಗಿದೆ ಎಂದು ತಿಳಿಸಿ ಆಕೆಯನ್ನು ತನ್ನ ಆಟೋದಲ್ಲಿ ಕರೆದೊಯ್ದಿದ್ದಾನೆ. ಬೈಲಕುಪ್ಪೆಗೆ ಬಂದಾಗ ಆಟೋ ರಿಪೇರಿಯಾಗಿದೆ ಎಂದು ತಿಳಿಸಿ ಕಾರಿನಲ್ಲಿ ಆಕೆಯನ್ನು ಹಾರಂಗಿ ರಸ್ತೆಯಲ್ಲಿರುವ ಶಿವ ಪಾರ್ವತಿ ದೇವಸ್ಥಾನಕ್ಕೆ ಕರೆದೊಯ್ದು ಬಲವಂತವಾಗಿ ತಾಳಿ ಕಟ್ಟುವ ಮೂಲಕ ಮದುವೆಯಾಗಿದ್ದಾನೆ. ಬಾಲಕಿಯು ತಾಳಿಯನ್ನು ಕಿತ್ತೆಸೆದಾಗ ಆಕೆಯ ಮೇಲೆ ಹಲ್ಲೆ ನಡೆಸಿ ಮತ್ತೆ ತಾಳಿ ಕಟ್ಟಿದ್ದಲ್ಲದೇ ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ತಾಯಿಯನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ಇದರ ಬಗ್ಗೆ ಮಾಹಿತಿ ಪಡೆದ ಸರ್ಕಾರಿ ಬಾಲ ಮಂದಿರದ ಅಧೀಕ್ಷಕಿ ಶ್ರೀಮತಿ ಶಾರದಾದೇವಿ ಮೇ 23ರಂದು ಬಾಲಕಿ ಮತ್ತು ಆಕೆಯ ತಾಯಿಯನ್ನು ಕರೆಸಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಆಪ್ತ ಸಮಾಲೋಚಕರ ಮೂಲಕ ಹೇಳಿಕೆ ಪಡೆದು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಬೈಲಕುಪ್ಪೆ ಠಾಣೆ ಪೊಲೀಸರು ತಲೆಮರೆಸಿಕೊಂಡಿರುವ ಆಟೋ ಚಾಲಕ ಮಹೇಶ್‌ಗಾಗಿ ಹುಡುಕಾಟ ನಡೆಸಿದ್ದಾರೆ.

ಟಿಪ್ಪರ್ ಖರೀದಿಸಿ ವಂಚನೆ: ಗುತ್ತಿಗೆದಾರನಿಂದ ಪೊಲೀಸರಿಗೆ ದೂರು

ಮೈಸೂರು, ಮೇ 27– ಗುತ್ತಿಗೆದಾರನಿಂದ ಟಿಪ್ಪರ್‌ಗಳನ್ನು ಖರೀದಿಸಿ ಮೋಸ ಮಾಡಿರುವ ಬಗ್ಗೆ ಮೈಸೂರಿನ ಲಕ್ಷ್ಮೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಬೆಮೆಲ್ ಲೇಔಟ್ ನಿವಾಸಿ ಗುತ್ತಿಗೆದಾರ ಶ್ರೀನಿವಾಸ್ ಚಿನ್ನಂ ಅವರು ಹಿಂದೂಜಾ ಫೈನಾನ್ಸ್ ಕಂಪನಿಯಿಂದ ಸಾಲ ಪಡೆದು ಖರೀದಿಸಿದ್ದ 4 ಟಿಪ್ಪರ್‌ಗಳನ್ನು ಬಳ್ಳಾರಿಯ ಅಬ್ದುಲ್ ರೆಹಮಾನ್ ಎಂಬಾತನಿಗೆ ಮಾರಾಟ ಮಾಡುವುದರ ಬಗ್ಗೆ ಮಾತುಕತೆ ನಡೆಸಿದ್ದಾರೆ. 4 ಟಿಪ್ಪರ್‌ಗಳನ್ನು 52.50 ಲಕ್ಷ ರೂ.ಗಳಿಗೆ ಖರೀದಿ ಮಾಡಲು ಅಬ್ದುಲ್ ರೆಹಮಾನ್ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದು, ಹಿಂದೂಜಾ ಫೈನಾನ್ಸ್ ಕಂಪನಿಯ ಸಾಲ 23 ಲಕ್ಷ ರೂ.ಗಳನ್ನು ಆತನೇ ಪಾವತಿಸಿ ಉಳಿದ 29.50 ಲಕ್ಷ ರೂ.ಗಳನ್ನು ಶ್ರೀನಿವಾಸ್ ಅವರಿಗೆ ನೀಡುವುದಾಗಿ ಮಾತುಕತೆ ನಡೆದಿದೆ.

ಶ್ರೀನಿವಾಸ್ ಅವರು ತಮ್ಮ 4 ಟಿಪ್ಪರ್‌ಗಳನ್ನು 2021ರ ಆಗಸ್ಟ್ 20 ರಂದು ಅಬ್ದುಲ್ ರೆಹಮಾನ್‌ಗೆ ನೀಡಿದ್ದು, ಆಗ ಅವರು 8.15 ಲಕ್ಷ ರೂ.ಗಳನ್ನು ಶ್ರೀನಿವಾಸ್ ಖಾತೆಗೆ ವರ್ಗಾವಣೆ ಮಾಡಿ ವಾಹನಗಳ ಸಿಸಿ ಬಂದ ನಂತರ 21.35 ಲಕ್ಷ ರೂ. ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಶ್ರೀನಿವಾಸ್ ಗಮನಕ್ಕೆ ಬಾರದೇ ಅವರ ಸಹಿಯನ್ನು ಪೋರ್ಜರಿ ಮಾಡಿ ಅಬ್ದುಲ್ ರೆಹಮಾನ್ ಹೆಸರಿಗೆ 2 ಹಾಗೂ ಸರ್ದಾರ್ ಅಯ್ಯುಬ್ ಹೆಸರಿಗೆ ಮತ್ತೆರಡು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಇದಕ್ಕೆ ಬಜಾಜ್ ಫೈನಾನ್ಸ್ ಕಂಪನಿಯ ಮ್ಯಾನೇಜರ್ ಸಹಕರಿಸಿದ್ದಾರೆ ಹಾಗೂ ಬಳ್ಳಾರಿಯ ಆರ್‌ಟಿಓ ಏಜೆಂಟ್ ಕೆ.ಎಸ್.ಮಂಜುನಾಥ್ ಎಂಬಾತ ವಾಹನಗಳನ್ನು ತಮ್ಮ ಹೆಸರಿನಿಂದ ಅಬ್ದುಲ್ ರೆಹಮಾನ್ ಮತ್ತು ಸರ್ದಾರ್ ಅಯ್ಯುಬ್ ಹೆಸರಿಗೆ ವರ್ಗಾವಣೆ ಮಾಡಿದ್ದಾನೆ ಎಂದು ಶ್ರೀನಿವಾಸ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಲಕ್ಷ್ಮೀಪುರ ಠಾಣೆ ಪೊಲೀಸರು ಬಳ್ಳಾರಿಯ ಅಬ್ದುಲ್ ರೆಹಮಾನ್, ಸರ್ದಾರ್ ಅಯ್ಯುಬ್, ಕೆ.ಎಸ್.ಮಂಜುನಾಥ್ ಮತ್ತು ಹಿಂದೂಜಾ ಫೈನಾನ್ಸ್ ಕಂಪನಿಯ ಮ್ಯಾನೇಜರ್ ಮಂಜುನಾಥ್ ವಿರುದ್ಧ ಭಾರತೀಯ ದಂಡ ಸಂಹಿತೆ 406, 417, 420, 471, 34ರಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.


ಜೂ.1ರಿಂದ 21ರವರೆಗೆ ಕುಡಿತ ಬಿಡಿಸುವ ಉಚಿತ ಶಿಬಿರ

ಮೈಸೂರು, ಮೇ 27(ಆರ್‌ಕೆಬಿ)– ಬಸವ ಮಾರ್ಗ ಫೌಂಡೇಷನ್ ವತಿಯಿಂದ ಜೂ.1ರಿಂದ 21 ರವರೆಗೆ ಕುಡಿತ ಬಿಡಿಸುವ ಉಚಿತ ಶಿಬಿರ ಆಯೋಜಿಸಲಾಗಿದೆ.

ಫೌಂಡೇಷನ್‌ನ ಬಸವರಾಜು ಅವರು ಶುಕ್ರವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಬಿರದಲ್ಲಿ ಕುಡಿತ ಬಿಡಿಸುವ ವೇಳೆ ಗಿಡ ನೆಡುವುದು ಸೇರಿದಂತೆ ಹಲವು ಸಮಾಜಮುಖಿ ಕೆಲಸದಲ್ಲಿ ತೊಡಗಿಸುವರೊಂದಿಗೆ ಹೊರಗೆ ಪ್ರವಾಸವನ್ನು ಸಹ ಏರ್ಪಡಿಸಿ, ಮನ ಪರಿವರ್ತನೆಗೊಳಿಸಲಾಗುವುದು ಎಂದರು. ಮೊದಲು ಬಂದ 50 ಜನರಿಗೆ ಆದ್ಯತೆ ನೀಡಲಾಗುವುದು. ಈ ವೇಳೆ ಪೌರ ಕಾರ್ಮಿಕರಿಗೆ ವಿಶೇಷ ಸೌಲಭ್ಯವಿದ್ದು, ಯಾವುದೇ ಶುಲ್ಕ ಇಲ್ಲ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ.8553111999 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಮಧು, ಯೋಗೇಶ್, ಪವನ್ ಉಪಸ್ಥಿತರಿದ್ದರು.


ಆಯತಪ್ಪಿ ಬಿದ್ದು ವ್ಯಕ್ತಿ ಸಾವು

ಮಂಡ್ಯ, ಮೇ 27(ಮೋಹನ್‌ರಾಜ್)– ಬೈಕ್‌ನಿಂದ ಆಯತಪ್ಪಿ ಬಿದ್ದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೇವಿನಹಳ್ಳಿ ಗ್ರಾಮದ ಬಳಿ ಗುರುವಾರ ರಾತ್ರಿ ನಡೆದಿದೆ. ಮಾಜಿ ಸಚಿವ ದಿ.ಅಂಬರೀಷ್ ಬೆಂಬಲಿಗ ಅರೆಕೆರೆ ಮಂಜು(56) ಸಾವನ್ನಪ್ಪಿದವರು. ಈತ ಬೈಕ್‌ನಲ್ಲಿ ಮಂಡ್ಯದಿಂದ ಅರಕೆರೆಗೆ ತೆರಳುತ್ತಿದ್ದ ವೇಳೆ ಬೇವಿನಹಳ್ಳಿ ಬಳಿ ಆಯತಪ್ಪಿ ಬಿದ್ದು, ತೀವ್ರ ಗಾಯಗೊಂಡು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಅಂಬರೀಷ್ ಬೆಂಬಲಿಗರಾಗಿ ಗುರುತಿಸಿಕೊಂಡಿದ್ದ ಮಂಜು ನಿಧನಕ್ಕೆ ಸಂಸದೆ ಸುಮಲತಾ ಅಂಬರೀಷ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ. ಘಟನೆ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಜೂನ್ 25ರಂದು ರಾಷ್ಟ್ರೀಯ ಲೋಕ ಅದಾಲತ್

ಮೈಸೂರು ಜಿಲ್ಲೆಯಲ್ಲಿ ಸುಮಾರು 22,000 ಪ್ರಕರಣ ಇತ್ಯರ್ಥ ಸಾಧ್ಯತೆ



ಮೈಸೂರು, ಮೇ 27(ಆರ್‌ಕೆ)– ಜೂನ್ 25ರಂದು ರಾಜ್ಯಾದ್ಯಂತ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್. ರಘುನಾಥ ತಿಳಿಸಿದ್ದಾರೆ.

ಮೈಸೂರಿನ ಕಟ್ಟೆಮಳಲವಾಡಿಯಲ್ಲಿರುವ ನೂತನ ನ್ಯಾಯಾಲಯಗಳ ಕಟ್ಟಡದ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜಿಲ್ಲೆಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ 22,000 ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಲು ಉದ್ದೇಶಿಸಲಾಗಿದೆ ಎಂದರು.

ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ, ಕಾರ್ಮಿಕ ವ್ಯಾಜ್ಯ, ಚೆಕ್ ಬೌನ್ಸ್, ಮೋಟಾರು ಅಪಘಾತ ಪರಿಹಾರ, ಭೂಸ್ವಾಧೀನ, ವೇತನ, ಭತ್ಯೆ, ರಾಜಿಯಾಗಬಲ್ಲ ಸಿವಿಲ್ ಪ್ರಕರಣಗಳನ್ನು ಉಭಯತ್ರರ ರಾಜೀ ಸಂಧಾನದ ಮೂಲಕ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗುವುದು ಎಂದು ಅವರು ತಿಳಿಸಿದರು.

ನ್ಯಾಯಾಲಯದಲ್ಲಿ ದಾಖಲಾಗದಿರುವ ಪ್ರಕರಣಗಳನ್ನೂ ಬಗೆಹರಿಸಿಕೊಳ್ಳಲು ಅವಕಾಶವಿದ್ದು, ಸಂಧಾನಕಾರರು ಸೂಚಿಸುವ ಪರಿಹಾರ ಒಪ್ಪಿಗೆಯಾದಲ್ಲಿ ಮಾತ್ರ ರಾಜೀ ಮಾಡಿಸಲಾಗುವುದು. ಕಡಿಮೆ ಖರ್ಚಿನಲ್ಲಿ ಶೀಘ್ರ, ತೀರ್ಮಾನವಾಗುವುದರಿಂದ ಸಾರ್ವಜನಿಕರು ಲೋಕ ಅದಾಲತ್ ಪ್ರಯೋಜನ ಪಡೆದುಕೊಳ್ಳಬೇಕೆಂದು ನ್ಯಾಯಾಧೀಶರು ತಿಳಿ ಹೇಳಿದರು.

ಕಳೆದ ಬಾರಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 53 ವರ್ಷದ ಹಳೇ ಕೇಸು ಸೇರಿ ಒಟ್ಟು 54,000 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಗಿತ್ತು ಹೆಚ್ಚಿನ ಮಾಹಿತಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಟೋಲ್ ಫ್ರೀ ನಂಬರ್ 1800–425–0131ಗೆ ಕರೆ ಮಾಡಬಹುದು ಎಂದು ರಘುನಾಥ್ ತಿಳಿಸಿದರು.

ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ ಹಾಗೂ ಕಾರ್ಯದರ್ಶಿ ಎಸ್. ಉಮೇಶ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

‘ಮ್ಯಾಗಿ’ಯಿಂದ ಮುಕ್ತಿಗಾಗಿ ವಿಚ್ಛೇದನ!

ಮೈಸೂರು, ಮೇ 27(ಆರ್‌ಕೆ)– ಹೆಂಡತಿ ಕೇವಲ ಮ್ಯಾಗಿ ನೂಡಲ್ ಮಾಡಿ ಬಡಿಸುತ್ತಿದ್ದಳೆಂಬ ಕಾರಣಕ್ಕೆ ಗಂಡ ವಿಚ್ಛೇದನ ಪಡೆದಿದ್ದನೆಂಬ ಪ್ರಸಂಗವನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್. ರಘುನಾಥ್ ಇಂದಿಲ್ಲಿ ಬಹಿರಂಗಪಡಿಸಿದರು.

ತಾವು ಬಳ್ಳಾರಿ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ದಿನದ ಮೂರೂ ಹೊತ್ತೂ ಹೆಂಡತಿ ಮ್ಯಾಗಿ ಮಾಡಿ ಹಾಕುತ್ತಿದ್ದಳೆಂದು ಆರೋಪಿಸಿ ವ್ಯಕ್ತಿ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ. ಅದನ್ನು ಬಿಟ್ಟು ಬೇರೆ ಅಡುಗೆ ಮಾಡುತ್ತಿಲ್ಲ. ಅದನ್ನೇ ತಿನ್ನಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನನಗೆ ಅದರಿಂದ ಮುಕ್ತಿ ಕೊಡಿಸಿ ಎಂಬುದು ಅವನ ಅಳಲಾಗಿತ್ತು. ಕಡೆಗೆ ವಿಚ್ಛೇದನವೂ ಆಯಿತು ಎಂದು ಹಳೇ ‘ಮ್ಯಾಗಿ’ ಕೇಸನ್ನು ಸ್ಮರಿಸಿಕೊಂಡರು.


ಕೌಟುಂಬಿಕ ನ್ಯಾಯಾಲಯಗಳಲ್ಲಿ 2,500 ಪ್ರಕರಣಗಳು ಬಾಕಿ ಉಳಿದಿದ್ದು, ಕಳೆದ ಅದಾಲತ್‌ನಲ್ಲಿ 32 ಜೋಡಿ ಒಂದಾಗಿ ಸಹಬಾಳ್ವೆ ನಡೆಸಲು ಒಪ್ಪಿದ್ದರು. ಅಂತಹ ಪ್ರಕರಣಗಳನ್ನೂ ರಾಜೀ ಸೂತ್ರದ ಮೂಲಕ ಅದಾಲತ್‌ನಲ್ಲಿ ಬಗೆಹರಿಸಿಕೊಂಡು ಸಹಬಾಳ್ವೆ ನಡೆಸಲು ಅವಕಾಶವಿದೆ ಎಂದು ಅವರು ತಿಳಿಸಿದರು.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೈ.ವಿ.ರವಿಶಂಕರ್ ಪರವಾಗಿ ಬಿಜೆಪಿ ಮುಖಂಡ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನಿಕಟಪೂರ್ವ ಅಧ್ಯಕ್ಷ ರಘು ಆರ್. ಕೌಟಿಲ್ಯ ಶುಕ್ರವಾರ ಹುಣಸೂರು ಪಟ್ಟಣದ ವಿವಿಧ ಸರ್ಕಾರಿ ಕಚೇರಿಗಳು ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಮತಯಾಚನೆ ಮಾಡಿದರು. ಈ ವೇಳೆ ಪಕ್ಷದ ಸ್ಥಳೀಯ ಪ್ರಮುಖರಾದ ಗಣೇಶ್, ನಾಗಣ್ಣಗೌಡ, ಚೌವ್ಹಾಣ್, ಕದಂ, ಶ್ರೀನಿವಾಸ್, ರಮೇಶ್ ಸೇರಿದಂತೆ ಹಲವು ಉಪಸ್ಥಿತರಿದ್ದರು.

ಕೋಡಿಹಳ್ಳಿ ಚಂದ್ರಶೇಖರ್ ಹಸಿರು ಟವೆಲ್ ತೆಗೆಯದಿದ್ದರೆ ರೈತರೇ ತೆಗೆಯುತ್ತಾರೆ

ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಕೆ


ಬಡಗಲಪುರ ನಾಗೇಂದ್ರ

ಮೈಸೂರು, ಮೇ 27(ಆರ್‌ಕೆಬಿ)– ಡೀಲ್ ನಡೆಸಿ ಸಿಕ್ಕಿ ಹಾಕಿಕೊಂಡಿರುವ ಪ್ರೊ.ನಂಜುಂಡಸ್ವಾಮಿ ಅವರು ಕಟ್ಟಿ ಬೆಳೆಸಿದ ರೈತಸಂಘದ ಹೆಸರಿಗೆ ಕಳಂಕ ತಂದಿರುವ ಕೋಡಿಹಳ್ಳಿ ಚಂದ್ರಶೇಖರ್ ಅವರು ತಕ್ಷಣ ತಮ್ಮ ಹಸಿರು ಟವೆಲ್ಲನ್ನು ತೆಗೆಯದಿದ್ದರೆ ರೈತರೇ ರೊಚ್ಚಿಗೆದ್ದು ಟವೆಲ್ ತೆಗೆಸಬೇಕಾಗುತ್ತದೆ ಎಂದು ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರಿಗೆ ಸಂಸ್ಥೆ ಮುಷ್ಕರವೊಂದಕ್ಕೆ ಸಂಬಂಧಿಸಿದಂತೆ ಕೋಡಿಹಳ್ಳಿ ಚಂದ್ರಶೇಖರ್ ಡೀಲ್ ಮಾಡಲು ಹೋಗಿ ಸಿಕ್ಕಿ ಬಿದ್ದಿರುವ ಪ್ರಕರಣವೇ ಇದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಟಿವಿ ಮಾಧ್ಯಮಗಳು ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರಿಂದಾಗಿ ಕೋಡಿಹಳ್ಳಿ ಚಂದ್ರಶೇಖರ್ ಅವರು ದಿಢೀರನೆ ಜನಪ್ರಿಯರಾದರು. ಹೀಗಾಗಿ ಅವರ ಹಿಂದೆ ಮುಗ್ಧ ರೈತರು ಹೋದರು. ಈಗ ಕೊಡಿಹಳ್ಳಿ ಚಂದ್ರಶೇಖರ್ ಬಣ್ಣ ಬಯಲಾಗಿದೆ. ಆದ್ದರಿಂದ ಅವರ ಜೊತೆ ಇದ್ದ ಮುಗ್ಧ ರೈತರು ಪ್ರೊ.ನಂಜುಂಡಸ್ವಾಮಿ ಅವರು ಕಟ್ಟಿ ಬೆಳೆಸಿದ ನಿಜವಾದ ರೈತಸಂಘಕ್ಕೆ ಬಂದರೆ ಅವರೆಲ್ಲರಿಗೂ ಸ್ವಾಗತಿಸಲಾಗುವುದು ಎಂದು ಮುಕ್ತ ಆಹ್ವಾನ ನೀಡಿದರು.


ನಮ್ಮ ಸಂಘಟನೆಯಲ್ಲಿ ಸಂವಿಧಾನವಿದೆ. ಪಕ್ಷದ ಪದಾಧಿಕಾರಿಗಳು, ತಾಲೂಕು ಅಧ್ಯಕ್ಷರು ಪ್ರತಿ ವರ್ಷ ತಮ್ಮ ಆಸ್ತಿ ಘೋಷಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಪಕ್ಷಕ್ಕೆ ಸೇರಿಸಿಕೊಳ್ಳುವ ವೇಳೆ ಜಾತೀಯ ಸಂಘಟನೆಯಲ್ಲಿಲ್ಲದವರು, ಮಹಿಳೆಯರಿಗೆ ಗೌರವ ನೀಡುವವರಿಗೆ ಆದ್ಯತೆ ನೀಡಲಾಗುತ್ತಿದೆ. ಸಮಾಜಕ್ಕೆ ಪೂರಕವಾಗಿ ದುಡಿಯುವವರಿಗೆ ಅವಕಾಶ ನೀಡಲಾಗುತ್ತಿದೆ ಎಂದು ಸಹ ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರೈತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮತ್ತು ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಸರಗೂರು ನಟರಾಜ್, ಸಿಂಗ್ರೇಗೌಡ ಉಪಸ್ಥಿತರಿದ್ದರು.

ನಿವೃತ್ತ ಪೊಲೀಸ್ ಅಧಿಕಾರಿ ಎಟಿಎಂನಲ್ಲಿ ಹಣ ಡ್ರಾ ಮಾಡುವಾಗ ಖದೀಮನಿಂದ ವಂಚನೆ

ವಂಚಕನಿಂದ 20 ಸಾವಿರ ಡ್ರಾ

ಕೆ.ಆರ್.ನಗರ, ಮೇ 27– ಸಿಎಆರ್‌ನ ನಿವೃತ್ತ ಎಎಸ್‌ಐ ಒಬ್ಬರ ಎಟಿಎಂ ಕಾರ್ಡ್ ಅನ್ನು ಬದಲಾಯಿಸಿ 20 ಸಾವಿರ ರೂ. ಡ್ರಾ ಮಾಡಿರುವ ಘಟನೆ ಪ್ರಕರಣ ದಾಖಲಾಗಿದೆ. ಕೆ.ಆರ್.ನಗರದ ಕುವೆಂಪು ಬಡಾವಣೆ ನಿವಾಸಿ ನಿವೃತ್ತ ಎಎಸ್‌ಐ ಹೆಚ್.ಟಿ.ತಿಮ್ಮಣ್ಣಶೆಟ್ಟಿ (70) ಮೇ 4 ರಂದು ಬೆಳಗ್ಗೆ ಕೆ.ಆರ್.ನಗರ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಒಳಗಿರುವ ಕರ್ನಾಟಕ ಬ್ಯಾಂಕ್ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದಾರೆ. ಎಟಿಎಂ ಯಂತ್ರಕ್ಕೆ ಅವರು ಕಾರ್ಡ್ ಹಾಕಿದಾಗ ಅವರ ಹಿಂಬದಿ ನಿಂತಿದ್ದ ವ್ಯಕ್ತಿ ಎಟಿಎಂನಲ್ಲಿ ಹಣ ಬರುತ್ತಿಲ್ಲ ಎಂದು ತಿಳಿಸಿ ಅವರ ಕಾರ್ಡ್ ಅನ್ನು ಅವನೇ ಯಂತ್ರದಿಂದ ತೆಗೆದು ಕೊಟ್ಟಿದ್ದಾನೆ. ನಂತರ ತಿಮ್ಮಣ್ಣಶೆಟ್ಟಿ ಅವರು ಮೇ 26 ರಂದು ಹಣ ಡ್ರಾ ಮಾಡಲು ಎಟಿಎಂಗೆ ಹೋದಾಗ ಹಣ ಬಾರದ ಕಾರಣ ಅವರು ಖಾತೆ ಹೊಂದಿರುವ ಎಸ್‌ಬಿಐ ಸಾಲಿಗ್ರಾಮ ಶಾಖೆಗೆ ತೆರಳಿ ವಿಚಾರಿಸಿದಾಗ ಅವರ ಬಳಿ ಇದ್ದ ಕಾರ್ಡ್ ಅವರದಲ್ಲ ಹಾಗೂ ಮೇ 4ರಂದು 20 ಸಾವಿರ ರೂ.ಗಳನ್ನು ಈ ಕಾರ್ಡ್‌ನಿಂದ ಡ್ರಾ ಮಾಡಲಾಗಿದೆ ಎಂದು ಬ್ಯಾಂಕ್ ಸಿಬ್ಬಂದಿ ತಿಳಿಸಿದ್ದಾರೆ. ತಿಮ್ಮಣ್ಣಶೆಟ್ಟಿ ಹಣ ಡ್ರಾ ಮಾಡಲು ಹೋದಾಗ ಹಿಂದೆ ನಿಂತಿದ್ದ ವ್ಯಕ್ತಿ ಅವರ ಪಿನ್ ಸಂಖ್ಯೆಯನ್ನು ನೋಡಿಕೊಂಡು ಎಟಿಎಂನಿಂದ ಅವರ ಕಾರ್ಡ್ ಅನ್ನು ಹೊರ ತೆಗೆದು ಬೇರೆ ಕಾರ್ಡ್ ಕೊಟ್ಟ ನಂತರ ತಿಮ್ಮಣ್ಣಶೆಟ್ಟಿ ಅವರ ಕಾರ್ಡ್‌ನಿಂದ ಹಣ ಡ್ರಾ ಮಾಡಿದ್ದಾನೆ ಎಂದು ಕೆ.ಆರ್.ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.05.2022 ಶನಿವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 07.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ಭರಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ದತ್ತ ಹ್ಯೂಮನ್ ಸರ್ವೀಸಸ್ ಸ್ವಯಂ ಸೇವಕರಿಂದ ಪಥಸಂಚಲನ, ಬೆಳಗ್ಗೆ 9ಕ್ಕೆ ಶ್ರೀಚಕ್ರ ಪೂಜೆ, ಸುದರ್ಶನ ಹೋಮ, ಬೆಳಗ್ಗೆ 9.45ಕ್ಕೆ ದಿವ್ಯಾಂಗರಿಗೆ, ಆರ್ಥಿಕವಾಗಿ ಹಿಂದುಳಿದವಿಗೆ ವ್ಹೀಲ್‌ಚೇರ್, ಹೊಲಿಗೆ ಯಂತ್ರ ವಿತರಣೆ, ಬೆಳಗ್ಗೆ 10ಕ್ಕೆ ಅಂತರರಾಷ್ಟ್ರೀಯ ದತ್ತಜ್ಞಾನ ಬೋಧ ಸಭೆ ಮತ್ತು ದತ್ತ ಯೋಗ ಕೇಂದ್ರಗಳ ಸಮ್ಮೇಳನ, ಸಾನ್ನಿಧ್ಯ : ಶ್ರೀವಿಶ್ವವಲ್ಲಭತೀರ್ಥ ಶ್ರೀಪಾದರು, ಸೋದೆ ವಾದಿರಾಜ ಮಠ, ಮ. 2ಕ್ಕೆ 25ನೇ ವಾರ್ಷಿಕ ಭಜನೆ ಸ್ಪರ್ಧೆ, ಸಂಜೆ 6.30ಕ್ಕೆ ಸಂಗೀತ ಕಾರ್ಯಕ್ರಮ : 'ನಾದ ಸಂಗಮ'– ಪಂಡಿತ್ ವಿಶ್ವಮೋಹನ್ ಭಟ್ (ಮೋಹನ ವೀಣೆ), ಡಾ. ಮೈಸೂರು ಮಂಜುನಾಥ್ (ಪಿಟೀಲು), ವಿದ್ವಾನ್ ಫಬ್ರಿಜಿಯೊ ಕಸೋಲ್ (ಸ್ಯಾಕ್ಸೋಫೋನ್), ವಿದ್ವಾನ್ ಬ್ರೈನ್ ಸೈಲಸ್ (ಪಿಯಾನೋ), ಡಾ. ಪತ್ರಿ ಸತೀಶ್ ಕುಮಾರ್ (ಮೃದಂಗ), ವಿದ್ವಾನ್ ಹಿಮಾಂಶು ಮಹಂತ್ (ತಬಲ), ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸ್ :** ಪ್ರತಿಜ್ಞಾವಿಧಿ ಮತ್ತು ಪದವಿ ದಿನಾಚರಣೆ, ಸಾನ್ನಿಧ್ಯ : ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಓ ಡಾ. ಎನ್.ಎಸ್.ರಾಮೇಗೌಡ, ಅಪೋಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಎನ್.ಜಿ. ಭರತೇಶ ರೆಡ್ಡಿ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್, ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ :** ರಾಗಿ–2022, ಮೂಲ ಸೌಕರ್ಯಕ್ಕಾಗಿ ಜಿಯೋಟೆಕ್ನಿಕ್ಸ್‌ನಲ್ಲಿ ಇತ್ತೀಚಿನ ಪ್ರಗತಿಗಳು ಕುರಿತು ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ : ಜಿಯೋಡೈನಾಮಿಕ್ಸ್‌ನ ಪ್ರಿನ್ಸಿಪಲ್ ಇಂಜಿನಿಯರ್ ರವಿಕಿರಣ್ ವೈದ್ಯ, ಪ್ರಕ್ರಿಯೆಗಳ ಬಿಡುಗಡೆ : ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು– ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.00 ರಾಗಲಹರಿ– ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, ರಾಗ–ಹಂಸಾನಂದಿ, ಪ್ರಸ್ತುತಿ – ಜಿ. ಪುಷ್ಪಲತಾ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎಂ.ಎಲ್. ವಸಂತಕುಮಾರಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45ಜನಪದಗೀತೆ–ಪಾರ್ವತಮ್ಮ ಮತ್ತು ತಂಡ, 1.20 ಭಾವಗೀತೆ, 3.35 ಮಕ್ಕಳ ಮಂಟಪ– 'ನಂದಗೋಕುಲ' ಪ್ರಸ್ತುತಿ– ಕೆ.ಬಿ. ಮೀನಾ, 4.30 ಖ್ಯಾತ ಹಿಂದೂಸ್ಥಾನಿ ಗಾಯಕಿ ಗಂಗೂಬಾಯಿ ಹಾನಗಲ್ ಅವರೊಂದಿಗೆ ಜ್ಯೋತ್ಸ್ನಾ ಕಾಮತ್ ಅವರು ನಡೆಸಿದ್ದ ಸಂವಾದ, 6.50ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್–ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ– "ಓಣಿ ಬಾಗಿಲು", ನಿರ್ಮಾಣ– ಪ್ರಭುಸ್ವಾಮಿ ಮಳೀಮಠ್, 9.15 ವಚನ ಚಳುವಳಿಯ ಶ್ರದ್ಧೆ, ಸಾಮರ್ಥ್ಯ, ಮಾತನಾಡುತ್ತಾರೆ ಪವಿತ್ರ ಎಂ., 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಕೆ. ಅಮ್ಮಯ್ಯಪ್ಪನ್ ಮತ್ತು ಕೆ.ಎ. ವೇಲ್ ಮುರಗನ್ – ನಾಗಸ್ವರವಾದನ, 11.00 ಸವಿನೆನಪು

■ **ಕಾವೇರಿ ಬಳಗ, ಹಿರಣ್ಮಯಿ ಪ್ರತಿಷ್ಠಾನ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರಶಸ್ತಿ ಪ್ರದಾನ : ಸಾರ್ವಜನಿಕ ಶಿಕ್ಷಣ ಇಲಾಖೆ ವಿಶ್ರಾಂತ ಉಪನಿರ್ದೇಶಕಿ ಮಂಜುಳಾ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಶೇರ್ತಿ ಸೇವೆ, ಸ್ಥಳ: ಸಭಾ ಆವರಣ, ತಿಲಕ್‌ನಗರ.

■ **ನಾದಬ್ರಹ್ಮ ಸಂಗೀತ ಸಭಾ:** ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ 157ನೇ ಜನ್ಮದಿನೋತ್ಸವದ ಅಂಗವಾಗಿ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಆರ್. ಅಶ್ವತ್ಥ ನಾರಾಯಣ ಅವರಿಂದ ಕರ್ನಾಟ ಶಾಸ್ತ್ರೀಯ ಗಾಯನ, ವಿದ್ವಾನ್ ಬಿ.ಕೆ. ರಘು (ಪಿಟೀಲು), ವಿದ್ವಾನ್ ಬಿ.ಸಿ. ಮಂಜುನಾಥ್ (ಮೃದಂಗ), ವಿದ್ವಾನ್ ಓಂಕಾರ್‌ರಾವ್ (ಘಟಂ), ಸಂಗೀತ ಕಲಾನಿಧಿ ವಾಸುದೇವಾಚಾರ್ಯರ ಸಭಾ ಭವನ, ಲಕ್ಷ್ಮೀಪುರಂ, ಸಮಯ: ಸಂಜೆ 6 ಗಂಟೆಗೆ

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ಅಭಿನವ ಮಂತ್ರಾಲಯ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ' ಯುಗಳ–ಜೋಗುಳ ವಿಶೇಷ ಸಂಗೀತ ಕಾರ್ಯಕ್ರಮ, ವಿದುಷಿ ಚಾರುಮತಿ ರಘುರಾಮನ್ (ವಯೋಲಿನ್), ವಿದ್ವಾನ್ ಸಾಯಿಗಿರಿಧರ್ (ಮೃದಂಗ), ವಿದ್ವಾನ್ ಎಸ್.ಎನ್. ನಾರಾಯಣಮೂರ್ತಿ (ಘಟಂ), ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.

ಎಸಿಬಿ ಹೆಸರಲ್ಲಿ ಅಧಿಕಾರಿಗಳಿಗೆ ವಂಚನೆ: ಇಬ್ಬರ ಬಂಧನ



ಮುರಿಗೆಪ್ಪ



ರಜನಿಕಾಂತ್

ಮೈಸೂರು, ಮೇ 27– ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ಅಧಿಕಾರಿಗಳ ಹೆಸರಿನಲ್ಲಿ ರಾಜ್ಯಾ ದ್ಯಂತ ವಿವಿಧ ಇಲಾಖೆಗಳ ನೌಕರರಿಗೆ ಕರೆ ಮಾಡಿ, ಎಸಿಬಿ ದಾಳಿಯಿಂದ ತಪ್ಪಿಸಿಕೊಳ್ಳಬೇಕೆಂದರೆ ಹಣ ನೀಡಬೇಕೆಂದು ಬೆದರಿಸಿ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದ ಇಬ್ಬರು ವಂಚಕ ರನ್ನು ಎಸಿಬಿ ವಿಶೇಷ ತನಿಖಾ ತಂಡ ಬಂಧಿಸಿದೆ.

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು ಸದಲಗಾ ಗ್ರಾಮದ ಮುರಿಗೆಪ್ಪ ನಿಂಗಪ್ಪ ಕುಂಬಾರ(56) ಮತ್ತು ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಮುಗುಲಿ ಗ್ರಾಮದ ರಜನಿಕಾಂತ್(46) ಬಂಧಿತರಾಗಿದ್ದು, ಎಸಿಬಿ ಅಧಿಕಾರಿಗಳ ಹೆಸರಿನಲ್ಲಿ ಸರ್ಕಾರಿ ನೌಕರರಿಗೆ ಕರೆಮಾಡಿ ಹಣ ಪಡೆಯಲಾಗುತ್ತಿದೆ ಎಂಬ ಆರೋಪದಡಿ ರಾಜ್ಯಾದ್ಯಂತ ಅನೇಕ ಪ್ರಕರಣಗಳು ದಾಖಲಾದ ಹಿನ್ನೆಲೆ ಯಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲು ಬಾಗಲಕೋಟೆ ಜಿಲ್ಲೆ ಎಸ್ಪಿ ಲೋಕೇಶ್ ಜಗಲಾಸರ್ ಹಾಸನ ಜಿಲ್ಲಾ ಎಸ್ಪಿ ಆರ್. ಶ್ರೀನಿವಾಸಗೌಡ, ಎಸಿಬಿ ಉತ್ತರ ವಲಯ ಬೆಳಗಾವಿ ಎಸ್ಪಿ ಬಿ.ಎಸ್. ನೇಮಗೌಡ ಮತ್ತು ಎಸಿಬಿ ದಕ್ಷಿಣ ವಲಯ ಮೈಸೂರು ಎಸ್ಪಿ ವಿ.ಜೆ. ಸಜೀತ ಹಾಗೂ ಸಿಬ್ಬಂದಿಗಳನ್ನೊಳಗೊಂಡ ವಿಶೇಷ ತಂಡವನ್ನು ರಚಿಸಲಾಗಿತ್ತು.

ಈ ತಂಡವು ಇಬ್ಬರು ಆರೋಪಿಗಳನ್ನು ಹಾಸನದಲ್ಲಿ ಶುಕ್ರವಾರ ಬಂಧಿಸಿ ಅವರಿಂದ ಕೆಲವು ಸಿಮ್ ಕಾರ್ಡ್‌ಗಳು ಹಾಗೂ ಮೊಬೈಲ್‌ಗಳನ್ನು ವಶಪಡಿಸಿ ಕೊಂಡಿದೆ. ಆರೋಪಿ ಮುರಿಗೆಪ್ಪ ನಿಂಗಪ್ಪ ಕುಂಬಾರ, ರಾಜ್ಯಾದ್ಯಂತ ಸುಮಾರು 40 ಪ್ರಕರಣಗಳಲ್ಲಿ ಭಾಗಿ ಯಾಗಿದ್ದಾನೆ ಮತ್ತೋರ್ವ ಆರೋಪಿ ರಜನಿಕಾಂತ್ ಆರಕ್ಕೂ ಹೆಚ್ಚು ಇಂತಹ ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ ಇವರಿಬ್ಬರ ವಿರುದ್ಧ ಕೆಲವು ಪ್ರಕರಣಗಳು ತನಿಖಾ ಹಂತದಲ್ಲಿದ್ದು, ಮತ್ತೆ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತ ದಲ್ಲಿದೆ. ಕೆಲವು ಪ್ರಕರಣಗಳಲ್ಲಿ ಈ ಆರೋಪಿಗಳ ಬಂಧನಕ್ಕೆವಾರಂಟ್ ಹೊರಡಿಸಲಾಗಿದೆ ಎಂದು ಎಸಿಬಿ ಪ್ರಕಟಣೆ ತಿಳಿಸಿದೆ.

ಈ ಆರೋಪಿಗಳು ಬೇರೆ ಬೇರೆ ಹೆಸರಿನಲ್ಲಿ ಸಿಮ್ ಕಾರ್ಡ್ ಮತ್ತು ಮೊಬೈಲ್ ಖರೀದಿಸಿ ವಿವಿಧ ಇಲಾಖೆಗಳ ಸರ್ಕಾರಿ ನೌಕರರಿಗೆ ಎಸಿಬಿ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿ ಎಸಿಬಿ ದಾಳಿ ಮಾಡುವುದಾಗಿ ಹೆದರಿಸಿ ವಿವಿಧ ವ್ಯಕ್ತಿಗಳ ಖಾತೆಗಳಿಗೆ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದ್ದು, ವಿವರವಾದ ತನಿಖೆ ಮುಂದುವರೆದಿದೆ. ಅನೇಕ ಸರ್ಕಾರಿ ನೌಕರರಿಗೆ ಈ ಆರೋಪಿಗಳು ವಂಚಿಸಿರುವುದಾಗಿ ವಿಚಾರಣೆ ವೇಳೆ ತಿಳಿಸಿದ್ದು, ಈ ರೀತಿ ವಂಚನೆ ಗೊಳಗಾದ ಸರ್ಕಾರಿ ನೌಕರರು, ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡುವಂತೆ ಎಸಿಬಿ ಮನವಿ ಮಾಡಿದೆ ಅಲ್ಲದೇ ಎಸಿಬಿ ಅಧಿಕಾರಿಗಳ ಹೆಸರಿನಲ್ಲಿ ಹೆದರಿಸಿ ಹಣ ಕೇಳಿ ದೂರವಾಣಿ ಕರೆಗಳು ಬಂದಲ್ಲಿ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡುವಂತೆ ಹಾಗೂ ಎಸಿಬಿ ಅಧಿಕಾರಿಗಳ ಗಮನಕ್ಕೆ ತರುವಂತೆ ಎಸಿಬಿ ಪ್ರಕಟಣೆ ಕೋರಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ



ಮೈಸೂರು, ಮೇ 27– ಮೈಸೂರಿನ ರಾಮಕೃಷ್ಣ ಆಶ್ರಮದ ವಿದ್ಯಾರ್ಥಿಯಾದ ಬಿ. ಮಹದೇವಸ್ವಾಮಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 600 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಚಾಮರಾಜನಗರದ ಆರ್.ಎಂ. ಬಸವರಾಜು, ಎ.ವಿ. ಮಂಜುಳ ದಂಪತಿ ಪುತ್ರ.

ಕಾರ್ಯಪಾಲಕ ಅಭಿಯಂತರರು ಕಛೇರಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಹುಣಸೂರು ವಿಭಾಗ
ಹುಣಸೂರು 571105. ಹುಣಸೂರು ವಿಭಾಗ, ಕೆ.ಎಸ್.ಆರ್.ಟಿ.ಸಿ ಡಿಪೋ ಹಿಂಭಾಗ, ಹುಣಸೂರು
Email: eehunsuru@Kridl.net ಫೋನ್: 08222–297114
ಸಂಖ್ಯೆ: ಕಾಅ:ಕೆಆರ್‌ಐಡಿಎಲ್:ಹುಣಸೂರು:ವಾಹನ:2022–23 ದಿನಾಂಕ: 25.05.2022

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಕಾರ್ಯಪಾಲಕ ಅಭಿಯಂತರರು, ಹುಣಸೂರು ವಿಭಾಗ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ www.eproc.Karnataka.gov.in ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಅಧಿಸೂಚನೆ ಈ ಕೆಳಕಂಡಂತ್ತಿರುತ್ತದೆ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿ ಲಭ್ಯವಿರುವ ದಿನಾಂಕ : 24.05.2022ರಿಂದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.06.2022 ಮತ್ತು ವೇಳೆ ಸಮಯ ಸಂಜೆ 5.00 ಗಂಟೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.06.2022 ಸಮಯ ಬೆಳಗ್ಗೆ 11.30 ಘಂಟೆಗೆ. ಹೆಚ್ಚಿನ ವಿವರಗಳನ್ನು ಕೆಳಕಂಡ ಸಹಿದಾರರ ಕಛೇರಿಯಿಂದ ಕಛೇರಿ ಪ್ರಕಟಿಸಿದ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಹುಣಸೂರು ವಿಭಾಗ, ಕೆ.ಎಸ್.ಆರ್.ಟಿ.ಸಿ. ಡಿಪೋ ಹಿಂಭಾಗ, ಹುಣಸೂರು

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2022–23 ದಿನಾಂಕ: 26–05–2022

ತಿದ್ದುಪಡಿ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಕಾವಲ್ ಯಲಚನಹಳ್ಳಿ ಹಾಗೂ ಗುಂಗ್ರಾಲ್ ಛತ್ರ ಗ್ರಾಮಗಳ ಹಲವು ಸರ್ವೇ ನಂಬರ್‌ಗಳ ಜಮೀನುಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಪ್ರಸ್ತುತ ಲಭ್ಯವಿರುವ ನಿವೇಶನಗಳನ್ನು ಅರ್ಹ ಅರ್ಜಿದಾರರುಗಳಿಗೆ ಹಂಚಿಕೆ ಮಾಡುವ ಸಲುವಾಗಿ ದಿನಾಂಕ: 21–05–2022 ರ ಪ್ರಜಾವಾಣಿ, ಆಂದೋಲನಾ ಮತ್ತು ಮೈಸೂರು ಮಿತ್ರ ದಿನಪತ್ರಿಕೆಗಳಲ್ಲಿ ಇ–ಲಾಟರಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರಿ ಪ್ರಕಟಣೆಯಲ್ಲಿ ಇ–ಲಾಟರಿ ದಿನಾಂಕ: 09–06–2022 ಎಂದು ನಮೂದಾಗಿದ್ದು, ಕಾರಣಾಂತರಗಳಿಂದ **ಇ–ಲಾಟರಿ ಕಾರ್ಯಕ್ರಮವನ್ನು ದಿನಾಂಕ: 24–06–2022ಕ್ಕೆ ಮುಂದೂಡಲಾಗಿರುತ್ತದೆ.** ಉಳಿದಂತೆ ದಿನಾಂಕ: 21–05–2022 ರಂದು ನೀಡಿರುವ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/679/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಏರ್‌ಪೋರ್ಟ್ ರನ್‌ವೇಯಲ್ಲಿ ಕಗ್ಗತ್ತಲು

- ಗುರುವಾರ ರಾತ್ರಿ 7.30ಕ್ಕೆ ಚೆನ್ನೈನಿಂದ ಬಂದ ವಿಮಾನ ಲ್ಯಾಂಡ್ ಆಗದೇ ಕೊಯ ಮತ್ತೂರಲ್ಲಿ ಸೇಫ್ ಲ್ಯಾಂಡ್
- ಅದೇ ವಿಮಾನ ರಾತ್ರಿ 10.30ಕ್ಕೆ ಮೈಸೂರಿಗೆ ಮರಳಿತು: ಗಂಟೆಗಟ್ಟಲೇ ಕಾದು ಕಾದು ಬೇಸತ್ತ ಪ್ರಯಾಣಿಕರು



ಮೈಸೂರು, ಮೇ 27(ಆರ್‌ಕೆ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ವಿದ್ಯುತ್ ಸಂಪರ್ಕ ಕಡಿತವಾಗಿದ್ದರಿಂದ ಸುರಕ್ಷಿತ ಲ್ಯಾಂಡ್ ಸಾಧ್ಯವಾಗದೆ ವಿಮಾನವು ಕೊಯಮತ್ತೂರಿಗೆ ತೆರಳಿ ರಾತ್ರಿ 10.30 ಗಂಟೆಗೆ ಮೈಸೂರಿಗೆ ಮರಳಿದ ಪ್ರಸಂಗ ಗುರುವಾರ ಸಂಭವಿಸಿದೆ.

ಚೆನ್ನೈನಿಂದ ಗುರುವಾರ ರಾತ್ರಿ 7.30 ಗಂಟೆಗೆ ಬಂದ ಇಂಡಿಗೋ ವಿಮಾನವು ರನ್ ವೇಯಲ್ಲಿ ಕಗ್ಗತ್ತಲು ಆವರಿಸಿದ್ದರಿಂದ ಮೈಸೂರು ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಲು ಸಾಧ್ಯವಾಗಲಿಲ್ಲ. ಕೆಲ ಕಾಲ ವಿಮಾನ ನಿಲ್ದಾಣದ ಸುತ್ತ ಹಾರಾಟ ನಡೆಸಿ, ಕಡೆಗೆ ಪೈಲೆಟ್ ಕೊಯಮತ್ತೂರಿಗೆ ತೆರಳಿ ಅಲ್ಲಿ ಸೇಫ್ ಲ್ಯಾಂಡ್ ಮಾಡಿದ್ದಾರೆ. ವಿದ್ಯುತ್ ಸಂಪರ್ಕ ಸಮಸ್ಯೆ ನಿವಾರಣೆ ಮಾಡಿ ರನ್‌ವೇನಲ್ಲಿ ದೀಪಗಳು ಬೆಳಗುತ್ತಿವೆ ಎಂಬ ಸಂದೇಶ ಪಡೆದ ನಂತರ ಅದೇ ಇಂಡಿಗೋ ವಿಮಾನ ರಾತ್ರಿ 10.30 ಗಂಟೆ ವೇಳೆಗೆ ಮೈಸೂರಿಗೆ ಮರಳಿ, ಇಲ್ಲಿಂದ ಪ್ರಯಾಣಿಕರನ್ನು ಚೆನ್ನೈಗೆ ಕರೆದೊಯ್ಯಿತು.

ರಾತ್ರಿ 7.30 ಗಂಟೆಗೆ ಲ್ಯಾಂಡ್ ಆಗಬೇಕಿದ್ದ ವಿಮಾನ, 3 ತಾಸು ತಡವಾಗಿ ಇಲ್ಲಿ ಲ್ಯಾಂಡ್ ಆಗಿದ್ದರಿಂದ ಪ್ರಯಾಣಿಕರು ಪರದಾಡುವಂತಾಯಿತು. ಮೈಸೂರಿನಿಂದ ರಾತ್ರಿ 7.50ಕ್ಕೆ ಹೊರಡಬೇಕಿದ್ದ ಈ ವಿಮಾನ ರಾತ್ರಿ 10.50ಕ್ಕೆ ಚೆನ್ನೈಗೆ ಪ್ರಯಾಣ ಬೆಳೆಸಿತು. ಅಲ್ಲಿಯವರೆಗೂ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲೇ ಪ್ರಯಾಣಿಕರು ಕಾದು ಕುಳಿತು, ಬಸವಳಿದರು.

ಹವಾಮಾನ ವೈಪರಿತ್ಯ ಅಥವಾ ವಿಮಾನದಲ್ಲಿ ತಾಂತ್ರಿಕ ದೋಷ ಉಂಟಾದಲ್ಲಿ ಮಾತ್ರ ವಿಮಾನ ಹಾರುವ ಅಥವಾ ಲ್ಯಾಂಡಿಂಗ್ ಸಮಸ್ಯೆಯಾಗುತ್ತಿತ್ತು. ಆದರೆ ವಿದ್ಯುತ್ ಸಂಪರ್ಕ ಕಡಿತದಿಂದಾಗಿ ರನ್‌ವೇ ಕಗ್ಗತ್ತಲಿನಿಂದ ಕೂಡಿದ್ದರಿಂದ ಲ್ಯಾಂಡ್ ಆಗದೇ ಕೊಯಮತ್ತೂರಿಗೆ ತೆರಳಿ ಅಲ್ಲಿ ಲ್ಯಾಂಡ್ ಆದ ಪ್ರಸಂಗ ಇದೇ ಮೊದಲು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜುನಾಥ, ತಾಂತ್ರಿಕ ತೊಂದರೆ ಹಾಗೂ ವಿಮಾನದ ಸುರಕ್ಷತೆ ದೃಷ್ಟಿಯಿಂದ ಈ ರೀತಿ ಬೆಳವಣಿಗೆಗಳು ಸರ್ವೇ ಸಾಮಾನ್ಯ ವಿದ್ಯುತ್ ಸಂಪರ್ಕ ಸಮಸ್ಯೆಯಿಂದಾಗಿ ಗುರುವಾರ ಮೈಸೂರು–ಚೆನ್ನೈ ನಡುವೆ ಸಂಚರಿಸುವ ಇಂಡಿಗೋ ವಿಮಾನದ ರಾತ್ರಿ ಟ್ರಿಪ್‌ನಲ್ಲಿ ವ್ಯತ್ಯಾಸವಾಗಿತ್ತು. ಕಾದಿದ್ದ ಪ್ರಯಾಣಿಕರು ತಡವಾಗಿ ಬಂದ ವಿಮಾನದಲ್ಲಿ ಚೆನ್ನೈಗೆ ತೆರಳಿದರು. ಸಮಯದಲ್ಲಿ ವ್ಯತ್ಯಾಸವಾಗಿರಬಹುದು. ಆದರೆ ಟ್ರಿಪ್ ರದ್ದಾಗಿಲ್ಲ ಎಂದರು.

ನಕ್ಕರೆ ಅದೇ ಸ್ವರ್ಗ

ವೈದ್ಯರು : ನನ್ನ ಕ್ಲಿನಿಕ್ ವೇಳೆ ಸಂಜೆ ನಾಲ್ಕರಿಂದ ಏಳು ಎಂದು ನಿಮಗೆ ತಿಳಿದಿಲ್ಲವೇ?

ರೋಗಿ : ಗೊತ್ತಿದೆ ಡಾಕ್ಟ್ರೇ, ಆದರೆ ನನ್ನನ್ನು ಕಚ್ಚಿದ ನಾಯಿಗೆ ಗೊತ್ತಿಲ್ವಲ್ಲ?!

ಮೈಸೂರು ಮಿತ್ರ
ಶನಿವಾರ, 28 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ನಿಖರವಾಗಿ ತಯಾರಿಸಿದ ಯೋಜನೆಯೇ ಯಶಸ್ಸಿನ ಮಹಲಿಗೆ ದಾರಿ
–ಲಿಯೋ ಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಗ್ಗದ ಆಸೆಗೆ ಮುಗ್ಗಿನ ಜೋಳ

ನಿಮ್ಮ ಪತ್ರಗಳು

ಕರ್ನಾಟಕದಲ್ಲಿ ಕಾಡುಹಂದಿಗಳಿಗೆ ಗುಂಡಿಕ್ಕುವ ಕಾನೂನು ಇದ್ದೂ ಏನು ಪ್ರಯೋಜನ?

ಮಾನ್ಯರೆ,



'ಮೈಸೂರು ಮಿತ್ರ' ಪತ್ರಿಕೆಯ ಶುಕ್ರವಾರದ ಸಂಚಿಕೆಯ 7ನೇ ಪುಟದಲ್ಲಿ 'ಕರ್ನಾಟಕದಲ್ಲಿ 2017ರಿಂದಲೇ ಕಾಡು ಹಂದಿಗಳಿಗೆ ಗುಂಡಿಕ್ಕುವ ಕಾನೂನು ಜಾರಿಯಲ್ಲಿದೆ' ಎಂಬ ವರದಿ ಪ್ರಕಟವಾಗಿದೆ.

ತಮಾಷೆ ಎಂದರೆ **'ಗುಂಡಿಕ್ಕುವ ಮುನ್ನ ಅರಣ್ಯ ಇಲಾಖೆಯ ಅನುಮತಿ ಬೇಕು'.** ಸರ್ಕಾರದ ಅನುಮತಿ ಪಡೆದು ಬರುವವರೆಗೂ ಈ ಕಾಡು ಹಂದಿಗಳು ಭತ್ತದ ಗದ್ದೆ, ಇಲ್ಲವೆ ತರಕಾರಿ ಹೊಲ, ತೋಟಗಳಲ್ಲೇ ಬೀಡು ಬಿಟ್ಟಿರುತ್ತವೆಯೇ? ಯಾವುದೋ ಕ್ಷಣದಲ್ಲಿ ದಾಳಿ ನಡೆಸುವ ಕಾಡು ಹಂದಿಗಳು ಕ್ಷಣಾರ್ಧದಲ್ಲಿ ಎಲ್ಲವನ್ನೂ ಧ್ವಂಸ ಮಾಡಿ ಬಿಡುತ್ತವೆ. ಸರ್ಕಾರ ಇಂತಹ ಅನರ್ಥವಾದ ಕಾನೂನುಗಳನ್ನು ಮಾಡುವುದರ ಔಚಿತ್ಯವೇನು? ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಸರ್ಕಾರ ಮಾಡುವ ಇಂತಹ ಕಾನೂನುಗಳಿಂದಾಗಿ ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. 'ಹಾವೂ ಸಾಯಬಾರದು, ಕೋಲು ಮುರಿಯಬಾರದು' ಎಂಬಂತಿರುವ ಹಾಲಿ ಕಾನೂನನ್ನು ಬಳಸಿಕೊಂಡು ಅಧಿಕಾರಿಗಳು ಬೆಳೆ ಪರಿಹಾರ ನೆಪದಲ್ಲಿ ಸರ್ಕಾರದ ಹಣವನ್ನು ಲೂಟಿ ಮಾಡುತ್ತಾರೆ. ಇಂತಹ ಅಸ್ಪಷ್ಟ ಹಾಗೂ ಗೊಂದಲಕಾರಿ ಕಾನೂನುಗಳ ರಚನೆಗೆ ಬದಲು ಕೇರಳ ಸರ್ಕಾರದಂತೆ ಕಾಡುಹಂದಿಗಳ ಕಂಡಲ್ಲಿ ಗುಂಡಿಕ್ಕಬಹುದಾದಂತಹ ಖಡಕ್ ಕಾನೂನು ಜಾರಿ ಮಾಡಿದರೆ ಸಾಲದೇ? ನಮ್ಮ ರಾಜ್ಯದ ಕಾನೂನು ಕಾಡುಹಂದಿಗಳ ಹಾವಳಿಗೆ ಅಂತ್ಯ ಹಾಡಿ, ರೈತರಿಗೆ ಅನುಕೂಲ ಮಾಡಿಕೊಡಲಾರದಂತಹ ನಿರುಪಯುಕ್ತ ಕಾನೂನು.

– ಕೆ.ಬಿ. ಗಣಪತಿ, ಹಿರಿಯ ಪತ್ರಕರ್ತರು, ಮೈಸೂರು.

ಮೋಸಗಾರರ ಬಗ್ಗೆ ಎಚ್ಚರವಿರಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ತಮ್ಮ ಮಾತಿನ ಚಮತ್ಕಾರದಿಂದ ಸಾವಿರಾರು ಜನರಿಗೆ ಮಂಕುಬೂದಿ ಎರಚಿ ವಂಚಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲೂಕು ಹಾಗೂ ಬೇಗೂರು ತಾಲೂಕಿನ ಕೆಲವು ರೈತಾಪಿ ವರ್ಗಗಳಿಗೆ ಸರ್ಕಾರಿ ಅಧಿಕಾರಿಯ ಸೋಗಿನಲ್ಲಿ ಬೋರ್‌ವೆಲ್ ಕೊರೆಸಲು ಅನುದಾನ ಕೊಡಿಸುವ ನೆಪದಲ್ಲಿ ರೈತರಿಂದ ಲಕ್ಷಾಂತರ ರೂಪಾಯಿಗಳನ್ನು ಪಡೆದು ವಂಚಿಸಿದ್ದಾರೆ. ಅನಾಮಧೇಯ ಕರೆಗಳ ಮೂಲಕ ಜನರಿಗೆ ಕರೆ ಮಾಡಿ ನಾವು ಬ್ಯಾಂಕಿನ ಅಧಿಕಾರಿಗಳು ಎಂದು ಹೇಳಿ ಆಧಾರ್ ನಂಬರ್, ಪಾನ್ ನಂಬರ್, ಅಕೌಂಟ್ ನಂಬರ್ ಪಡೆದು ಜನರ ಉಳಿತಾಯ ಖಾತೆಯಿಂದ ಹಣವನ್ನು ಲಪಟಾಯಿಸಿದ ಉದಾಹರಣೆಗಳು ಉಂಟು! ಇನ್ನೂ ಕೆಲವು ಮೋಸಗಾರರಿಗೆ ಬಡವರು, ಅಮಾಯಕರು ಹಾಗೂ ಅವಿದ್ಯಾವಂತರೇ ಗುರಿ!?

ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ಯೋಜನೆ, ಗೃಹ ಸಾಲದ ಯೋಜನೆ, ಎಲ್ಲಾ ಯೋಜನೆಗಳ ಸವಲತ್ತುಗಳನ್ನು ಕೊಡಿಸುವುದಾಗಿ ನಂಬಿಸಿ ಅವರಿಂದ ಹಣ ಪಡೆದು ಕೊನೆಗೆ ಯಾವುದೇ ಯೋಜನೆಯ ಸಾಲ ಕೊಡಿಸದೇ ವಂಚಿಸುವುದು. ಯಾವುದೋ ಸಂಘ ಸಂಸ್ಥೆಯ, ರಾಜಕಾರಣಿಗಳ ಇಲ್ಲವೇ ಅಧಿಕಾರಿಗಳ ಹೆಸರನ್ನು ಹೇಳಿಕೊಂಡು ಇವರೆಲ್ಲರೂ ನನ್ನ ಅಪ್ತರು ಎಂದು ಹೇಳಿ ವಂಚಿಸುವುದು, ಸರ್ಕಾರದಿಂದ ಸಿಗುವಂತಹ ಸವಲತ್ತುಗಳಾದ ವಿಧವಾ ಪಿಂಚಣಿ, ವಯೋವೃದ್ಧರ ಪಿಂಚಣಿ, ವಿಶೇಷ ಚೇತನರ ಪಿಂಚಣಿ, ಜನನ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ, ಆಧಾರ್ ಕಾರ್ಡ್, ರೇಷನ್‌ಕಾರ್ಡ್ ಕೊಡಿಸುವುದಕ್ಕೆ ನಾಲ್ಕು ಅಂಕಿಗಳ ಮೊತ್ತ ಪಡೆದು ವರ್ಷಾನುಗಟ್ಟಲೆ ತಿರುಗಿಸಿ ವರ್ಷದ ನಂತರ ಕೊಟ್ಟಿರುವುದು ಉಂಟು, ಕೊಡದೆ ಇರುವುದು ಉಂಟು.! ಇಂತಹ ವಂಚನೆ ಮಾಡುವವರ ಬಗ್ಗೆ ದೂರು ಕೊಡಲು ಯಾವುದೇ ಆಧಾರ ಇರುವುದಿಲ್ಲ? ಇವರು ಗಾಳಿಯಲ್ಲಿ ಕಟ್ಟುವ ಗೋಪುರದಂತ ಆಶ್ವಾಸನೆಗಳಿಗೆ ಅಮಾಯಕರು ಬಲಿಯಾಗುತ್ತಾರೆ. ಇಂಥ ಮೋಸಗಾರರ ಬಗ್ಗೆ ಎಚ್ಚರವಿರಲಿ.

–ಕಂಗಾಣಿ ಸೋಮು ಪಿ,
ಕ್ಯಾತಮಾರನಹಳ್ಳಿ, ಮೈಸೂರು

ಪಠ್ಯದಲ್ಲಿ ನೈತಿಕ ಶಿಕ್ಷಣ ಅಳವಡಿಕೆ ತಪ್ಪೇನಿಲ್ಲ

ಮಾನ್ಯರೆ,

ಒಂದು ಇಲ್ಲವೆ ಎರಡನೇ ತರಗತಿಯಿಂದ ಪಠ್ಯ ಪುಸ್ತಕಗಳಲ್ಲಿ ನೈತಿಕ ಶಿಕ್ಷಣ ಅಳವಡಿಕೆ ಮಾಡುವುದಾಗಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿರುವ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ, ಮುಖ್ಯವಾಗಿ ಚಿಕ್ಕ ಪುಟ್ಟ ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವುದು ಅತ್ಯಂತ ಮುಖ್ಯ. ಹಿಂದಿನ ಕಾಲದಲ್ಲಿ ಚಿಕ್ಕ ಪುಟ್ಟ ಮಕ್ಕಳಿಗೆ ಮನೆಯಲ್ಲಿಯೇ ಈ ಶಿಕ್ಷಣ ದೊರೆಯುತ್ತಿತ್ತು. ಆದರೆ ಈಗ ಅಂತಹ ಶಿಕ್ಷಣ ಮನೆಯಲ್ಲಿಯೂ ದೊರೆಯುತ್ತಿಲ್ಲ. ಎಲ್ಲೋ ಕೆಲವರ ಮನೆಗಳಲ್ಲಿ ಇಂತಹ ಶಿಕ್ಷಣ ದೊರೆಯುತ್ತಿರಬಹುದು. ಅಂದ ಮಾತ್ರಕ್ಕೆ ನೀತಿ ಶಿಕ್ಷಣವೇ ಬೇಡ ಎಂದು ಹೇಳುವುದು ಎಷ್ಟು ಸರಿ? ಈ ತರಹ ನೀತಿ ಶಿಕ್ಷಣವನ್ನು ಚಿಕ್ಕಂದಿನಿಂದಲೇ ಮನೆಯಲ್ಲಿ ಮತ್ತು ಶಾಲೆಗಳಲ್ಲಿ ಹೇಳಿ ಕೊಟ್ಟರೆ ಅಂತಹ ಮಕ್ಕಳು ಉತ್ತಮ ಪ್ರಜೆಗಳಾಗುವುದರಲ್ಲಿ ಸಂಶಯವಿಲ್ಲ.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಹಿನಕಲ್ ಫ್ಲೈ ಓವರ್ ಕೆಳಗೆ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಹಿನಕಲ್ ಫ್ಲೈಓವರ್ ಕೆಳಗಡೆ ನಾಲ್ಕು ರಸ್ತೆ ಸೇರುವ ರಿಂಗ್ ರಸ್ತೆಯ ಜಂಕ್ಷನ್‌ನಲ್ಲಿ ವಾಹನಗಳು ವೇಗವಾಗಿ ಚಲಿಸಿ ದಿನನಿತ್ಯ ಅಪಘಾತಗಳು ಸಂಭವಿಸುತ್ತಿವೆ. ದ್ವಿಚಕ್ರ ವಾಹನಗಳು, ನಾಲ್ಕು ಚಕ್ರದ ವಾಹನಗಳು ಹಾಗೂ ಲಾರಿಗಳು ಈ ರಸ್ತೆಯಲ್ಲಿ ದಿನದ 24 ಗಂಟೆಯೂ ಸಂಚರಿಸುತ್ತವೆ. ಯಾವ ಕಡೆಯಿಂದ ಯಾವ ವಾಹನಗಳು ಬರುತ್ತವೆ ಎಂದು ತಿಳಿಯುವುದು ಕಷ್ಟವಾಗಿದೆ. ಚಾಲಕರ ನಿರ್ಲಕ್ಷದಿಂದ ಸರಣಿ ಅಪಘಾತಗಳು ಸಂಭವಿಸುತ್ತಿದ್ದು, ಜನಪ್ರತಿನಿಧಿಗಳು, ಮುಡಾ ಅಧಿಕಾರಿಗಳಿಗೆ ಇದರ ಬಗ್ಗೆ ಆಗಾಗ ದೂರು ನೀಡುತ್ತಿದ್ದರೂ ಈ ಸಮಸ್ಯೆಗೆ ಯಾರೂ ಸ್ಪಂದಿಸುತ್ತಿಲ್ಲ. ಆದ್ದರಿಂದ ಈ ನಾಲ್ಕು ರಸ್ತೆ ಸೇರುವ ಜಾಗಕ್ಕೆ ಸಿಗ್ನಲ್ ಲೈಟ್ ಅಳವಡಿಸಿದರೆ ಅಪಘಾತದ ಪ್ರಮಾಣ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಬೇಕಾಗಿ ವಿನಂತಿ.

–ಶ್ವೇತ, ಮಾನಸಗಂಗೋತ್ರಿ, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದಭಟ್
ಮೊ. 7676554198

ಪಾತಾಳಕ್ಕಿಳಿದ ನೇಪಾಳದ ಆರ್ಥಿಕತೆ



> “ ನೇಪಾಳದಲ್ಲಿ ಇದುವರೆಗಿನ ಸರ್ಕಾರಗಳು ಯಾವುದೇ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲಿಲ್ಲ. ಉದ್ಯಮಗಳಿಗೆ ಉತ್ತೇಜನ ನೀಡಲಿಲ್ಲ. ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸಲಿಲ್ಲ. ಆಹಾರೋತ್ಪಾದನೆಗೂ ಗಮನ ನೀಡಲಿಲ್ಲ. ಆದರೆ ರಾಜಕಾರಣಿಗಳು ಮಾತ್ರ ಯಾವುದೇ ಸಂಕೋಚವಿಲ್ಲದೇ ದೇಶವನ್ನು ಲೂಟಿ ಹೊಡೆದರು. ಇದರಿಂದ ನೇಪಾಳ ಸಣ್ಣ ರಾಷ್ಟ್ರವಾದರೂ ಬಡರಾಷ್ಟ್ರವಾಗಿದೆ. ನಿರುದ್ಯೋಗ ಹೆಚ್ಚಿದ್ದು, ಪುರುಷರು ಆಲಸಿಗಳು, ಮೋಜು, ಜೂಜು, ಮದ್ಯವ್ಯಸನಿಗಳಾಗಿದ್ದಾರೆ. ಪ್ರಸ್ತುತ ಬಿಕ್ಕಟ್ಟಿನಿಂದ 12 ಲಕ್ಷದಷ್ಟು ಜನರು ಬಡತನದ ರೇಖೆಯಿಂದ ಕೆಳಕ್ಕೆ ಇಳಿದಿದ್ದಾರೆ. 2020ರಲ್ಲಿ ಶೇ.2.77 ಇದ್ದ ಬೆಲೆ ಏರಿಕೆ ಪ್ರಮಾಣ ಪ್ರಸ್ತುತ 5.97ಕ್ಕೆ ಏರಿಕೆಯಾಗಿದ್ದು, ಹಣದುಬ್ಬರ ಶೇ.7ಕ್ಕೆ ಏರಿದೆ.

ಒಂದೊಂದಾಗಿ ಭಾರತದ ನೆರೆಹೊರೆಯ ದೇಶಗಳ ಆರ್ಥಿಕ, ರಾಜಕೀಯ ಪರಿಸ್ಥಿತಿ ಹದಗೆಡುತ್ತಿದೆ. ಪಾಕ್‌ನಲ್ಲಿ ರಾಜಕೀಯ ಬಿಕ್ಕಟ್ಟು ಮುಂದುವರಿದರೆ, ದಕ್ಷಿಣದ ಶ್ರೀಲಂಕಾದಲ್ಲಿ ಆರ್ಥಿಕ ದುಸ್ಥಿತಿಯಿಂದ ಭೀಕರ ಪರಿಸ್ಥಿತಿ ಎದುರಾಗಿದೆ.. ಇದೇ ರೀತಿ ಹಿಮಾಲಯದ ಮಡಿಲಲ್ಲಿ ಪುಟ್ಟ ಮಗುವಿನಂತೆ ಕಾಣುವ ನೇಪಾಳದ ಆರ್ಥಿಕತೆಯು ಪಾತಾಳಕ್ಕಿಳಿದಿದೆ. ನೇಪಾಳದ ಅರ್ಥಶಾಸ್ತ್ರಜ್ಞರು ಕಳೆದ ಕೆಲವು ತಿಂಗಳುಗಳಿಂದ ಸಂಭಾವ್ಯ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಎಚ್ಚರಿಸಿದ್ದರು. ನೇಪಾಳ ರಾಷ್ಟ್ರೀಯ ಬ್ಯಾಂಕ್(**NRB**) ಕೆಲವು ವಸ್ತುಗಳ ಆಮದನ್ನು ನಿಷೇಧಿಸಿದ ನಂತರವೂ ವಿದೇಶಿ ವಿನಿಮಯ ಸಂಗ್ರಹ ಮುಂದಿನ ಏಳು ತಿಂಗಳಿಗೆ ಬೇಕಾಗುವಷ್ಟು ಮಾತ್ರ ಉಳಿದಿದೆ. ಇದರಿಂದ ಕೇವಲ ಅತ್ಯಾವಶ್ಯಕ ವಸ್ತುಗಳನ್ನು ಮಾತ್ರ ಆಮದು ಮಾಡಿಕೊಳ್ಳುವಂತಹ ದಯನೀಯ ಸ್ಥಿತಿಗೆ ತಲುಪಿದೆ. ಆದರೆ ನೇಪಾಳವು ಶ್ರೀಲಂಕಾದ ಹಾದಿಯಲ್ಲಿದೆ ಎಂಬ ಆರ್ಥಿಕ ತಜ್ಞರ ಅಭಿಪ್ರಾಯವನ್ನು ಸರಕಾರ ನಿರಾಕರಿಸುತ್ತಿದೆ. ದೇಶದ ವಿಷಮ ಆರ್ಥಿಕ ಸ್ಥಿತಿಯ ವಿಷಯದಲ್ಲಿ ರಾಜಕೀಯ ಪಕ್ಷಗಳು ಪರಸ್ಪರ ದೋಷಾರೋಪಣೆಯಲ್ಲಿ ಮಗ್ನವಾಗಿವೆ. ನೇಪಾಳದ ಪ್ರಮುಖ ವಿರೋಧ ಪಕ್ಷ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳವು(**UML**) ಆಳುವ ನೇಪಾಳಿ ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ದೂಷಿಸುತ್ತಿದೆ. ಆದರೆ ಮಾವೋವಾದಿ ನಾಯಕ ಮತ್ತು ವಿತ್ತ ಸಚಿವ ಜನಾರ್ಧನ ಶರ್ಮ ಹಿಂದಿನ ಸರ್ಕಾರದ ತಪ್ಪು ಆರ್ಥಿಕ ನೀತಿಗಳು ಇದಕ್ಕೆ ಕಾರಣವೆಂದು ಆರೋಪಿಸುತ್ತಿದ್ದಾರೆ.

ಆರ್ಥಿಕ ಚಟುವಟಿಕೆ ಸ್ಥಗಿತಗೊಳಿಸಿದ ಕೊರೊನಾ: ಸರಕಾರದ ಪ್ರಕಾರ ಕೊರೊನಾ ದೇಶದ ಆರ್ಥಿಕ ಚಟುವಟಿಕೆಗೆ ಭಾರೀ ಹೊಡೆತ ನೀಡಿತು. 2020ರಲ್ಲಿ ದೇಶದ ಆದಾಯದ ಪ್ರಮುಖ ಮೂಲವಾದ ಪ್ರವಾಸೋದ್ಯಮ ಸಹಿತ ಎಲ್ಲ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿತು. ನೇಪಾಳದ ಜಿ.ಡಿ.ಪಿ.ಗೆ ಪ್ರವಾಸೋದ್ಯಮದ ಕೊಡುಗೆ ಶೇ.8ರಷ್ಟಿತ್ತು. 2019ರಲ್ಲಿ 12 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದರು. ಆದರೆ ಕೊರೊನಾದಿಂದಾಗಿ 2020ರಲ್ಲಿ 2.30 ಲಕ್ಷ ಪ್ರವಾಸಿಗರು ಬಂದರೆ, 2021ರಲ್ಲಿ ಕೇವಲ 1.5 ಲಕ್ಷ ಪ್ರವಾಸಿಗರು ಭೇಟಿ ನೀಡಿದರು. ಇದರ ಪರಿಣಾಮ 3500ಕ್ಕೂ ಹೆಚ್ಚು ಪ್ರವಾಸೋದ್ಯಮ ಸಂಸ್ಥೆಗಳು ಮುಚ್ಚಲ್ಪಟ್ಟು ಸಾವಿರಾರು ಜನ ನಿರುದ್ಯೋಗಿಗಳಾದರು. ಇದೇ ರೀತಿ ನೇಪಾಳದ ವಿದೇಶಿ ವಿನಿಮಯ ಸಂಗ್ರಹದ ಇನ್ನೊಂದು ಮೂಲ, ದೇಶದ ಸುಮಾರು 35 ಲಕ್ಷ ಜನರು ವಿದೇಶಗಳಲ್ಲಿ ದುಡಿಯುತ್ತಿದ್ದಾರೆ. ಇವರು ಪ್ರತಿವರ್ಷ ದೇಶಕ್ಕೆ 60 ಸಾವಿರ ಕೋಟಿ ನೇಪಾಳಿ ರೂ. (**GDP**ಯ ಶೇ. 25) ಕಳಿಸುತ್ತಿದ್ದರು. ಕೊರೊನಾ ದಿಂದಾಗಿ 5 ಲಕ್ಷ ಜನ ನಿರುದ್ಯೋಗಿಗಳಾದರು. 2021–22ರ'ಲ್ಲಿ ಇದರಿಂದ ಬರುವ ವಿದೇಶಿ ಕರೆನ್ಸಿಯಲ್ಲಿ ಶೇ.5ರಷ್ಟು ಕುಸಿತ ಕಂಡಿತು. ಅಲ್ಪ ಪ್ರಮಾಣದಲ್ಲಿ ವಿದೇಶಿ ವಿನಿಮಯ ತರುತ್ತಿದ್ದ ಸೋಯಾ ಎಣ್ಣೆಯ ರಫ್ತು ಪ್ರಮಾಣ ಕುಸಿಯಿತು. ಈ ಎಲ್ಲಾ ಕಾರಣಗಳಿಂದ ವಿದೇಶದಿಂದ ಬರುವ ಆದಾಯ ಭಾರೀ ಪ್ರಮಾಣದಲ್ಲಿ ಕಡಿಮೆಯಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನೇಪಾಳದ ಜನರ ದೈನಂದಿನ ಬದುಕಿಗೆ ಅವಶ್ಯಕವಾದ ಎಲ್ಲ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಇದಕ್ಕೆ ಮುಖ್ಯ ಕಾರಣ ನೇಪಾಳದಲ್ಲಿ ಇದುವರೆಗಿನ ಸರ್ಕಾರಗಳು ಯಾವುದೇ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲಿಲ್ಲ. ಉದ್ಯಮಗಳಿಗೆ ಉತ್ತೇಜನ ನೀಡಲಿಲ್ಲ. ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸಲಿಲ್ಲ. ಆಹಾರೋತ್ಪಾದನೆಗೂ ಗಮನ ನೀಡಲಿಲ್ಲ. ಆದರೆ ರಾಜಕಾರಣಿಗಳು ಮಾತ್ರ ಯಾವುದೇ ಸಂಕೋಚವಿಲ್ಲದೇ ದೇಶವನ್ನು ಲೂಟಿ ಹೊಡೆದರು. ಇದರಿಂದ ನೇಪಾಳ ಸಣ್ಣ ರಾಷ್ಟ್ರವಾದರೂ ಬಡರಾಷ್ಟ್ರವಾಗಿದೆ. ನಿರುದ್ಯೋಗ ಹೆಚ್ಚಿದ್ದು, ಪುರುಷರು ಆಲಸಿಗಳು, ಮೋಜು, ಜೂಜು, ಮದ್ಯವ್ಯಸನಿಗಳಾಗಿದ್ದಾರೆ. ಪ್ರಸ್ತುತ ಬಿಕ್ಕಟ್ಟಿನಿಂದ 12 ಲಕ್ಷದಷ್ಟು ಜನರು ಬಡತನದ ರೇಖೆಯಿಂದ ಕೆಳಕ್ಕೆ ಇಳಿದಿದ್ದಾರೆ. 2020ರಲ್ಲಿ ಶೇ.2.77 ಇದ್ದ ಬೆಲೆ ಏರಿಕೆ ಪ್ರಮಾಣ ಪ್ರಸ್ತುತ 5.97ಕ್ಕೆ ಏರಿಕೆಯಾಗಿದ್ದು, ಹಣದುಬ್ಬರ ಶೇ.7ಕ್ಕೆ ಏರಿದೆ.

ವಿದೇಶಿ ವಿನಿಮಯ ಸಂಗ್ರಹದ ಸ್ಥಿತಿ: ನೇಪಾಳವು ತನ್ನ ವಿದೇಶಿ ವಿನಿಮಯ ಸಂಗ್ರಹದ ಬಹುದೊಡ್ಡ ಪಾಲನ್ನು ಪೆಟ್ರೋಲಿಯಂ, ಆಹಾರ, ಜವಳಿ, ವಾಹನಗಳು, ಆಟಿಕೆಗಳು, ತಿನಿಸುಗಳು, ಕಚ್ಚಾ ವಸ್ತುಗಳ ಆಮದಿಗಾಗಿ ವ್ಯಯಿಸುತ್ತಿದೆ. ಕಳೆದ ಆರ್ಥಿಕ ವರ್ಷದಲ್ಲಿ ಆಮದು ಪಮಾಣದಲ್ಲಿ ಶೇ.38ರಷ್ಟು ಏರಿಕೆಯಾಗಿದೆ. ಇದರಲ್ಲಿ ಕೇವಲ ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ಕಳೆದ 9 ತಿಂಗಳಲ್ಲಿ 1.5 ಬಿಲಿಯನ್ ಡಾಲರ್ ವ್ಯಯವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರುತ್ತಿರುವುದು ಸರ್ಕಾರದ ಚಿಂತೆ ಹೆಚ್ಚಿಸಿದೆ. ಇದಲ್ಲದೇ ದೇಶದ ಶ್ರೀಮಂತರು, ಭ್ರಷ್ಟರು, ರಾಜಕಾರಣಿಗಳು ಖರೀದಿಸುತ್ತಿರುವ ದುಬಾರಿ ಬೆಲೆಯ ವಿದೇಶಿ ಕಾರುಗಳು, ಜೀಪುಗಳು, ದ್ವಿಚಕ್ರ ವಾಹನಗಳು, ವಿದೇಶಿ ಮದ್ಯ, ಸಿಗರೇಟಿನ ಆಮದಿಗಾಗಿಯೂ ವಿದೇಶಿ ವಿನಿಮಯ ಸಂಗ್ರಹದ ಬಹು ದೊಡ್ಡಪಾಲು ಖರ್ಚಾಗುತ್ತಿದೆ. ಇವುಗಳಲ್ಲದೇ ಮಕ್ಕಳ ತಿನಿಸುಗಳು, ಆಟಿಕೆಗಳು, ಜೂಜಿಗಾಗಿ ಕೊನೆಗೆ ಜನ ಸಾಮಾನ್ಯರ ದೈನಂದಿನ ಜೀವನಕ್ಕೆ ಅವಶ್ಯವಾದ ವಸ್ತುಗಳನ್ನೂ ಆಮದು ಮಾಡಬೇಕಾದ ದಯಾನೀಯ ಸ್ಥಿತಿ ನೇಪಾಳದಲ್ಲಿದೆ. ನೇಪಾಳಿಗಳು ಇಸ್ಪೀಟ್ ಆಟ ಪ್ರಿಯರು. ಆದರೆ ನೇಪಾಳದಲ್ಲಿ ಒಂದೇ ಒಂದು ಇಸ್ಪೀಟ್ ಎಲೆಗಳ ಪ್ಯಾಕ್ ತಯಾರಾಗುವುದಿಲ್ಲ. ಹೀಗಾಗಿ ಜೂಜಿನ ಆಟಕ್ಕಾಗಿ ನೇಪಾಳವು ಕಳೆದ ಐದು ವರ್ಷಗಳಲ್ಲಿ 6.62 ಕೋಟಿ ಇಸ್ಪೀಟ್ ಪ್ಯಾಕ್‌ಗಳನ್ನು ಆಮದು ಮಾಡಿಕೊಂಡಿದ್ದು, ಇದಕ್ಕಾಗಿ 80 ಲಕ್ಷ ಡಾಲರ್ ವಿದೇಶಗಳಿಗೆ ಪಾವತಿಸಿದೆ. ಈ ರೀತಿ ಐಷಾರಾಮಿ, ಅನುತ್ಪಾದಕ ವಸ್ತುಗಳ ಆಮದಿನಿಂದ ನೇಪಾಳದ ವಿದೇಶಿ ವಿನಿಮಯ ಸಂಗ್ರಹ ಭಾರೀ ಪ್ರಮಾಣದಲ್ಲಿ ಕುಸಿದಿದೆ. 2021ರ ಜುಲೈನಲ್ಲಿ 11 ಬಿಲಿಯನ್ ಡಾಲರ್ ಇದ್ದ ವಿದೇಶಿ ವಿನಿಮಯ ಸಂಗ್ರಹ 2022ರ ಮಾರ್ಚ್‌ನಲ್ಲಿ 9 ಬಿಲಿಯನ್ ಡಾಲರ್‌ಗೆ ಇಳಿದಿದ್ದು, ಮುಂದಿನ ಏಳು ತಿಂಗಳಲ್ಲಿ ಮುಗಿಯುವ ಸಾಧ್ಯತೆ ಇದೆ. ವ್ಯಾಪಾರ ಕೊರತೆಯು 2.16 ಲಕ್ಷ ಕೋಟಿ ನೇಪಾಳ ರೂ.ಗೆ ತಲುಪಿದ್ದು ಸ್ಥಿತಿ ಗಂಭೀರವಾಗಿದೆ.

ನೇಪಾಳ ಸರ್ಕಾರವು ಆಮದು ನಿಯಂತ್ರಿಸಲು ದೃಢ ಕ್ರಮ ಕೈಗೊಳ್ಳಲಿಲ್ಲ. ದೇಶದ ಮಾಜಿ ವಿತ್ತ ಮಂತ್ರಿ ಯುವರಾಜ್ ಖತಿವಾಡಾ ಹೇಳುವಂತೆ ಪ್ರಸ್ತುತ ಸಂಕಟದ ಕಾರಣ ಔದ್ಯೋಗಿಕ ಕ್ಷೇತ್ರದಲ್ಲಿನ ಅಸ್ಥಿರತೆ, ವಿಲಾಸಿ ವಸ್ತುಗಳು ಕಳ್ಳ ಮಾರ್ಗದಲ್ಲಿ ಬರುತ್ತಿದ್ದು, ಅದಕ್ಕಾಗಿ ದೇಶದ ಹಣ ಈಗಲೂ ಹೊರಕ್ಕೆ ಹೋಗುತ್ತಿರುವುದು ಸಮಸ್ಯೆಯಾಗಿದೆ. ಆಂತರಿಕವಾಗಿ ದೇಶದಲ್ಲಿ ಹಣದ ಹರಿವಿನ ಪ್ರಮಾಣ ಕುಸಿದ ಕಾರಣ ಬ್ಯಾಂಕ್‌ಗಳಿಗೆ ಸಾಲ ನೀಡಲಾಗುತ್ತಿಲ್ಲ. ಆದರೂ ಕಳೆದ ವರ್ಷ ಸಾಲ ನೀಡುವಿಕೆಯಲ್ಲಿ ಶೇ.25ರಷ್ಟು ವೃದ್ಧಿಯಾದರೂ ಉತ್ಪಾದನಾ ವಲಯದಲ್ಲಿ ಯಾವುದೇ ಧನಾತ್ಮಕ ಪರಿವರ್ತನೆಯಾಗಿಲ್ಲ.

ನೇಪಾಳ ಯೋಜನಾ ಆಯೋಗದ ಮಾಜಿ ಅಧ್ಯಕ್ಷ ಗೋವಿಂದ ಪೊಕ್ರೆಲ್ ಪ್ರಕಾರ ಶ್ರೀಲಂಕಾದಲ್ಲಿ ರಾಜಕಾರಣಿಗಳು ಮಾಡಿದ ತಪ್ಪುಗಳಿಂದಾಗಿ ಅರಾಜಕ ಪರಿಸ್ಥಿತಿ ಉಂಟಾಗಿದೆ. ದೇಶದ ರಾಜಕಾರಣಿಗಳು ತಮ್ಮನ್ನು ಸರಿಪಡಿಸಿಕೊಳ್ಳದಿದ್ದರೆ ನೇಪಾಳಕ್ಕೂ ಶ್ರೀಲಂಕಾ ಪರಿಸ್ಥಿತಿ ಬರುವುದನ್ನು ಯಾರಿಂದಲೂ ತಡೆಯಲಾಗದು ಎನ್ನುತ್ತಾರೆ. ಆದರೆ ಮಾಜಿ ವಿತ್ತಮಂತ್ರಿ ಯುವರಾಜ ಖತಿವಾಡ ಇಂತಹ ಸಂಭಾವ್ಯತೆಯನ್ನು ತಿರಸ್ಕರಿಸುತ್ತಾರೆ. ಇವರ ಪ್ರಕಾರ ಎರಡೂ ದೇಶಗಳ ಆರ್ಥಿಕತೆ ಭಿನ್ನವಾಗಿದೆ. ಲಂಕೆಯು ಚೀನಾ ಮತ್ತು ಯೂರೋಪಿಯನ್ ದೇಶಗಳಿಂದ ಕಡಿಮೆ ಅವಧಿಯ ಹೆಚ್ಚು ಬಡ್ಡಿ ದರದಲ್ಲಿ ದೊಡ್ಡ ಮೊತ್ತದ ಸಾಲ ಪಡೆದ ಕಾರಣ ಸಂಕಷ್ಟದಲ್ಲಿದೆ. ಆದರೆ ನೇಪಾಳವು ದೀರ್ಘ ಮರುಪಾವತಿ ಅವಧಿಯ ಕಡಿಮೆ ಬಡ್ಡಿಯಲ್ಲಿ ಸಾಲ ಪಡೆದಿದೆ. ಅತ್ಯಂತ ಮಹತ್ವದ ಸಂಗತಿ ಎಂದರೆ ನೇಪಾಳವು ಚೀನಾ ಬೆಲ್ಟ್ ರೋಡ್ ಇನಿಷಿಯೇಟಿವ್(**BRI**)ಯೋಜನೆಗೆ ಸಹಿ ಹಾಕಿದರೂ ಸಾಲ ಪಡೆದಿಲ್ಲ. ಈ ದೃಷ್ಟಿಯಲ್ಲಿ ಶ್ರೀಲಂಕಾಗಿಂತ ನೇಪಾಳ ಉತ್ತಮ ಸ್ಥಿತಿಯಲ್ಲಿದೆ.

ಸರ್ಕಾರ ಕೈಗೊಂಡ ಉಪಕ್ರಮಗಳು: ನೇಪಾಳದ ಬಳಿ ಏಳು ತಿಂಗಳಿಗೆ ಆಗುವಷ್ಟು ವಿದೇಶಿ ವಿನಿಮಯ ಸಂಗ್ರಹ ಉಳಿದಿರುವುದು ಸಕಾರಾತ್ಮಕ ಸಂಗತಿಯಾಗಿದೆ. ಈ ಏಳು ತಿಂಗಳಲ್ಲಿ ಪರಿಸ್ಥಿತಿ ಸುಧಾರಣೆಗೆ ಸರ್ಕಾರ ದೃಢ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ನೇಪಾಳ ರಾಷ್ಟ್ರ ಬ್ಯಾಂಕ್‌ನ ಕಾರ್ಯಕಾರಿ ನಿರ್ದೇಶಕ ಪ್ರಕಾಶ್ ಕುಮಾರ್ ಶ್ರೇಷ್ಠರು ದೇಶದ ಆರ್ಥಿಕ ಸಮಸ್ಯೆ ಇನ್ನಷ್ಟು ಬಿಗಡಾಯಿಸದಂತೆ ಕೇಂದ್ರೀಯ ಬ್ಯಾಂಕ್ ಎಲ್ಲ ರೀತಿ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದಿದ್ದಾರೆ **NRB** ಯು ದೇಶದ ಆಮದು–ರಫ್ತು ಸ್ಥಿತಿಯನ್ನು ಪರಿಶೀಲಿಸಿ ಐಷಾರಾಮಿ ವಾಹನಗಳು, ವಿದೇಶಿ ಮದ್ಯ, ಸಿಗರೇಟ್, ಇಸ್ಪೀಟ್ ಪ್ಯಾಕ್‌ಗಳು, 32 ಇಂಚಿಗಿಂತ ದೊಡ್ಡ ಟೆಲಿವಿಷನ್ ಸೆಟ್‌ಗಳು, 600 ಡಾಲರ್‌ಗಿಂತ ಹೆಚ್ಚು ಬೆಲೆಯ ಮೊಬೈಲ್‌ಗಳು, ಮಕ್ಕಳ ತಿನಿಸುಗಳಾದ **Lays**, **Kurkure** ಮೊದಲಾದ 47 ವಸ್ತುಗಳ ಆಮದನ್ನು ನಿಷೇಧಿಸಿ ವಿದೇಶಿ ವಿನಿಮಯ ಸಂಗ್ರಹ ಉಳಿಸಲು ದೃಢ ಉಪಕ್ರಮಗಳನ್ನು ಕೈಗೊಂಡಿದೆ. ಉತ್ಪಾದನಾ ವಲಯಗಳಿಗೆ ಸಾಲ ನೀಡುವಿಕೆಯನ್ನು ಬ್ಯಾಂಕ್‌ಗಳು ಮುಂದುವರಿಸಿದ್ದು, ಭವಿಷ್ಯದಲ್ಲಿ ಪರಿಸ್ಥಿತಿ ಸುಧಾರಿಸಲಿದೆ ಎಂದು **NRB** ಯ ಮಾಜಿ ನಿರ್ದೇಶಕರಾದ ನರ್ ಬಹದ್ದೂರ್ ಥಾಪಾ ಹೇಳಿದ್ದಾರೆ. ನೆರೆಹೊರೆಯ ದೇಶಗಳಲ್ಲಿರುವ ಅರಾಜಕತೆಯಿಂದ ಭಾರತದ ಭದ್ರತೆಗೆ ಅಪಾಯವಾಗದಂತೆ, ಏಷ್ಯಾ ಉಪಖಂಡದ ಶಾಂತಿ, ಸ್ಥಿರತೆಗೆ ಸಮಸ್ಯೆಯಾಗದಂತೆ ಹಾಗೂ ಭಾರತ–ನೇಪಾಳದ ನಡುವಿನ ಸಾಂಸ್ಕೃತಿಕ, ಭಾವನಾತ್ಮಕ ಸಂಬಂಧಗಳ ಹಿನ್ನೆಲೆಯಲ್ಲಿ ಭಾರತವು ನೇಪಾಳಕ್ಕೆ ಸಹಾಯ ಹಸ್ತ ನೀಡಿದೆ. ಈ ಎಲ್ಲಾ ಕಾರಣಗಳಿಂದ ಮುಂದಿನ ದಿನಗಳಲ್ಲಿ ನೇಪಾಳವು ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಬಹುದು.

ಸಮಸ್ಯೆ ಹೇಳುವವರಿಗಿಂತ ಪರಿಹಾರ ಕಂಡುಕೊಳ್ಳುವವರ ಸಂಖ್ಯೆ ಹೆಚ್ಚಬೇಕಿದೆ

ಸೆಲ್ಕೋ ಫೌಂಡೇಶನ್ ಸಿಇಓ ಡಾ.ಹರೀಶ್‌ಹಂದೆ ಅಭಿಮತ



ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಗುರುವಾರ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿಯ 11ನೇ ಉಪನ್ಯಾಸ ಕಾರ್ಯಕ್ರಮದಲ್ಲಿ 'ಬಡತನ ಮತ್ತು ಸುಸ್ಥಿರತೆ' ಕುರಿತು ಡಾ. ಹರೀಶ್ ಹಂದೆಯವರು ಮಾತನಾಡುತ್ತಿರುವುದು. ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಬಿ.ಆರ್.ಪೈ ಉಪಸ್ಥಿತರಿದ್ದಾರೆ.



ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಗುರುವಾರ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿಯ 11ನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಎಂ ರವರ 10ನೇ ದತ್ತಿ ಉಪನ್ಯಾಸ 'ಸಾಧನಾ–ಪಾತ್ ಆಫ್ ಲಿಬರೇಷನ್' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಡಾ.ಬಗಾದಿಗೌತಮ್, ಡಾ.ಹರೀಶ್‌ಹಂದೆ ಹಾಗೂ ಬಿ.ಆರ್.ಪೈ ಅವರುಗಳಿದ್ದಾರೆ.

ಮೈಸೂರು, ಮೇ 27– ಸಮಸ್ಯೆ ಹೇಳುವವರಿಗಿಂತ ಪರಿಹಾರ ಕಂಡುಹಿಡಿಯುವವರ ಸಂಖ್ಯೆ ಹೆಚ್ಚಬೇಕಿದೆ ಎಂದು ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ ಸಹಸಂಸ್ಥಾಪಕರು ಹಾಗೂ ಸೆಲ್ಕೋ ಫೌಂಡೇಶನ್‌ನ ಪ್ರಧಾನ ಕಾರ್ಯನಿರ್ವಹಣಾಧಿಕಾರಿ ಡಾ. ಹರೀಶ್‌ಹಂದೆ ತಿಳಿಸಿದ್ದಾರೆ.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ 'ಬಡತನ ಮತ್ತು ಸುಸ್ಥಿರತೆ' ವಿಷಯ ಕುರಿತು ದತ್ತಿಯ 11ನೇ ಉಪನ್ಯಾಸ ನೀಡುತ್ತೊದ್ದರು.

ಭಾರತದಲ್ಲಿ ಸಮಸ್ಯೆಗಳನ್ನು ಹುಡುಕುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ದೇಶದ ಸಮಸ್ಯೆಗಳನ್ನು ಕೇವಲ ವಿಮರ್ಶೆ ಮಾಡುತ್ತಾ ಸಮಯ ವ್ಯರ್ಥ ಮಾಡದೆ, ಅದನ್ನು ಸರಿ ಮಾಡುವುದರ ಬಗ್ಗೆ ಯೋಚಿಸಬೇಕಿದೆ.

ಭಾರತೀಯರು ಪ್ರತಿಭಾವಂತರು, ಪ್ರತಿಯೊಬ್ಬರೂ ಬದಲಾವಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಿದೆ. ನಮ್ಮ ದೇಶದ ಪ್ರತಿಯೊಬ್ಬರಿಗೂ ಆ ಶಕ್ತಿ ಮತ್ತು ಸಾಮರ್ಥ್ಯಗಳಿವೆ. ಜಗತ್ತಿನ ಇತರ ದೇಶಗಳು ಹೊಂದಿರುವ ಸಮಸ್ಯೆಗಳನ್ನೇ ಭಾರತವೂ ಹೊಂದಿದೆ. ಪದವಿಗಳನ್ನು ತೆಗೆದುಕೊಂಡು ಕಚೇರಿಗಳಲ್ಲಿ ಕುಳಿತರೆ ಸಮಸ್ಯೆಗೆ ಪರಿಹಾರ ದೊರೆಯುವುದಿಲ್ಲ. ಕೋವಿಡ್ ಕೇವಲ ಕೆಲವರನ್ನು ಮಿಲೇನಿಯರನ್ನಾಗಿಸಿತು. ಆದರೆ ಸಾಕಷ್ಟು ಜನರನ್ನು ಬಡವರನ್ನಾಗಿಸಿತು. ಕೆಲವು ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಯಿತು. ಆದರೆ ರೈತರು, ರಸ್ತೆ ಬದಿ ವ್ಯಾಪಾರಿಗಳು ಮನೆಯಲ್ಲಿ ಕುಳಿತು ಕೆಲಸ ಮಾಡಲು ಸಾಧ್ಯವಿಲ್ಲ. ಶ್ರೀಮಂತ ವರ್ಗದವರು ಸಬ್ಸಿಡಿಯನ್ನು ಬಯಸುತ್ತಾರೆ. ಅವರು ಬಯಸುವ ಸಬ್ಸಿಡಿಯ ನಿಜವಾದ ಹೂಡಿಕೆದಾರರು ಬಡವರಾಗಿರುತ್ತಾರೆ. ಆದರೆ ನಮ್ಮ ಆಡಳಿತ ವ್ಯವಸ್ಥೆ ಬಡತನಕ್ಕೆ ವಿರುದ್ಧವಾಗಿದೆ. ದೇಶದ ಬಗ್ಗೆ ಹೆಮ್ಮೆಯಿರಬೇಕು. ಬಡತನವನ್ನು ಹೇಗೆ ನಿವಾರಿಸಬೇಕು ಎಂದು ಯೋಚಿಸಬೇಕಿದೆ. ಯುವಕರು ಈ ನಿಟ್ಟಿನಲ್ಲಿ ದೃಢ ಸಂಕಲ್ಪ ಮಾಡಬೇಕು. ಭಾರತ ಈ ಬಗೆಯ ಸಂಶೋಧನೆಗೆ ಕೇಂದ್ರವಾಗಿದೆ ಎಂದು ತಿಳಿಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡಿ, ಭಾರತದಲ್ಲಿ ಎಲ್ಲ ಸಮಸ್ಯೆಗಳೂ ಇವೆ. ಅವಕ್ಕೆ ಪರಿಹಾರೋಪಾಯಗಳೂ ಇವೆ. ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಸಮಸ್ಯೆಗಳಿಗೆ ಹಿಂದೆ ಹಳ್ಳಿಗಳಲ್ಲಿ ಅಲ್ಲೇ ಪರಿಹಾರವನ್ನು ಕಂಡುಹಿಡಿಯಲಾಗುತ್ತಿತ್ತು ಜನರಲ್ಲಿ ಸಾಮಾನ್ಯವಾದ ತಿಳುವಳಿಕೆ ಬರಬೇಕು. ಬಡತನ ಸುಸ್ಥಿರತೆಗೆ ಎಂದಿಗೂ ಅಡ್ಡಿ ಬರುವುದಿಲ್ಲ. ಮಾಡುವ ಕೆಲಸದಲ್ಲಿ ತಾರತಮ್ಯ ಭಾವನೆ ಇರಬಾರದು. ಸೇವೆ ಮುಖ್ಯವಾಗಬೇಕೇ ಹೊರತು ಹಣ ಮುಖ್ಯವಾಗಬಾರದು. ಕೋಟಿ ಹಣದ ಒಡೆಯರಾಗುವುದಕ್ಕಿಂತ ಕೋಟಿ ಜನಗಳ ಆಸ್ತಿಯಾಗಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್‌ರವರು ಸುತ್ತೂರು ಶ್ರೀಮಠ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಮಾಜಕ್ಕೆ ಪೂರಕವಾದ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಇಂದಿನ ಉಪನ್ಯಾಸದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸದುಪಯೋಗವಾಗಲಿದೆ ಬದುಕಿನಲ್ಲಿ ಉಂಟಾಗುವ ಸಮಸ್ಯೆಗಳಿಗೆ ಹತ್ತಿರದಲ್ಲಿಯೇ ಪರಿಹಾರವಿರುತ್ತದೆ ಎಂಬುದನ್ನು ನಾವೆಲ್ಲರೂ ಅರಿತು ನಡೆಯಬೇಕಿದೆ ಎಂದು ಹೇಳಿದರು.

ಶ್ರೀ ಎಂ ರವರ 10ನೇ ದತ್ತಿ ಉಪನ್ಯಾಸ 'ಸಾಧನಾ–ಪಾತ್ ಆಫ್ ಲಿಬರೇಷನ್' ಕೃತಿಯನ್ನು ವಿಡಬ್ಲ್ಯೂಎಫ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಿ.ಆರ್.ಪೈ ಲೋಕಾರ್ಪಣೆಗೊಳಿಸಿ, ಮಾತನಾಡಿದರು.

ಸಂವಾದ ಕಾರ್ಯಕ್ರಮದಲ್ಲಿ ಶ್ರೋತೃಗಳ ಪ್ರಶ್ನೆಗಳಿಗೆ ಡಾ. ಹರೀಶ್ ಹಂದೆಯವರು ಉತ್ತರಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ಗುರುಪ್ರಸಾದ್ ಮತ್ತು ಶ್ರೀಮತಿ ಕೆ.ಜಿ.ವಿನುತರವರು ಪ್ರಾರ್ಥಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಆರ್.ಮಹೇಶ್ ವಂದಿಸಿದರು. ಪ್ರೊ ಮೊರಬದ ಮಲ್ಲಿಕಾರ್ಜುನ ನಿರೂಪಿಸಿದರು.

ಹಡಗಿನಲ್ಲಿ ಡ್ರಗ್ಸ್ ಪಾರ್ಟಿ ಪ್ರಕರಣ

ಶಾರೂಕ್ ಖಾನ್ ಪುತ್ರ ಆರ್ಯನ್‌ಗೆ ಕ್ಲೀನ್ ಚಿಟ್

ಮುಂಬೈ: ಹಡಗಿನಲ್ಲಿ ಪಾರ್ಟಿ ವೇಳೆ ಡ್ರಗ್ಸ್ ಸಿಕ್ಕಿ ಬಂಧನಕ್ಕೊಳಗಾದ ಪ್ರಕರಣದಲ್ಲಿ ಬಾಲಿವುಡ್ ಸೂಪರ್ ಸ್ಟಾರ್ ಶಾರೂಕ್ ಖಾನ್ ಪುತ್ರ ಆರ್ಯನ್ ಖಾನ್‌ಗೆ ಕ್ಲೀನ್ ಚಿಟ್ ಸಿಕ್ಕಿದೆ.



ಡ್ರಗ್ಸ್ ಬಳಕೆ ತಡೆ ಏಜೆನ್ಸಿಯ ವಿಶೇಷ ತಂಡವು ಆರ್ಯನ್ ಹಾಗೂ ಮೋಹಕ್ ಹೊರತು ಪಡಿಸಿ ಎಲ್ಲಾ ಆರೋಪಿಗಳು ಮಾದಕ ವಸ್ತು ಹೊಂದಿದ್ದರು ಎಂದು ಎನ್‌ಸಿಬಿ ಡಿಡಿಜಿ (ಕಾರ್ಯಾಚರಣೆ) ಸಂಜಯ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಆರ್ಯನ್ ಖಾನ್, ಅವಿನ್ ಸಾಹು ಮತ್ತು ಇತರ 4 ಕಾರ್ಯಕ್ರಮ ಸಂಘಟಕರ ವಿರುದ್ಧ ಕಾರ್ಡೆಲಿಯಾ ಡ್ರಗ್ ಬಸ್ಟ್ ಪ್ರಕರಣದಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಪ್ರಕರಣ ರದ್ದುಪಡಿಸಲಾಗಿದೆ ಎಂದು ಎನ್‌ಸಿಬಿ ಹೇಳಿದೆ. ಆರ್ಯನ್ ಸುಮಾರು ಒಂದು ತಿಂಗಳು ಜೈಲಿನಲ್ಲಿ ಕಳೆದಿದ್ದರು.

ಕಳೆದ ವರ್ಷ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋದ ತನಿಖೆಯ ಮಧ್ಯೆ ಅರ್ಬಾಜ್ ಮರ್ಚೆಂಟ್ ಮತ್ತು ಮುನ್‌ಮುನ್ ಧಮೇಚಾ ಅವರನ್ನು ಬಂಧಿಸಲಾಗಿತ್ತು. ಸುಮಾರು ನಾಲ್ಕು ವಾರಗಳ ನಂತರ ಅ. 30 ರಂದು ಅವರು ಜೈಲಿನಿಂದ ಹೊರಬಂದಿದ್ದರು.

ಈ ಪ್ರಕರಣದಲ್ಲಿ ಶಾರುಖ್ ಖಾನ್ ಪುತ್ರನ ವಿರುದ್ಧ ಯಾವುದೇ ಪುರಾವೆಗಳು ಕಂಡುಬಂದಿಲ್ಲ ಎಂದು ಎನ್‌ಸಿಬಿಯ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಹಿಂದೆ ಹೇಳಿತ್ತು. ಆರ್ಯನ್‌ನನ್ನು "ದೊಡ್ಡ ಡ್ರಗ್ಸ್ ಪಿತೂರಿ ಅಥವಾ ಅಂತಾರಾಷ್ಟ್ರೀಯ ಡ್ರಗ್ಸ್ ಟ್ರಾಫಿಕಿಂಗ್ ಭಾಗವಾಗಿ ಸಿಲುಕಿಸಲಾಗಿದೆ ಎಂದು ಹೇಳಲಾಗಿತ್ತು.

ಆರಂಭದಲ್ಲಿ ಈ ಪ್ರಕರಣವನ್ನು ಎನ್‌ಸಿಬಿ ಮುಂಬೈ ತನಿಖೆ ನಡೆಸಿತು. ಆದರೆ ನಂತರ ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಅವರ ಆರೋಪದ ನಂತರ ಪ್ರಕರಣದ ಬಗ್ಗೆ ರಾಜಕೀಯ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ನಂತರ ಅದನ್ನು ನ.6, 2021 ರಂದು ಡಿಡಿಜಿ (ಆಪ್ಸ್) ಸಂಜಯ್ ಕುಮಾರ್ ಸಿಂಗ್ ನೇತೃತ್ವದ ದೆಹಲಿ ಪ್ರಧಾನ ಕಚೇರಿಯಿಂದ ಎಸ್‌ಐಟಿ ವಹಿಸಿಕೊಂಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆಗಳು ಮಾರಾಟಕ್ಕಿವೆ
40x40, 28 ಚದರ G & F 5BR ಶ್ರೀರಾಂಪುರ SBM Layout 42x40 35 Sq 4BR + Home theater, Dattagalli 3ನೇ ಹಂತ, 20x30, 12 Sq G & F North, E & F Block, ರಾಮಕೃಷ್ಣನಗರ
9448938989 / 7892035789

ಹೊಸ ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ ಮನೆ, 3 ಬೆಡ್ ರೂಂ, ಆಲ್ ಟೀಕ್, ಇಟಲಿಯನ್ ಕಿಚನ್, ವಿಜಯನಗರ 4ನೇ ಹಂತದ ಹತ್ತಿರ
8618495118

Job in Mysore
Mohan Kheda Ceramics
Tiles Marketing Executives - 10 Nos.
Salary: Rs. 10,000 to 25,000 + Incentive
J.P. Nagar, Opp. Maharshi Public School.
7892510068, 9620967801

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಡ್ರೈವಿಂಗ್, ಸೂಪರ್ ವೈಸರ್: 16,500+ W/o (8 hrs), ಗಾರ್ಡ್: 15,500+W/o (8hrs) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

ಬೇಕಾಗಿದ್ದಾರೆ
ಮಂಗಳೂರು ಶೈಲಿಯ ಮಾಂಸಾಹಾರಿ ಅಡುಗೆ ಭಟ್ಟರು ಬೇಕಾಗಿದ್ದಾರೆ ಸುಗ್ಗಿಮನೆ ರೆಸ್ಟೋರೆಂಟ್, ಸ್ವೀಚ್ & ಹಿಯರಿಂಗ್ ಸರ್ಕಲ್, ಬೋಗಾದಿ ರಸ್ತೆ, ಮೈಸೂರು. ಸಂಪರ್ಕಿಸಿ:
Mob: 9448654164

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

20x30 ಮುಡಾ ಸೈಟು ಬೇಕಾಗಿದೆ
ಕುವೆಂಪುನಗರ, ಅರವಿಂದನಗರ, ಸರಸ್ವತಿಪುರಂ, ಟಿ.ಕೆ.ಲೇಔಟ್, ಶಾರದಾದೇವಿನಗರ, ವಿಜಯನಗರ 3ನೇ ಸ್ಟೇಜ್ ಸುತ್ತಮುತ್ತ. ಮಾಲೀಕರು ನೇರವಾಗಿ ಸಂಪರ್ಕಿಸಿ:
9448071474

ಶಿಕ್ಷಕಿಯರು ಬೇಕಾಗಿದ್ದಾರೆ
(ವಾಹನ ಸೌಲಭ್ಯವಿದೆ)
BSC, B.Ed - 04
D.Ed - 04
9663577578
8147472526

TEACHERS REQUIRED
Vidyavahini School (R)
Hebbal, 2nd Stage, Mysuru - 570017
Nursery - NST
P E Teacher - D.P.ED/ B.P.Ed
Computer Teacher - BCA, MCA
Email: vidyavahini06@gmail.com
9844032278
7795115811

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

HOUSE FOR RENT
Single BHK @ 2nd Main, 9th Cross, Vidyaranayapuram
9740852698

ತಕ್ಷಣ ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಲೇಡಿಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9036890169
9380791511

ಗೃಹ ಸಾಲ
ಬಡ್ಡಿ ದರ 6.7% ರಿಂದ
ಎಲ್ಲಾ ರೀತಿಯ ಸಾಲಕ್ಕಾಗಿ (11 ಬಿ ಸೇರಿದಂತೆ)
ಜ್ಞಾನಲಕ್ಷ್ಮಿ ಎಂಟರ್ ಪ್ರೈಸಸ್
9606888253

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೊಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000 – 18,000/– ರವರೆಗೆ
9739292222 / 0821-3563782
9035113222

RENT / SALE
30x40 independent House RENT at Vijayanagar 3rd Stage, 20x30 Duplex, 30x40 & 40x60 Ground & First Floor House SALE at Dattagalli
6364462293

ಜಮೀನು ಬೇಕಾಗಿದೆ
ಜಂಟಿ ಅಭಿವೃದ್ಧಿ (J.V) ಲೇಔಟ್ ನಿರ್ಮಿಸಲು ಮುಡಾ ಅಥವಾ ಡಿಟಿಸಿಪಿ, ಟೌನ್ ಪ್ಲಾನಿಂಗ್
8867770058
8867770059

SITE FOR SALE
60x40 feet, East facing at Ahad City, Mysuru. (Mahadevpura road). Beautiful layout, Gated community with Security, Water Supply, Electricity, UGD and Multiple Beautiful Gardens. Contact:
9901231117

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

S.M. GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5300
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ.(T&C)
8050518881

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ಸಂಬಳ: 14,500 /- (8 hours, 26 days), ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

ASFT Fashion Design Courses
3 MONTHS SHORT TERM COURSES
* Basic Hand Embroidery * Basic Stitches & Motifs Kurtha * Saree Designing for hand * Embroidery Motif * Basic Sewing * Basic Necklines * 2 Frock Zabla Petticoat * Blouse Lining without lining.
Srirampura Branch - Alpha Intl. School.
Proposed Branch: Gokulam & Udayagiri
Mob: 782 993 7469

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿ ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Any Degree Pass / Fail ಆದವರಿಗೆ Helper, Packing, Labelling ಮತ್ತು Cashier, Billing, Data Entry, Receptionist, Front office ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000/– ದಿಂದ 39,000/– (ESI+PF+OT) ಸೇರಿ
7892878915
9663704915

WANTED
Business Development Manager
9886653735
8970066666
www.nextstepz.in

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ತಕ್ಷಣ ಬೇಕಾಗಿದ್ದಾರೆ
EXECUTIVE ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ :–
6364414499

ಬೇಕಾಗಿದ್ದಾರೆ
ಕೃಷಿ ಸಂಜೀವಿನಿ – ಅನ್ನದಾತರ ಅಭಿವೃದ್ಧಿಗಾಗಿ
ಕೃಷಿ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಮೈಸೂರು, ಮಂಡ್ಯ, ಮಡಿಕೇರಿ, ಚಾಮರಾಜನಗರ ಜಿಲ್ಲೆಗಳಲ್ಲಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು
0821-3554258 | 98453 95000

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

WANTED
Tele Callers & Field Executives for Banking Collections, Salary: 10,000/ - to 12,000/-, Address: #660, 3rd Cross, S.S.Nagar, Bannimantap-15
9972237327
9686717249

NEWLY CONSTRUCTED
House for Lease 40x60 N/F, 2BHK, First Floor, Behind Christ Public School, Bogadi. Vegetarians Only
9886996469

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಕಳೆದಿದೆ
ರಿಜ್ವಾನ್ ಉಲ್ಲಾ, #101, ಇಡಬ್ಲ್ಯೂಎಸ್, 2ನೇ ಹಂತ, ಬನ್ನಿಮಂಟಪ, ಮೈಸೂರು, ಇವರಿಗೆ ಸೇರಿದ ಮೂಲ ಸ್ವತ್ತಿನ ಸ್ವಾಧೀನ ಪತ್ರ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9945373469

ಕಳೆದಿದೆ
ತಲಕಾಡು ಗೋವಿಂದರಾಜ್ ಐಯ್ಯಂಗಾರ್ ರಂಗನ್, ಮನೆ ನಂ. 523, 3ನೇ ಮೇನ್, ಬಿಎಸ್‌ಕೆ 3ನೇ ಹಂತ, 2ನೇ ಫೇಸ್, ಬೆಂಗಳೂರು ದಕ್ಷಿಣ, ಬೆಂಗಳೂರು ಇವರಿಗೆ ಸೇರಿದ ಮೈಸೂರು ಉಪನೊಂದಣಾಧಿಕಾರಿಯವರ ಕಛೇರಿ, 01ನೇ ಪುಸ್ತಕ ಸಂಖ್ಯೆ ದಸ್ತಾವೇಜು ನಂ. ಎಂ.ಡಿ.ಎ-01-03236-2009-10 ಸಿಡಿ ನಂ. ಎಂ.ಡಿ.ಎಡಿ 36 ರಲ್ಲಿ ನೊಂದಣಿ ಕ್ರಯ ಪತ್ರದ ಮೂಲಕ ಮೈಸೂರು ನಗರದ ನ್ಯಾಷನಲ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ, ಹೆಬ್ಬಾಳು ಗ್ರಾಮ ಬಡಾವಣೆ, ನಿವೇಶನ ಸಂಖ್ಯೆ 139ರ ಖಾತಾ ಪತ್ರ ನಂಜನಗೂಡು ಪಟ್ಟಣದ ಎಂ.ಜಿ.ಎಸ್. ರಸ್ತೆಯಲ್ಲಿ ಆಕಸ್ಮಿಕವಾಗಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 6362387506

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

WANTED
Required Male / Female Staffs for Office work. Qualification: SSLC / PUC Pass / Fail, Salary - 6000/- Raasi Technologies Pvt. Ltd C/o LIC Branch I, K.R.S Road, Mysuru
6366286910

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ಕ್ಯಾಷಿಯರ್ ಮತ್ತು ಹೆಲ್ಪರ್ಸ್
8277205413

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೆಸರಾದಂತಹ ಲಾಡ್ಜ್ ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. Receptionist & Maintenance, Near Hootagalli, SRS Mysore. Boy or Girl general & Night Shift, Night Shift, Time Morning : 9 am to 6.30 pm, Night 6.30 pm to 8.30 am
9113037353 / 9916899995

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ತರಬೇತಿ ಮೈಸೂರಿನಲ್ಲಿ ಟೈಲರಿಂಗ್ ಮತ್ತು ಬ್ಯೂಟಿಷಿಯನ್ ಯಾವುದೇ ರೀತಿಯ ಶುಲ್ಕಗಳೂ ಇರುವುದಿಲ್ಲ. ಸೀಮಿತ ಸೀಟ್‌ಗಳು, ಮೊದಲು ಬಂದವರಿಗೆ ಆದ್ಯತೆ
9844736136 / 9844264134

WANTED TEACHERS
BSc, BEd, English & Maths 1st STD to 5th STD Only Ladies Gurukula Academy, JP Nagar, Mysore. Call:
9886142884

WANTED
PART TIME LECTURER
Kannada, English, Physics, Chemistry, Maths, Biology, Accountancy, Business Studies, Statisitics, Computer Science, Geogrphy, Histroy, Political Science, Office Assistant, Attender
9535161811

ಡ್ರೈವರ್ ಬೇಕಾಗಿದ್ದಾರೆ
3 ವ್ಹೀಲರ್ ಆಟೋ
9611073939
9743739559

VOICE OF 2022
Register your Name Now For the Audition on 11th June at Mysore Kannada Songs Only. Call:
9980959598

SHANTALA TYPEWRITING, SHORTHAND & COMPUTER INSTITUTE
(RECOGNIZED BY GOVERNMENT OF KARNATAKA) SURYA BAKERY CIRCLE, HEBBAL, MYSORE (1) ENGLISH & KANNADA TYPEWRITING & SHORTHAND COURSES (2) ENGLISH & KANNADA STENOGRAPER COURSES, (3) GOVT. COMPUTER COURSES. S.SRINIVASAN:
9900462349

ಬೇಕಾಗಿದ್ದಾರೆ
ಎಸ್.ವಿ. ಮ್ಯಾನೇಜ್‌ಮೆಂಟ್ ಸರ್ವೀಸಸ್ ಸರಸ್ವತಿಪುರಂ, ಮೈಸೂರು. ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
9972924470

ಗ್ಲೋಬಲ್ ಏಜೆನ್ಸಿ
WANTED (ಬೇಕಾಗಿದ್ದಾರೆ)
8th, 9th, 10th, PUC, ITI 15,000 to 20,000 (ಸಂಬಳ) ಹೆಬ್ಬಾಳ್ ಇಂಡಸ್ಟ್ರೀಸ್ ಏರಿಯಾ # 1st Floor, 27/C, Metagalli Post, Hebbal Main Road, Mysore 5700016
9900973818 / 9916739611
8197750343

ಸುವರ್ಣ ಯಾತ್ರ
ಚಾರ್‌ದಾಮ್ ಪ್ರವಾಸ 13 ದಿನಗಳು 11/06/22 ದೆಹಲಿ, ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಬದ್ರಿನಾಥ ಹಾಗೂ ಇತರೆ. ತಮಿಳುನಾಡು ಹಾಗೂ ನವಗ್ರಹ ಪ್ರವಾಸ 5 ದಿನಗಳು.
ರಾಮೇಶ್ವರ, ಕನ್ಯಾಕುಮಾರಿ, 9 ನವಗ್ರಹ, ತಂಜಾವೂರು, ಸುಚಿಂದ್ರಂ ಹಾಗೂ ಇತರೆ 26/06/22
9019462508 / 9008381022

WANTED
Driver - Ciaz, Bolera, Tata ace , Eicher vehicle
Mail- bilvagreen@gmail.com
Whatsapp-
9945229013

ಮನೆ ಭೋಗ್ಯಕ್ಕೆ ಇದೆ
(ಸಸ್ಯಹಾರಿಗಳಿಗೆ ಮಾತ್ರ)
ಚಿಕ್ಕ ಸಂಸಾರಕ್ಕಾಗಿ ಒಂದು ಬೆಡ್ ರೂಮಿನ ಮನೆ ಮೊದಲನೆ ಮಹಡಿ Out House ನಲ್ಲಿ ಭೋಗ್ಯಕ್ಕೆ ಇದೆ. ಸೋಲಾರ್ ಸೌಲಭ್ಯವುಳ್ಳ ಹೊಸದಾಗಿ ಪೇಂಟ್ ಮಾಡಿಸಿರುವ, ಸುಸಜ್ಜಿತ ಮನೆ, ವಿದ್ಯಾರಣ್ಯಪುರಂ, ರಾಮಲಿಂಗೇಶ್ವರ ದೇವಸ್ಥಾನದ ಬಳಿ ಇದೆ. ಭೋಗ್ಯದ ಅವಧಿ ಮೂರು ವರ್ಷಗಳು 7 ಲಕ್ಷ Negotiable ಸಂಪರ್ಕಿಸಬೇಕಾದ ಸಂಖ್ಯೆ
9449857488 / 9449048488

REQUIRED TEACHERS
Part Time
Skills: Spoken English and Basics Maths
Location : Siddhartha Layout, Concept : Abacus
(Training will be Provided)
9731254312

ಹೊಸ ಮನೆ ಮಾರಾಟಕ್ಕಿದೆ
(MUDA) 30x40 ಡ್ಯೂಪ್ಲೆಕ್ಸ್ 3BHK with attach ಪೂರ್ವ ದಿಕ್ಕು 100% ವಾಸ್ತು ಗ್ರಾನೈಟ್ ಫ್ಲೋರಿಂಗ್, ಕಂದಾಯನಗರ, ನಿಯರ್ BSNL ಆಫೀಸ್, ಶ್ರೀರಾಂಪುರ, ಮೈಸೂರು ಸಂಪರ್ಕಿಸಿ
9632380330

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan 3D Elivation, Approval, Loan ಸಹಿತ Construction ಮಾಡಿಕೊಡುತ್ತೇವೆ
9620528490

ಮನೆ ಮತ್ತು ಸೈಟು ಮಾರಾಟಕ್ಕಿದೆ
20x30 G/F & F/F ರಾಮಕೃಷ್ಣನಗರ
30x40 ನ್ಯಾಯಾಂಗ ಬಡಾವಣೆ
9741076619

ಬೇಕಾಗಿದ್ದಾರೆ
ಮೈಸೂರಿನ ರೆಸ್ಟೋರೆಂಟ್ ಒಂದಕ್ಕೆ ಈ ಕೆಳಕಂಡ ಅನುಭವಿ ಸಿಬ್ಬಂದಿ ಬೇಕಾಗಿದ್ದಾರೆ.
ಫಿಲ್ಟರ್ ಕಾಫಿ ಮಾಸ್ಟರ್ –1, ತಟ್ಟೆ ಇಡ್ಲಿ ಮತ್ತು ದೋಸೆ ಮಾಸ್ಟರ್ –1, ಸ್ವಚ್ಛತಾ ನಿರ್ವಹಣೆ ಸಿಬ್ಬಂದಿ – 4 ಮಹಿಳೆಯರು, (ಹೌಸ್ ಕೀಪಿಂಗ್) – 3 ಪುರುಷರು, ಭದ್ರತಾ ಸಿಬ್ಬಂದಿ –2, ಪುರುಷರು (ಮಾಜಿ ಸೈನಿಕರಿಗೆ ಆದ್ಯತೆ) ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ ವಿವರ ಮತ್ತು ನಿರೀಕ್ಷಿಸುವ ವೇತನವನ್ನು ಈ ಸಂಖ್ಯೆಗೆ Whatsapp ಮಾಡಿ
9440433144

SITES FOR SALE
Residential MUDA Site 40x60 W/F on 60 ft Road, IDEAL for Apartment at North - East, N.R.Mohalla, Mysore. Alinated - D.C. Approved Sites at Yedadore Very Close to Mysore - T.N.Pura, NH Road Toll Gate, T.N.Pura Taluk, Mysore
9538832267 / 9448750734

FLAT FOR LEASE
3BHK with Attached Bath Room, Semi Funrished, Car Parking at Mittal Pride Appartment, H.D Kote Road, Mysore. Contact: Brokers Excuse
9008967370

ಕೆಲಸಕ್ಕೆ ಬೇಕಾಗಿದ್ದಾರೆ
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಡಾ॥ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್
9742361663 / 8123179664

HOUSE FOR SALE
20x30 (North) Ground Floor + Duplex House in Dattagalli 3rd Stage, Kanakadasanagara (Buyers only)
9110826919

ಸೈಟು ಮಾರಾಟಕ್ಕಿದೆ
30x40 ಅಡಿ ವಿಸ್ತೀರ್ಣ ಜೆ.ಪಿ.ನಗರ, ಮುಡಾ ಸೈಟು 50 ಮೀಟರ್ ರಿಂಗ್ ರೋಡ್ (West Face)
9980991353

ಇಟ್ಟಿಗೆ ದೊರೆಯುತ್ತದೆ
R.B.I
ನಮ್ಮಲ್ಲಿ ಉತ್ತಮ ದರ್ಜೆಯ ಇಟ್ಟಿಗೆಯು ಕಡಿಮೆ ದರದಲ್ಲಿ ತಕ್ಷಣ ದೊರೆಯುತ್ತದೆ. ಸಂಪರ್ಕಿಸಿ:
9845480295
9900635957

Govt. Job ಇರುವ ಮಕ್ಕಳಿಲದಂತಹ ವಿಚ್ಛೇದಿತ ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
Hindu ಒಕ್ಕಲಿಗ 48/5.5/ BA work as a Govt. Health Dep. Employee Salary 75,000/- ಇರುವಂತಹ ವರನಿಗೆ ಯಾವುದೇ ಜಾತಿಯ ಅಭ್ಯಂತರ ವಿಲ್ಲದೇ 2ನೇ ಸಂಬಂಧಕ್ಕೆ ವಿಧವೆ / ವಿಚ್ಛೇದಿತೆ, ನೌಕರಸ್ಥ / ವಧು ಬೇಕಾಗಿದ್ದಾರೆ. (ಮಕ್ಕಳಿದ್ದರು ಪರವಾಗಿಲ್ಲ) ಬೆಂಗಳೂರು
9742458242

ದಾಖಲಾತಿ ಆರಂಭಗೊಂಡಿದೆ
ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ
ಮೈಸೂರಿನಲ್ಲಿ ಕಳೆದ 39 ವರ್ಷಗಳಿಂದ ಈ ಮಕ್ಕಳಿಗೋಸ್ಕರವೇ ಶ್ರಮಿಸುತ್ತಿರುವ ಮೊಟ್ಟಮೊದಲ ಸಂಸ್ಥೆ. ಇಲ್ಲಿ ಎಲ್ಲಾ ವಯೋಮಾನದ ಮಕ್ಕಳನ್ನು ದಾಖಲಿಸಿಕೊಂಡು ವಿಶೇಷ ತರಬೇತಿ ಹೊಂದಿದ, ನುರಿತ ಅಧ್ಯಾಪಕ ವರ್ಗದವರಿಂದ ಈ ಮಕ್ಕಳಿಗೆ ವಿವಿಧ ತರಬೇತಿಗಳನ್ನು ನೀಡಲಾಗುತ್ತದೆ. ವಿಳಾಸ: ರಮಣ ಮಹರ್ಷಿ ಕೇಂದ್ರದ ಹತ್ತಿರ ದೋಸಾ ಪಾಯಿಂಟ್ ಎದುರು ಕುವೆಂಪುನಗರ.
8618223393 / 8867890922
8095308580

ಬೇಕಾಗಿದ್ದಾರೆ
ರೂಮ್ ಬಾಯ್ಸ್ – 02
ವಿಳಾಸ: ಶ್ರೀ ಗಣೇಶ್ ಪ್ರಸಾದ್ ಲಾಡ್ಜ್ 1096 ಶಿವರಾಮಪೇಟೆ ಮುಖ್ಯ ರಸ್ತೆ, ಮೈಸೂರು – 570001
9986756866

SURYA COACHING
Excellent Coaching II PUC Commerce- Accounts, Statistics, Business Maths, Spoken English etc., B.Com, BBM also, Low Fees. 100% personal Attention
9901932751

MUDA SITES FOR SALE
30x40, 30x50 6km from Mysore City Centre @ 27.5 Lacs. Call Now
7829872142
7411848781

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರು ಮೈಸೂರಿನಲ್ಲಿರುವ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ 4th, 10th, PUC, ITI, ಡಿಪ್ಲೋಮೋ ಡಿಗ್ರಿ Pass / Fail ಆದ ಯುವಕ – ಯುವತಿಯರಿಗೆ ನೇರನೇಮಕಾತಿ ESI - PF ಊಟ ವಸತಿಯೊಂದಿಗೆ 18,000 – 45,000 ಕೂಡಲೇ ಸಂಪರ್ಕಿಸಿ:
8095311011
8095211011

COMMERCIAL SPACE FOR RENT
Main Road, Yelwala & 800 Sq Feet, Surya Bekary Road, Vijayanagar
9035428851

ಹೊಸ ಮನೆ ಮಾರಾಟಕ್ಕಿದೆ
ಮೈಸೂರು 30x40 Duplex, MUDA Employees Layout, ದಟ್ಟಗಳ್ಳಿ, ಮೈಸೂರು 3ನೇ ಹಂತ 3BHK. ಲಿಂಗರಾಜು:
9945615736

ಉಚಿತ ಹೊಲಿಗೆ ಕೌಶಲ್ಯ ತರಬೇತಿ
ತರಬೇತಿಯ ಅವಧಿ 3 ದಿನಗಳು, ತರಬೇತಿ ವಿವರ: Stitching, Zigjag, OVerlock, Basic Machine Services, Machine Maintenance ಕೇವಲ 100 ಅಭ್ಯರ್ಥಿಗಳಿಗೆ ಮಾತ್ರ. (ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ) ಗಾನವಿ ಇಂಟರ್ನ್ಯಾಷನಲ್, ಸಬರ್ಬ್ ಬಸ್ ಸ್ಟ್ಯಾಂಡ್ ಹತ್ತಿರ, ಸಂಗಮ್ ಥಿಯೇಟರ್ ರಸ್ತೆ.
9590666328 / 6360737581
9900283883

ಬೇಕಾಗಿದ್ದಾರೆ (VACANCY)
ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ಲೇವುಡ್ ಕಂಪನಿಗೆ ಪುರುಷರು 18 ರಿಂದ 50 ವರ್ಷದ ಒಳಗೆ ಮತ್ತು ಮಹಿಳೆಯರು 25 ರಿಂದ 45 ವರ್ಷ ಒಳಗಿನವರು ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸದ ಸಮಯ: ಮಹಿಳೆಯರು 8.30 ರಿಂದ 5.30, ಸಂಬಳ: 9,100/–, ಕೆಲಸದ ಸಮಯ: ಪುರುಷರು 8.30 ರಿಂದ 6.30 ಸಂಬಳ: 10,500/– ಇಂಟರೀವ್: ಎಕ್ಸೆಲ್ ಪಬ್ಲಿಕ್ ಸ್ಕೂಲ್ ಹತ್ತಿರ. ಸಂಪರ್ಕಿಸಿ: ಕೋಮಲ್ ಎಂಟರ್‌ಪ್ರೈಸಸ್
ರತ್ನಯ್ಯ: 9900889325
ಬೋರೇಗೌಡ: 8050905152

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ 12,000/– ಸಸ್ಯಹಾರಿ, ಮಾಂಸಹಾರಿ ಗೊತ್ತಿರ ಬೇಕು. ಊಟ, ರೂಂ ಉಚಿತ. ಸಂಪರ್ಕಿಸಿ:
9740098047
9740098064

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡೇಶ್ವರಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಚುನಾವಣೆಯಲ್ಲಿ ಓಬಿಸಿ ಮತದಾರರೇ ನಿರ್ಣಾಯಕ

ರಾಷ್ಟ್ರೀಯ ಓಬಿಸಿ ಪ್ರಧಾನ ಕಾರ್ಯದರ್ಶಿ ಯಶ್‌ಪಾಲ್ ಸುವರ್ಣ



ಮಂಡ್ಯ, ಮೇ 27(ಮೋಹನ್‌ರಾಜ್)– ಕೇಂದ್ರ ಮತ್ತು ಕೆಲವು ರಾಜ್ಯಗಳಲ್ಲಿ ಹಿಂದುಳಿದ ವರ್ಗದ ಜನರ ಬೆಂಬಲದಿಂದ ಬಿಜೆಪಿ ಗೆಲುವು ಸಾಧಿಸಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಓಬಿಸಿ ಮತದಾರರ ಪಾತ್ರ ನಿರ್ಣಾಯಕ ಎಂದು ರಾಷ್ಟ್ರೀಯ ಓಬಿಸಿ ಪ್ರಧಾನ ಕಾರ್ಯದರ್ಶಿ ಯಶ್‌ಪಾಲ್ ಸುವರ್ಣ ತಿಳಿಸಿದರು.

ನಗರದ ಬಿಜೆಪಿ ವಿಕಾಸ ಭವನದಲ್ಲಿ ನಡೆದ ಓಬಿಸಿ ಜಿಲ್ಲಾ ಕಾರ್ಯಕಾರಿಣಿ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ 130 ಕೋಟಿಗೂ ಹೆಚ್ಚಿನ ಜನಸಂಖ್ಯೆ ಇದೆ. ಇದರಲ್ಲಿ ಶೇ.50ಕ್ಕೂ ಹೆಚ್ಚು ಮಂದಿ ಹಿಂದುಳಿದ ವರ್ಗದವರಿದ್ದಾರೆ. ರಾಜ್ಯದ 223 ಮಂಡಲಗಳಲ್ಲೂ ಓಬಿಸಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದರು.

ಬೇರೆ ಪಕ್ಷದವರು ಹಿಂದುಳಿದವರನ್ನು ಕೇವಲ ಓಟ್‌ಬ್ಯಾಂಕ್ ಆಗಿ ಮಾತ್ರ ಬಳಸಿಕೊಳ್ಳುತ್ತಿದ್ದರು. ಪ್ರಧಾನಿ ಮೋದಿ ಸರ್ಕಾರದಲ್ಲಿ 27 ಓಬಿಸಿ ಸಚಿವರಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆಲುವಿಗೆ ಓಬಿಸಿ ಪಾತ್ರ ಅತಿ ಮುಖ್ಯವಾಗಿತ್ತು. ಹೀಗಾಗಿ ಅಲ್ಲೂ ಸಹ 28 ಸಚಿವರು ಯೋಗಿ ಸಂಪುಟದಲ್ಲಿದ್ದಾರೆ ಎಂದರು.

ಮಂಡ್ಯದಲ್ಲಿ ಹೆಚ್ಚಿನ ಬಿಜೆಪಿ ಶಾಸಕರು, ಸಂಸದರಿಲ್ಲ ಎಂಬ ಅಪವಾದ ವಿದೆ. ಮುಂದಿನ ದಿನಗಳಲ್ಲಿ ನಮ್ಮ ಕಾರ್ಯಕರ್ತರು ಇದನ್ನು ಸವಾಲಾಗಿ ತೆಗೆದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಜನಪ್ರತಿನಿಧಿಗಳನ್ನು ಗೆಲ್ಲಿಸುವ ಮೂಲಕ ಅಪವಾದ ದೂರ ಮಾಡಬೇಕು. ಮಂಡ್ಯದಲ್ಲೂ 4 ರಿಂದ 5 ಲಕ್ಷ ಮಂದಿ ಹಿಂದುಳಿದ ವರ್ಗದವರಿದ್ದಾರೆ. ಚುನಾವಣೆಗಳಲ್ಲಿ ನಾವು ನಿರ್ಣಾಯಕ ಎಂಬುದನ್ನು ಸಾಬೀತು ಪಡಿಸುವಂತೆ ಕರೆ ನೀಡಿದರು. ಪ್ರಸ್ತುತ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ನಡೆಯುತ್ತಿದೆ. ಕಳೆದ ಬಾರಿ ನಮ್ಮ ಅಭ್ಯರ್ಥಿ ಅತ್ಯಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಈ ಬಾರಿ ಅವರನ್ನು ಗೆಲ್ಲಿಸಿ ಕಳುಹಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಆ ಮೂಲಕ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂದರು.

ರಾಜ್ಯ ಪರಿಷತ್ ಸದಸ್ಯ ಡಾ.ಸಿದ್ದರಾಮಯ್ಯ, ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಬಿ.ರಮೇಶ್, ಮೈಸೂರು ವಿಭಾಗೀಯ ಸಂಘಟನಾ ಕಾರ್ಯದರ್ಶಿ ಕುಮಾರಸ್ವಾಮಿ, ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ನೆ.ಲ. ನರೇಂದ್ರಬಾಬು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ನಾಗರಾಜು, ನವೀನ್‌ಕುಮಾರ್, ಎಂ.ಸಿ.ಸಿದ್ದು ಸೇರಿದಂತೆ ಹಲವರಿದ್ದರು.

ವಿಪತ್ತು ನಿರ್ವಹಣೆಗೆ ಮುಂಜಾಗ್ರತಾ ಕ್ರಮ ಅಗತ್ಯ

ಜಿಲ್ಲಾಧಿಕಾರಿ ಎಸ್.ಅಶ್ವಥಿ ಅಭಿಪ್ರಾಯ



ಮಂಡ್ಯ, ಮೇ 27– ಜಿಲ್ಲೆಯಲ್ಲಿ ವಿಪತ್ತು ಸಂಭವಿಸಿದ ಸಂದರ್ಭ ಅಗ್ನಿಶಾಮಕ ದಳ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರವಾಹ ಸಂದರ್ಭ ವಹಿಸಬೇಕಿರುವ ಮುಂಜಾಗ್ರತಾ ಕ್ರಮಗಳನ್ನು ಜಿಲ್ಲಾಡಳಿತದಿಂದ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಅಶ್ವಥಿ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ತಾಲೂಕು ಆಡಳಿತ ಎನ್‌ಡಿಆರ್‌ಎಫ್ ಅಗ್ನಿಶಾಮಕ ದಳ ಮತ್ತು ತುರ್ತು ಸೇವೆ ಇಲಾಖೆಗಳ ಸಹಯೋಗದೊಂದಿಗೆ ಪಾಂಡವಪುರ ತಾಲೂಕಿನ ಕೆರೆ ತೊಣ್ಣೂರಿನಲ್ಲಿ ನಡೆದ ವಿಪತ್ತು ನಿರ್ವಹಣೆ ಅಣಕು ಪ್ರದರ್ಶನ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಕಿ ಅವಘಡ, ಪ್ರವಾಹದಂತಹ ಘಟನೆಗಳು ಘಟಿಸಿದಾಗ ಜಿಲ್ಲೆಯಲ್ಲಿ ಅಗ್ನಿಶಾಮಕ ದಳ ತುರ್ತಾಗಿ ಆಗಮಿಸಿ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಅಗ್ನಿಶಾಮಕ ದಳಕ್ಕೆ ಬೇಕಿರುವ ಉಪಕರಣಗಳನ್ನು ಜಿಲ್ಲಾಡಳಿತದಿಂದ ಸರಬರಾಜು ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರವಾಹ ಉಂಟಾಗುವ ಗ್ರಾಮಗಳನ್ನು ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ಪ್ರಾಣಹಾನಿ, ಜಾನುವಾರು, ಆಸ್ತಿ ಸಂರಕ್ಷಣೆ ಮಾಡಲು ಜಿಲ್ಲಾಡಳಿತ ಸಿದ್ಧವಿದೆ ಎಂದರು.

ಸ್ಥಳೀಯವಾಗಿ ತುರ್ತು ಪರಿಸ್ಥಿತಿಯಲ್ಲಿ ಉಪಕರಣಗಳನ್ನು ಬಳಸಿ ಯಾವ ರೀತಿ ರಕ್ಷಣೆ ಮಾಡುವುದು ಎಂಬ ಮಾಹಿತಿ ಎನ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದವರು ಅಣಕು ಪ್ರದರ್ಶನ ನೀಡಿದ್ದಾರೆ. ವಿಪತ್ತು ನಿರ್ವಹಣೆ ಕುರಿತು ಗ್ರಾಪಂಗಳ ಮಟ್ಟದಲ್ಲಿ ಹೆಚ್ಚು ಪ್ರಚಾರ ಮಾಡಬೇಕು ಎಂದರು.

ಇದೇ ವೇಳೆ ವಿಪತ್ತುಗಳನ್ನು ಮೊದಲೇ ಗುರುತಿಸಿ ಉಂಟಾಗುವ ಹಾನಿ ತಡೆಗಟ್ಟಲು ಬೇಕಿರುವ ಸಲಕರಣೆ ಹಾಗೂ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು. ವಿಪತ್ತಿನ ಸಂದರ್ಭ ಅಧಿಕಾರಿಗಳು ಮೊದಲು ಕೈಗೊಳ್ಳಬೇಕಿರುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಎನ್‌ಡಿಆರ್‌ಎಫ್ ತಂಡ ವಿವರಿಸಿತು.

ಎನ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದವರು ನೀರಿನಲ್ಲಿ ಬಿದ್ದ ವ್ಯಕ್ತಿಯನ್ನು ರಕ್ಷಿಸಲು ಪ್ರಥಮ ಹಂತದಲ್ಲಿ ಕೃತಕವಾಗಿ ಮನೆ ಬಳಕೆ ವಸ್ತುಗಳಾದ ನೀರಿನ ಬಾಟಲ್, ಒಣ ತೆಂಗಿನಕಾಯಿ, ಥರ್ಮಾಕೋಲ್, ಪ್ಲಾಸ್ಟಿಕ್ ಬಿಂದಿಗೆಗಳು ಇನ್ನಿತರ ವಸ್ತುಗಳನ್ನು ಬಳಸಿ ಆಪತ್ತಿನಿಂದ ಪಾರಾಗಬಹುದಾದ ವಿಧಾನಗಳನ್ನು ಪ್ರಾಯೋಗಿಕ ಪ್ರದರ್ಶನದ ಮೂಲಕ ತಿಳಿಸಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಗುರುರಾಜ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಜಿ.ಆರ್.ಜೆ.ದಿವ್ಯಪ್ರಭು, ಜಿಲ್ಲಾ ಎಸ್ಪಿ ಎನ್.ಯತೀಶ್, ಗೃಹ ರಕ್ಷಕ ದಳದ ಎನ್. ವೆಂಕಟೇಶ್, ಪಾಂಡವಪುರ ಎಸಿ ಬಿ.ಸಿ. ಶಿವಾನಂದಮೂರ್ತಿ, ತಹಸೀಲ್ದಾರ್ ನಯನ, ಎನ್‌ಡಿಆರ್‌ಎಫ್ ಇನ್ಸ್‌ಪೆಕ್ಟರ್ ರಮೇಶ್, ಎನ್‌ಡಿಆರ್‌ಎಫ್ ಸಂಯೋಜಕ ವಿಜಯ್ ಕುಮಾರ್.ಜಿ, ನೆಹರು ಯುವ ಕೇಂದ್ರ ಮುಖ್ಯ ಲೆಕ್ಕಾಧಿಕಾರಿ ಹೆಚ್.ಎಂ.ಬಸವರಾಜು ಇದ್ದರು.

ಬಾಲಾಜಿ ಪೇಪರ್ ಮಾರ್ಟ್ ಕಾರ್ಖಾನೆ ವಿರುದ್ಧ ಪ್ರತಿಭಟನೆ



ಮದ್ದೂರು, ಮೇ 27– ತಾಲೂಕಿನ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಬಾಲಾಜಿ ಪೇಪರ್ ಮಾರ್ಟ್ ಕಾರ್ಖಾನೆಯಿಂದ ಬರುವ ಹೊಗೆಯಿಂದ ಕಪ್ಪು ಕಿಟ್ಟ ಹಾಗೂ ಗಬ್ಬು ವಾಸನೆ ಬರುವುದರಿಂದ ಹಲವು ಸಮಸ್ಯೆಯಾಗುತ್ತಿದೆ ಎಂದು ಆರೋಪಿಸಿ ತಾಲೂಕಿನ ರುದ್ರಾಕ್ಷಿಪುರ ಗ್ರಾಮಸ್ಥರು ಶುಕ್ರವಾರ ಕಾರ್ಖಾನೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕಾರ್ಖಾನೆ ಆವರಣದಲ್ಲಿ ಜಮಾಯಿಸಿದ ಗ್ರಾಮಸ್ಥರು ಕಾರ್ಖಾನೆಯಿಂದ ಕಿಟ್ಟ ಹಾಗೂ ಗಬ್ಬು ವಾಸನೆ ಹೊರ ಬಂದು ತೊಂದರೆಯಾಗುತ್ತಿದ್ದರೂ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪರಿಸರ ಸಂರಕ್ಷಣಾ ಇಲಾಖೆಯ ಅಧಿಕಾರಿಗಳ ಪ್ರತಿಕೃತಿ ದಹಿಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದ ಮುಖಂಡ ಆರ್.ಎಂ.ಗಿರೀಶ್ ಮಾತನಾಡಿ, ಕಾರ್ಖಾನೆಯಿಂದ ಹೊರ ಬರುತ್ತಿರುವ ಕಪ್ಪು ಕಿಟ್ಟ ಹಾಗೂ ಕೆಟ್ಟ ವಾಸನೆಯಿಂದ ರುದ್ರಾಕ್ಷಿಪುರ, ಹೊಟ್ಟೆಗೌಡನದೊಡ್ಡಿ, ಕದಲೂರು ಸೇರಿದಂತೆ ಹಲವಾರು ಗ್ರಾಮಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಮತ್ತು ವಿವಿಧ ಬೆಳೆಗಳಿಗೂ ಇದರಿಂದ ತೊಂದರೆಯಾಗಿ ಲಕ್ಷಾಂತರ ರೂ. ನಷ್ಟವಾಗಿದೆ. ಈ ಸಂಬಂಧ ಹಲವಾರು ಬಾರಿ ಪರಿಸರ ಸಂರಕ್ಷಣಾ ಇಲಾಖೆಯವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶೀಘ್ರ ಈ ಸಂಬಂಧ ಕ್ರಮ ಕೈಗೊಳ್ಳದೆ ಹೋದರೆ ಮುಂದಿನ ದಿನಗಳಲ್ಲಿ ಜಾನುವಾರುಗಳನ್ನು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಕರೆತಂದು ಉಗ್ರ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಕಾರ್ಖಾನೆ ಅಧಿಕಾರಿಗಳು ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಪ್ರತಿಭಟನೆಯಲ್ಲಿ ಮುಖಂಡರಾದ ಪ್ರಕಾಶ್, ರಾಮಕೃಷ್ಣ, ರಘು, ನವೀನ್, ಹೇಮಂತ್, ಮರಿಯಪ್ಪ, ಕಿರಣ್, ಸ್ವಾಮಿ, ಗಾಯತ್ರಿ ಇದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಪಾಂಡವಪುರ, ಮೇ 27– ಪಟ್ಟಣದ ಬಿಜಿಎಸ್ ಶಾಲೆ ವಿದ್ಯಾರ್ಥಿ ಪಂಚಮ್ ಜೈನ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 612 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹಿಂದಿ ಮತ್ತು ಇಂಗ್ಲಿಷ್ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.



ವಿ.ಪ್ರತಿಭಾಗೆ ಶೇಕಡಾ 90 ಅಂಕ

ಮಂಡ್ಯ: ನಗರದ ಸೇಂಟ್ ಥಾಮಸ್ ಶಾಲೆ ವಿದ್ಯಾರ್ಥಿನಿ ಹಾಗೂ ಹೌಸಿಂಗ್ ಬೋರ್ಡ್ ನಿವಾಸಿ ಆರ್.ವಿಜಯ್ ಅವರ ಪುತ್ರಿ ವಿ.ಪ್ರತಿಭಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.90 ರಷ್ಟು ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆಯ ಸಾಧನೆಗೆ ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಪಕೋಡ ಮಾರಿ ಎಂದ ಪಕ್ಷಕ್ಕೆ ಪದವೀಧರರು ಮತ ನೀಡಬೇಕೆ?

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಪ್ರಶ್ನೆ



ಚಾಮರಾಜನಗರ, ಮೇ 27(ಎಸ್‌ಎಸ್)– ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿತ್ತು. ಈಗ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗಿ 8 ವರ್ಷ ಪೂರೈಸಿದ್ದು, ಇದುವರೆಗೆ 16 ಕೋಟಿ ಉದ್ಯೋಗ ಸೃಷ್ಟಿಸಬೇಕಾಗಿತ್ತು. ಆದರೆ ಇರುವ ಹುದ್ದೆಗಳಲ್ಲಿ ಶೇ.30ರಷ್ಟು ಉದ್ಯೋಗವನ್ನು ಕಡಿತಗೊಳಿಸಲಾಗಿದೆ. ಇಂತಹ ಪಕ್ಷಕ್ಕೆ ಪದವೀಧರರು ಮತ ನೀಡಬೇಕಾ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಕೊಟ್ಟಿದ್ದ ಭರವಸೆಯನ್ನು ಈಡೇರಿಸಿಲ್ಲ. ಇವರುವ ಉದ್ಯೋಗಕ್ಕೆ ಭದ್ರತೆ ಒದಗಿಸಿಲ್ಲ. ಪ್ರಧಾನಿಗಳಿಗೆ ಉದ್ಯೋಗ ಸೃಷ್ಟಿ ಮಾಡಿ ಎಂದರೆ ಪಕೋಡ ಮಾರಿ ಎಂದಿದ್ದಾರೆ. ಇಂತಹ ಪಕ್ಷಕ್ಕೆ ಮತ ನೀಡಬೇಕಾ ಎಂದು ಪದವೀಧರರೇ ಯೋಚಿಸಬೇಕಾಗಿದೆ ಎಂದರು.

ಭ್ರಷ್ಟಾಚಾರ ಹೆಚ್ಚಳ: ಸಬ್‌ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕದ ವೇಳೆ ಬಿಜೆಪಿ ಸರ್ಕಾರ ವ್ಯಾಪಕ ಭ್ರಷ್ಟಾಚಾರ ನಡೆಸಿದೆ. ಈ ಅವ್ಯವಹಾರದಲ್ಲಿ ಉನ್ನತ ಶಿಕ್ಷಣ ಸಚಿವರ ಕುಟುಂಬದವರು ಭಾಗಿ ಆಗಿರುವ ಶಂಕೆ ವ್ಯಕ್ತವಾಗಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರ ಹೆಚ್ಚಾಗಿದೆ. ಇದರಿಂದ ಕರ್ನಾಟಕಕ್ಕೆ ಕೆಟ್ಟ ಹೆಸರು ಬಂದಿರುವುದು ದೊಡ್ಡ ದುರಂತ ಎಂದು ದೂರಿದರು.

ನೈತಿಕತೆಯೇ ಇಲ್ಲ ಬಿಜೆಪಿ ಸರ್ಕಾರ ಎಸ್‌ಸಿ, ಎಸ್‌ಟಿಗೆ ಮೀಸಲಿರುವ ಅನುದಾನದಲ್ಲಿ ಕಳೆದ ಬಾರಿಯ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಹೋಲಿಸಿದರೆ 12 ಸಾವಿರ ಕೋಟಿ ರೂ.ಗಳನ್ನು ಕಡಿತಗೊಳಿಸಿದೆ. ಇದರಿಂದ ಬಿಜೆಪಿ ಮುಖಂಡರಿಗೆ ಎಸ್‌ಸಿ ಎಸ್‌ಟಿಗಳ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲ. ಆದರೂ ಸಹ ಆ ಪಕ್ಷದ ಮುಖಂಡರು ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ಇದನ್ನು ಜನತೆ ನಂಬಬಾರದು ಎಂದು ಧ್ರುವನಾರಾಯಣ್ ವಿನಂತಿಸಿದರು.

ಶಿಕ್ಷಣಕ್ಕೆ ಮಹತ್ವ: ಕಾಂಗ್ರೆಸ್ ಪದವೀಧರರಿಗೆ ಅನೇಕ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಶಿಕ್ಷಣ ಸಂಸ್ಥೆಗಳನ್ನು ತೆರೆದು ದೇಶದ ಪ್ರಗತಿಗೆ ಶ್ರಮಿಸಿದೆ. ಪಂಚವಾರ್ಷಿಕ ಯೋಜನೆಯ ಮೂಲಕ ಶೈಕ್ಷಣಿಕ ನೀತಿ ಜಾರಿಗೊಳಿಸಿದ್ದು, ಇದನ್ನು ಗಮನಿಸಿ ಕಾಂಗ್ರೆಸ್ ಪಕ್ಷ ಹಾಗೂ ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ತಮ್ಮ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡುವಂತೆ ಪದವೀಧರ ಮತದಾರರಲ್ಲಿ ಧ್ರುವನಾರಾಯಣ್ ಮನವಿ ಮಾಡಿದರು.

ಕುಮಾರನಾಯ್ಕ ಅವರ ವರದಿ ಜಾರಿ ಮಾಡಿದ್ದು, ಕಾಂಗ್ರೆಸ್ ಪದವಿಪೂರ್ವ ಮತ್ತು ಪದವಿ ಉಪನ್ಯಾಸಕರ ನಡುವೆ ಇದ್ದ ವೇತನ ತಾರತಮ್ಯವನ್ನು ನಿವಾರಿಸಿದ್ದು, ಕಾಂಗ್ರೆಸ್ 6ನೇ ವೇತನ ಆಯೋಗವನ್ನು ಶಿಫಾರಸು ಮಾಡಿದ್ದು ಕಾಂಗ್ರೆಸ್. 6.5 ಲಕ್ಷ ಸರ್ಕಾರಿ ನೌಕರರಿಗೆ ಶೇ.30 ರಷ್ಟು ವೇತನ ಹೆಚ್ಚಿಸಿದ್ದು ಕಾಂಗ್ರೆಸ್ ಸರ್ಕಾರ. ನಿರುದ್ಯೋಗ ಸಮಸ್ಯೆ ಬಗೆಹರಿಸಿದ್ದು ಕಾಂಗ್ರೆಸ್. ಇದನ್ನು ಪ್ರಜ್ಞಾವಂತ ಮತದಾರರು ಮನಗಾಣಬೇಕು ಎಂದು ಮನವಿ ಮಾಡಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್. ನರೇಂದ್ರ, ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ, ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮಧು ಜಿ.ಮಾದೇಗೌಡ, ಗುಂಡ್ಲುಪೇಟೆ ಮುಖಂಡ ಹೆಚ್.ಎಸ್. ಗಣೇಶ್‌ಪ್ರಸಾದ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

> ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಬಿಜೆಪಿ ಸರ್ಕಾರದ ಕೊಡುಗೆ ಶೂನ್ಯ. ಕಳೆದ 4 ವರ್ಷಗಳಿಂದ ಒಂದೇ ಒಂದು ಹೊಸ ಯೋಜನೆ ಜಾರಿಗೊಳಿಸಿಲ್ಲ. ಡಿ.ಕೆ.ಶಿವಕುಮಾರ್ ವಿರುದ್ಧ ಇಡಿ ಚಾರ್ಜ್‌ಶೀಟ್ ಸಲ್ಲಿಸಿರುವ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಹೋರಾಟ ನಡೆಸಲಾಗುವುದು. ಬಿಜೆಪಿ ಸರ್ಕಾರ ಸಿಬಿಐ, ಇಡಿ ಸಂಸ್ಥೆಗಳನ್ನು ವಿಪಕ್ಷವನ್ನು ಸದೆ ಬಡಿಯುವ ಕೆಲಸಕ್ಕೆ ಬಳಸಿಕೊಳ್ಳುತ್ತಿದೆ. ಇಂತಹ ಕೆಟ್ಟ ಸರ್ಕಾರವನ್ನು ನಾನು ಎಂದೂ ನೋಡಿರಲಿಲ್ಲ.
>
> –ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷರು.

> ನಾನು ಶಿಕ್ಷಣ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಪದವೀಧರರ ಸಮಸ್ಯೆಗಳ ಬಗ್ಗೆ ನನಗೆ ಸಾಕಷ್ಟು ಅರಿವಿದೆ. ಪ್ರಜ್ಞಾವಂತ ಮತದಾರರು ನನಗೆ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಬೇಕಾಗಿ ವಿನಂತಿ. ಗೆಲ್ಲುವ ಸಂಪೂರ್ಣ ವಿಶ್ವಾಸ ನನ್ನಲಿದೆ.
>
> –ಮಧು ಜಿ.ಮಾದೇಗೌಡ, ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಇಂದು ಆಲೂರಲ್ಲಿ ಶನೇಶ್ವರ ಹರಿಕಥೆ, ಬಸವ ಜಯಂತಿ

ಆಲೂರು, ಮೇ 27–ವೀರಶೈವ ಸಮಾಜ ಹಾಗೂ ಬಸವೇಶ್ವರ ಯುವಕ ಸಂಘದ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ ಕಾರ್ಯಕ್ರಮವನ್ನು ಮೇ 28ರ ಶನಿವಾರ ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ ಗ್ರಾಮದ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ಬಸವೇಶ್ವರ ವೃತ್ತವನ್ನು ಸುಕ್ಷೇತ್ರ ಮಲ್ಲನಮೂಲೆ ಮಠಾಧ್ಯಕ್ಷ ಶ್ರೀ ಚನ್ನಬಸವಸ್ವಾಮಿಗಳು ಉದ್ಘಾಟಿಸುವರು. ನಂತರ ಬಸವ ಭವನ ಮಂದಿರ ಬಳಿ ಷಟ್‌ಸ್ಥಲ ಧ್ವಜಾರೋಹಣ ನಡೆಸಿ, ಮಠದಲ್ಲಿ ಏರ್ಪಡಿಸಿರುವ ಪಾದಪೂಜೆಯಲ್ಲಿ ಭಾಗವಹಿಸುವರು. ರಾತ್ರಿ ಮಹಾ ಮಾನವತಾವಾದಿ ಶ್ರೀ ಬಸವೇಶ್ವರ ಮೂರ್ತಿಯನ್ನು ಕೋಟಿಲಿಂಗ ರಥದಲ್ಲಿಟ್ಟು ಮಂಗಳವಾದ್ಯ, ವೀರಗಾಸೆ ನಂದಿಧ್ವಜ, ಬಾಜಾ ಬಜಂತ್ರಿಗಳೊದಿಗೆ ಅದ್ಧೂರಿ ಮೆರವಣಿಗೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಶನೇಶ್ವರ ಹರಿಕಥೆ: ಗ್ರಾಮದ ಸವಿತ ಸಮಾಜದಿಂದ ಮೇ 28ರ ಶನಿವಾರ ಶ್ರೀ ಶನೇಶ್ವರ ಸ್ವಾಮಿಯ ಹರಿಕಥೆಯನ್ನು ಏರ್ಪಡಿಸಲಾಗಿದೆ. ದೇವರಿಗೆ ವಿಶೇಷ ಪೂಜೆ ನಂತರ ಪ್ರಸಾದ ವಿಯೋಗ ಜರುಗಲಿದ್ದು, ದೇವಸ್ಥಾನ ಆವರಣದಲ್ಲಿ ರಾತ್ರಿ 9 ಗಂಟೆಗೆ ಶ್ರೀ ಶನೇಶ್ವರಸ್ವಾಮಿಯ ಹರಿಕಥೆಯನ್ನು ಶಿವಕುಮಾರ ಶಾಸ್ತ್ರಿ ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಎರಡೂ ಸಮಾಜದ ಮುಖಂಡರು ಮನವಿ ಮಾಡಿದ್ದಾರೆ.

ಮಳೆ ಹಾನಿ: 48 ಗಂಟೆಯಲ್ಲಿ ಪರಿಹಾರ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ. ಕಾವೇರಿ ಸೂಚನೆ

ಚಾಮರಾಜನಗರ, ಮೇ 27–ಮಳೆ ಹಾಗೂ ಪ್ರಕೃತಿ ವಿಕೋಪದಿಂದಾಗಿ ಉಂಟಾದ ನಷ್ಟ ಪ್ರಕರಣಗಳಿಗೆ 24 ರಿಂದ 48 ಗಂಟೆಯೊಳಗೆ ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿ ಅನ್ವಯ ಪರಿಹಾರ ವಿತರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ. ಕಾವೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕೊಳ್ಳೇಗಾಲದ ಪ್ರವಾಸಿಮಂದಿರದಲ್ಲಿಂದು ಪ್ರಕೃತಿ ವಿಕೋಪ ಮತ್ತು ಮಳೆ ಹಾನಿ ಪ್ರಕರಣಗಳ ಕುರಿತು ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಕೃತಿ ವಿಪತ್ತು ಹಾಗೂ ಮಳೆಯಿಂದ ಹಾನಿ ಸಂಭವಿಸಿದ ಸ್ಥಳಕ್ಕೆ ಅಧಿಕಾರಿಗಳು ಕೂಡಲೇ ಭೇಟಿ ನೀಡಿ ಪರಿಶೀಲಿಸಬೇಕು. ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಅಧಿಕಾರಿಗಳು ತೆರಳಿ ಜಂಟಿ ಸಮೀಕ್ಷೆ ನಡೆಸಿ ತುರ್ತಾಗಿ ವರದಿ ಸಲ್ಲಿಸಬೇಕು. ನಷ್ಟಕ್ಕೆ ಒಳಗಾದವರಿಗೆ ಅತಿ ಶೀಘ್ರವಾಗಿ ಪರಿಹಾರ ತಲುಪಿಸಬೇಕು. ವಿಳಂಬ ಧೋರಣೆ ಅನುಸರಿಸಬಾರದು ಎಂದು ಕಾವೇರಿ ತಾಕೀತು ಮಾಡಿದರು. ಮಳೆಯಿಂದ ಹಾನಿಗೀಡಾಗಿರುವ ಶಾಲೆ, ಅಂಗನವಾಡಿಗಳನ್ನು ಗುರುತಿಸಿ ಕ್ರಮ ವಹಿಸುವಂತೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಕಾವೇರಿ ಅವರು, ಕಬಿನಿ, ಕೆಆರ್‌ಎಸ್ ಜಲಾಶಯ ಭರ್ತಿ ಬಳಿಕ ಹೊರಬಿಡುವ ನೀರಿನಿಂದ ಕೊಳ್ಳೇಗಾಲದ ಕೆಲ ಗ್ರಾಮಗಳಲ್ಲಿ ಉಂಟಾಗುವ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಮಳೆ ಸಂದರ್ಭದಲ್ಲಿ ನಗರ, ಪಟ್ಟಣ ಪ್ರದೇಶಗಳಲ್ಲಿ ವಿದ್ಯುತ್ ತೊಂದರೆ ಹಾಗೂ ಸಾಂಕ್ರಾಮಿಕ ರೋಗ ನಿಯಂತ್ರಣ ಕುರಿತು ವಿದ್ಯುತ್ ಪ್ರಸರಣ ಇಲಾಖೆಗಳು ಹಾಗೂ ಆರೋಗ್ಯ ಅಧಿಕಾರಿಗಳು ವಿಶೇಷ ಕಾಳಜಿ ವಹಿಸಬೇಕು. ಕೃಷಿ ಚಟುವಟಿಕೆಗಳಿಗೆ ಪೂರಕವಾಗಿರುವ ರಸಗೊಬ್ಬರ, ಬಿತ್ತನೆ ಬೀಜ ಇನ್ನಿತರ ಪರಿಕರಗಳಿಗೆ ಯಾವುದೇ ತೊಂದರೆಯಾಗಬಾರದು ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

ಡಿಸಿ ಚಾರುಲತಾ ಸೋಮಲ್, ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆ.ಎಸ್.ಸುಂದರ್ ರಾಜ್, ತಹಸೀಲ್ದಾರರಾದ ಮಂಜುಳಾ, ತಾಪಂ ಇಓಗಳಾದ ಮಹೇಶ್, ಕೃಷಿ ಇಲಾಖೆ ಉಪನಿರ್ದೇಶಕ ಸೋಮಶೇಖರ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಪಶುಪಾಲನೆ ಇಲಾಖೆ ಉಪನಿರ್ದೇಶಕ ಸುರೇಶ್, ಪಿಡಬ್ಲ್ಯೂಡಿ ಇಇ ವಿನಯ್ ಕುಮಾರ್, ಪಂಚಾಯತ್‌ರಾಜ್ ಇಇ ಇಬ್ರಾಹಿಂ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ಮಳೆಹಾನಿ ಪ್ರದೇಶಗಳ ಪರಿಶೀಲನೆ



ಚಾಮರಾಜನಗರ: ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಮಳೆ ಹಾಗೂ ಪ್ರಕೃತಿ ವಿಕೋಪದಿಂದ ಹಾನಿಗೀಡಾಗಿರುವ ಬೆಳೆ, ವಸತಿಯ ವಿವಿಧ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಇಂದು ಭೇಟಿ ನೀಡಿ, ಪರಿಶೀಲಿಸಿದರು.

ಕೊಳ್ಳೇಗಾಲ ತಾಲೂಕಿನ ಉತ್ತಂಬಳ್ಳಿ ಗ್ರಾಮದಲ್ಲಿ ಮಳೆಯಿಂದ ಕುಸಿದು ಹೋಗಿರುವ ಮನೆಯನ್ನು ವೀಕ್ಷಿಸಿದರು. ಅಧಿಕಾರಿಗಳಿಂದ ಪ್ರಕರಣ ಸಂಬಂಧ ಮಾಹಿತಿ ಪಡೆದುಕೊಂಡರು. ಕುಂತೂರಿನಲ್ಲಿ ಸತತ ಮಳೆಯಿಂದ ಹಾನಿಗೀಡಾಗಿರುವ ಉದ್ದು ಬೆಳೆ ವೀಕ್ಷಿಸಿದ ಕಾವೇರಿ, ಸಂಬಂಧಿಸಿದ ಜಮೀನಿನ ರೈತರೊಂದಿಗೆ ಸಮಾಲೋಚಿಸಿ, ಬೆಳೆಗೆ ಮಾಡಲಾದ ವೆಚ್ಚ ಮತ್ತಿತರ ವಿವರಗಳನ್ನು ಪಡೆದುಕೊಂಡರು.

ಟಗರುಪುರ ಗ್ರಾಮಕ್ಕೆ ಭೇಟಿ ನೀಡಿದ ಉಸ್ತುವಾರಿ ಕಾರ್ಯದರ್ಶಿ ಅಲ್ಲಿಯೂ ಸಹ ಮಳೆಯಿಂದ ಹಾನಿಗೆ ಒಳಗಾಗಿರುವ ಉದ್ದು ಬೆಳೆ ವೀಕ್ಷಿಸಿ, ತದನಂತರ ಯಳಂದೂರು ತಾಲೂಕಿನ ಕೆಸ್ತೂರು ಗ್ರಾಮ ವ್ಯಾಪ್ತಿಯಲ್ಲಿ ಹಾನಿಗೀಡಾಗಿರುವ ಬೆಳೆ ಪರಿಶೀಲಿಸಿದರು. ಕೊಳ್ಳೇಗಾಲ ತಾಲೂಕಿನ ಜಕ್ಕಹಳ್ಳಿಯಲ್ಲಿ ಹಾನಿಗೀಡಾಗಿರುವ ಬಾಳೆ, ತೆಂಗು, ಮುಸುಕಿನಜೋಳ ಬೆಳೆಯನ್ನು ವೀಕ್ಷಿಸಿದರು. ಮಳೆಯಿಂದ ಭಾಗಶಃ ಹಾನಿಯಾಗಿರುವ ಈರುಳ್ಳಿ ಶೇಖರಣಾ ಘಟಕ ಪರಿಶೀಲಿಸಿ, ಮಾಹಿತಿ ಪಡೆದರು.

ಮಳೆಯಿಂದ ರಸ್ತೆ ಅಭಿವೃದ್ಧಿ ವಿಳಂಬ



ವಿರಾಜಪೇಟೆ, ಮೇ 27– ಗ್ರಾಮೀಣ ಭಾಗದ ಎಲ್ಲಾ ರಸ್ತೆಗಳ ಕಾಮಗಾರಿ ನಡೆಸಲಾಗುತ್ತಿದ್ದು, ಇತ್ತೀಚಿನ ಮಳೆಯಿಂದಾಗಿ ರಸ್ತೆ ಅಭಿವೃದ್ಧಿ ಕಾಮಗಾರಿ ವಿಳಂಬವಾಗಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ವಿರಾಜಪೇಟೆ ಸಮೀಪದ ತೋರ ಗ್ರಾಮದ ಕೋರ್ತಿಕಾಡು ರಸ್ತೆಗೆ ಸರ್ಕಾರ ಕಾವೇರಿ ನಿಗಮದಿಂದ ರೂ.99 ಲಕ್ಷ ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ, ಅಲ್ಲಿನ ಪರಿಶಿಷ್ಟ ಪಂಗಡದ ಕಾಲೋನಿಗೆ ರೂ.60 ಲಕ್ಷದ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟನೆ, ವಿರಾಜಪೇಟೆ-ಕುಡ ರಸ್ತೆ ಬೂದಿಮೊಳ ಗೋಲ್ಡನ್ ರಾಕ್ಸ್ ಬಳಿ ರೂ. 1.5 ಕೋಟಿ ಅನುದಾನದಲ್ಲಿ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದರು. ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಉತ್ತಮ ಕಾಮಗಾರಿ ನಡೆಸಿಕೊಟ್ಟಿದ್ದಾರೆ. ಎಂದರಲ್ಲದೆ ಸರಕಾರದ ಅನುದಾನದಲ್ಲಿ ನಡೆಸುವ ಕಾಮಗಾರಿಗಳು ಕಳಪೆಯಾಗದಂತೆ ಗ್ರಾಮಸ್ಥರು ಎಚ್ಚರ ವಹಿಸಬೇಕು ಎಂದರು.

ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ, ಬೇಟೋಳಿ ಮತ್ತು ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶ ತೋರ, ಬೂದಿಮೊಳ ತೋಮರ ಇತರೆಡೆಗಳಲ್ಲಿ ರಸ್ತೆಗಳು ದುಸ್ಥಿತಿಯಲ್ಲಿದ್ದರಿಂದ ಶಾಸಕ ಬೋಪಯ್ಯ ಸರಕಾರದಿಂದ ಹೆಚ್ಚು ಅನುದಾನ ತಂದು ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಸಹಕಾರ ನೀಡಿದ್ದಾರೆ. ಈ ಹಿಂದೆ ಈ ಗ್ರಾಮಗಳಲ್ಲಿ ರಸ್ತೆಗಳೆ ಇರಲಿಲ್ಲ, ಕುಡಿಯುವ ನೀರು, ವಿದ್ಯುತ್ ಇಲ್ಲದೆ ಅನೇಕ ವರ್ಷಗಳಿಂದ ಕುಗ್ರಾಮವಾಗಿತ್ತು. ಶಾಸಕರು ಅನುದಾನ ತಂದು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗಿದ್ದು. ಈಗ ಎಲ್ಲಾ ಸೌಲಭ್ಯಗಳನ್ನು ಹೊಂದಿರುವಂತಹ ಗ್ರಾಮವಾಗಿದೆ ಎಂದು ಹೇಳಿದರು.

ಈ ಸಂದರ್ಭ ಬೇಟೋಳಿ ಗ್ರಾಪಂ ಅಧ್ಯಕ್ಷೆ ಯಶೋದ, ಸದಸ್ಯರಾದ ಎ.ಬೋಪಣ್ಣ, ಸುದೀಶ್, ರಂಜು, ಸುಜೀತ್, ಗ್ರಾಮದ ಎ.ಹರೀಶ್, ಕೆದಮುಳ್ಳೂರು ಗ್ರಾಪಂ ಅಧ್ಯಕ್ಷೆ ಶೀಲಾ ಮೇದಪ್ಪ, ಸದಸ್ಯರಾದ ಪರಮೇಶ್ವರ, ಮಿನಾಕ್ಷಿ, ಜಯಂತಿ, ಮಾಜಿ ಸದಸ್ಯರಾದ ಕಿರಣ್ ಕುಮಾರ್, ಚೋಟು ಬಿದ್ದಪ್ಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮೇ 30, ಕೆಎಸ್‌ಐಐಡಿಸಿ ಎಂಡಿ ಜಿಲ್ಲಾ ಪ್ರವಾಸ



ಮಡಿಕೇರಿ, ಮೇ 27– ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಅವರು ಮೇ 30 ರಂದು ಕೊಡಗು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ.

ಅಂದು ಬೆಳಗ್ಗೆ 10.30 ಗಂಟೆಗೆ ಕೊಡಗು ಜಿಲ್ಲೆಯ ಕುಶಾಲನಗರ ಬಳಿ ಹೆಲಿಪೋರ್ಟ್ ಅಭಿವೃದ್ಧಿಪಡಿಸುವ ಬಗ್ಗೆ ಕುಶಾಲನಗರ ತಾಲೂಕು ಚಿಕ್ಕತ್ತೂರು ಗ್ರಾಮದ ಜಮೀನುಗಳ ಪರಿವೀಕ್ಷಣೆ ಮಾಡಲಿದ್ದಾರೆ. ನಂತರ ಮಧ್ಯಾಹ್ನ 12.30 ಗಂಟೆಗೆ ಪರಿವೀಕ್ಷಣೆ ಹಾಗೂ ಹೆಲಿಪೋರ್ಟ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಲಿದ್ದಾರೆ ಎಂದು ಕೆಎಸ್‌ಐಐಡಿಸಿ ಕಾರ್ಯನಿರ್ವಾಹಕ ಸಹಾಯಕ ಎಂ.ಮಲ್ಲೇಶಪ್ಪ ತಿಳಿಸಿದ್ದಾರೆ.

ಇಂದು ರಕ್ತದಾನ ಶಿಬಿರ

ಗೋಣಿಕೊಪ್ಪ ಮೇ 27– ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಕೊಡಗು ರಕ್ತನಿಧಿ ಕೇಂದ್ರ ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಗೋಣಿಕೊಪ್ಪ ಗ್ರಾಮ ಪಂಚಾಯಿತಿ, ರೋಟರಿ ಕ್ಲಬ್, ವಾಹನ ಚಾಲಕರ ಸಂಘ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಮೇ 28 ರಂದು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ದಾನಿಗಳು 9008732279, 9986325826 ಸಂಖ್ಯೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ವಿವೇಕಾನಂದ ಯೂತ್‌ಮೆಂಟ್ ತಿಳಿಸಿದೆ.

ಕಕ್ಕಬ್ಬೆಯಲ್ಲಿ ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆಗೆ

ಜಿಲ್ಲಾಧಿಕಾರಿಗೆ ಎದುರಾದ ಭರಪೂರ ಸಮಸ್ಯೆ



ಮಡಿಕೇರಿ, ಮೇ 27– ಕುಡಿಯುವ ನೀರು, ಸಾರ್ವಜನಿಕ ರಸ್ತೆ, ಭೂ ದಾಖಲಾತಿಗಳು, ಪಟ್ಟೆದಾರರ ಸಮಸ್ಯೆ, ಆನೆ ಹಾವಳಿ, ವಿದ್ಯುತ್ ಸಮಸ್ಯೆ ಹೀಗೆ ಹಲವು ಸಮಸ್ಯೆಗಳು 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಗ್ರಾಮ ವಾಸ್ತವ್ಯ' ಕಾರ್ಯಕ್ರಮದಲ್ಲಿ ಹೆಚ್ಚಾಗಿ ಕೇಳಿಬಂದವು.

ಕಕ್ಕಬ್ಬೆ ಪ್ರೌಢಶಾಲೆ ಆವರಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ತಾಲೂಕಿನ ಎಲ್ಲಾ ಅಧಿಕಾರಿಗಳ ಸಹಯೋಗದೊಂದಿಗೆ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಗ್ರಾಮ ವಾಸ್ತವ್ಯ' ಕಾರ್ಯಕ್ರಮ ನಡೆಯಿತು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದರ ಜೊತೆಗೆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. ಜಿಲ್ಲಾಧಿಕಾರಿಗಳ ಜೊತೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿರುವುದರಿಂದ ತಮ್ಮ ಸಮಸ್ಯೆಗಳನ್ನು ನೇರವಾಗಿ ಹೇಳಿಕೊಳ್ಳಬಹುದಾಗಿದೆ ಎಂದರು.

ಸ್ಥಳೀಯ ರೈತರೊಬ್ಬರು ಮಾತನಾಡಿ, ರೈತರಿಗೆ ವೈಯಕ್ತಿಕ ಭೂ ದಾಖಲಾತಿ ಇಲ್ಲದಿರುವುದು ಕೊಡಗಿನ ದೊಡ್ಡ ಸಮಸ್ಯೆಯಾಗಿದೆ. ಪಿತ್ರಾರ್ಜಿತ ಆಸ್ತಿ ಇದ್ದರೂ ಸಹ ನಮಗೆ ಭೂ ದಾಖಲಾತಿಗಳು ಇರುವುದಿಲ್ಲ ಯಾವುದೇ ದಾಖಲಾತಿ ಇಲ್ಲದ ಕಾರಣ ನಮಗೆ ತೊಂದರೆ ಆಗುತ್ತಿದೆ ಎಂದರು.

ಗ್ರಾಮದ ಕೆಲವು ಜನರಿಗೆ ಹಕ್ಕುಪತ್ರ ಸಿಕ್ಕಿದೆ. ಇನ್ನು ಕೆಲವರಿಗೆ ಹಕ್ಕು ಪತ್ರ ಸಿಕ್ಕಿಲ್ಲ. ಅಂತವರಿಗೆ ಹಕ್ಕು ಪತ್ರ ನೀಡುವ ಕೆಲಸವಾಗಬೇಕು. ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೋನಿಗಳಿಗೆ ಹೋಗುವ ರಸ್ತೆಯನ್ನು ಸರಿಪಡಿಸಬೇಕು ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಭೂದಾಖಲೆಗಳ ಉಪ ನಿರ್ದೇಶಕ ಶ್ರೀನಿವಾಸ್, ಸಾರ್ವಜನಿಕರಿಂದ ಅರ್ಜಿಗಳನ್ನು ಕಂದಾಯ ಇಲಾಖೆ ವತಿಯಿಂದ ಪರಿಶೀಲನೆ ಮಾಡಿ ಆದಷ್ಟು ಬೇಗ ಪರಿಹರಿಸಿ ಕೊಡಲಾಗುವುದು ಎಂದರು.

ಜಿಲ್ಲಾಧಿಕಾರಿ ಮಾತನಾಡಿ, ಜಿಲ್ಲೆಯಲ್ಲಿ ಕಂದಾಯ ನಿಗದಿಗೆ ಬಹಳ ಬೇಡಿಕೆ ಇದೆ. ಸರ್ಕಾರದ ವತಿಯಿಂದ ಸರ್ವೆ ನಡೆಸಿ ಇದನ್ನು ಪರಿಹರಿಸಲಾಗುವುದು ಎಂದರು.

ಈಗಾಗಲೇ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಿ ಅದನ್ನು ಕಳೆದುಕೊಂಡಿದ್ದರೆ, ಅದರ ನಕಲು ತಹಸೀಲ್ದಾರ್ ಕಚೇರಿಯಲ್ಲಿ ಇರುತ್ತದೆ. ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗ್ರಾಮಸ್ಥರಾದ ಮಾಚಯ್ಯ ಮಾತನಾಡಿ, ಕಂದಾಯ ನಿಗದಿಗೆ ನನ್ನ 6 ಎಕರೆ ಭೂಮಿಯನ್ನು, ತರಲು 13 ವರ್ಷದಿಂದ ಕಚೇರಿಗಳಿಗೆ ಅಲೆದಾಡಿದರು ಸಹ ಇನ್ನೂ ದಾಖಲಾತಿಗಳು ಸಿಕ್ಕಿಲ್ಲ ಎಂದರು. ಮರ ಕಡಿಯಲು ಅನುಮತಿ ನೀಡುವ ಅಧಿಕಾರ ಮತ್ತು ರಸ್ತೆಗಳ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ನೀಡುವಂತೆ ಜಿಲ್ಲಾಧಿಕಾರಿಯವರಿಗೆ ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆಯಲ್ಲಿ ಕಂದಾಯಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳಿವೆ, ರಸ್ತೆ ಕಾಮಗಾರಿ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗೆ ನೀಡಲು ಆಗುವುದಿಲ್ಲ, ಗ್ರಾಮ ಪಂಚಾಯಿತಿಯೂ ಗ್ರಾಮಮಟ್ಟದಲ್ಲಿ ಕಾರ್ಯನಿರ್ವಹಿಸುವುದರಿಂದ ರಸ್ತೆ ಕಾಮಗಾರಿಯ ಸಂದರ್ಭದಲ್ಲಿ ಕಾಮಗಾರಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುತ್ತದೆ ಎಂದು ತಿಳಿಸಿದರು.

ತಹಸೀಲ್ದಾರ್ ಮಹೇಶ್ ಮಾತನಾಡಿ, ಪಟ್ಟೇದಾರ ಹೆಸರು ತೆಗೆದು ವೈಯಕ್ತಿಕ ಆರ್‌ಟಿಸಿ ಮಾಡಿಕೊಡಲಾಗುತ್ತದೆ. ಸೂಕ್ತ ದಾಖಲೆಗಳೊಂದಿಗೆ ಕಚೇರಿಗೆ ಬಂದರೆ ಸಮಸ್ಯೆಯನ್ನು ಪರಿಹರಿಸಲಾಗುವುದು. ಇದರಿಂದ ಸರ್ಕಾರಿ ಸೌಲಭ್ಯ, ಕೃಷಿ ಸಾಲ ಇನ್ನಿತರ ಸೌಲಭ್ಯಗಳನ್ನು ರೈತರು ಪಡೆಯಬಹುದಾಗಿದೆ ಎಂದರು.

ಜಿಲ್ಲಾಧಿಕಾರಿ ಮಾತನಾಡಿ, ಕೊಡಗಿನಲ್ಲಿ ಆರ್‌ಟಿಸಿಗಳ ಸಮಸ್ಯೆ ಬಹಳ ಇದೆ. ವೈಯಕ್ತಿಕ ಆರ್‌ಟಿಸಿ ನೀಡುವ ಕೆಲಸ ಆಗುತ್ತಿದೆ ಆದಷ್ಟು ಬೇಗ ನಿಮ್ಮ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಹೇಳಿದರು.

ಕೆಪಿಟಿಸಿಎಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾದೇಶ್ ಮಾತನಾಡಿ, ಜಿಲ್ಲೆಯಲ್ಲಿ ಎಂಟು ಸ್ಥಾವರಗಳ ಸ್ಥಾಪನೆಗೆ ಪ್ರಸ್ತಾವನೆ ಇದೆ ಅದರಲ್ಲಿ ಮೂರು ಕಡೆ ಈಗಾಗಲೇ ಕಾಮಗಾರಿ ನಡೆಯುತ್ತಿದೆ, ಮಡಿಕೇರಿಯಿಂದ ವಿರಾಜಪೇಟೆಗೆ 66/11 ಕೆ.ವಿ ವಿದ್ಯುತ್ ಕಾಮಗಾರಿ ನಡೆಯುತ್ತಿದೆ. ಇದರಿಂದ ಈ ಭಾಗದ ಜನರಿಗೆ ವಿದ್ಯುತ್ ಸಮಸ್ಯೆಗಳನ್ನು ನಿವಾರಿಸಲಾಗುವುದು ಎಂದರು.

ಗ್ರಾಮದಲ್ಲಿ ಆನೆ ಹಾವಳಿ ಹೆಚ್ಚಿದ್ದು, ಇದನ್ನು ತಡೆಯುವಂತೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರು. ಮತ್ತು ಗ್ರಾಮದಲ್ಲಿ ವೈದ್ಯಕೀಯ ಸೇವೆ, ರೈತರಿಗೆ ರಸಗೊಬ್ಬರ ವಿತರಣೆ, ಪೌಷ್ಟಿಕ ಆಹಾರ, ಹೀಗೆ ಹಲವು ವಿಷಯಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಯಿತು.

ಫಲಾನುಭವಿಗಳಿಗೆ ಸಾಗುವಳಿ ಚೀಟಿ ಮತ್ತು ಮಾಸಾಶನ ಪತ್ರವನ್ನು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ವಿತರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಗ್ರಾಮಸ್ಥರು ಇತರರು ಇದ್ದರು.

ಆಹಾ... ಮೈಸೂರಲ್ಲಿ ತರಾವರಿ ಮಾವು...

● ಕುಪ್ಪಣ್ಣ ಪಾರ್ಕಲ್ಲಿ ಮಾವು ಮೇಳ; ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ, ನೂರಾರು ಮಂದಿ ಭೇಟಿ, ಬಯಸಿದ ಹಣ್ಣುಗಳ ಖರೀದಿ
● ಕೈಗೆಟುಕುವ ಬೆಲೆಗೆ ಇಷ್ಟದ ಹಣ್ಣು ಲಭ್ಯ ● 12 ಬಗೆಯ ಮಾವಿನಹಣ್ಣು ಮಾರಾಟ ● ದಿನಕ್ಕೆ 25 ರಿಂದ 30 ಟನ್ ಮಾವು ನಿರೀಕ್ಷೆ

ಮೈಸೂರು,ಮೇ 27(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಆಯೋಜಿಸಿರುವ ಮೂರು ದಿನಗಳ ಮಾವು ಮೇಳಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನೂರಾರು ಗ್ರಾಹಕರು ಮೇಳಕ್ಕೆ ಭೇಟಿ ನೀಡಿ ತಮಗಿಷ್ಟವಾದ ಮಾವಿನ ಹಣ್ಣು ಖರೀದಿಸಿದರು.

ಹಣ್ಣುಗಳ ರಾಜ ಮಾವಿನಹಣ್ಣುಗಳ ಮೇಳವನ್ನು ಪ್ರತಿವರ್ಷ ತೋಟಗಾರಿಕಾ ಇಲಾಖೆ ಆಯೋಜಿಸುತ್ತಿದ್ದು, ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಮಾವು ಮೇಳ ನಡೆದಿರಲಿಲ್ಲ. ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಇಂದಿನಿಂದ ಆರಂಭವಾದ ಮೂರು ದಿನಗಳ ಮಾವು ಮೇಳಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ ನೀಡಿದರು. ಬಳಿಕ ಮೇಳದಲ್ಲಿರುವ ಎಲ್ಲಾ 24 ಮಳಿಗೆಗಳಿಗೂ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಮಾವು ಬೆಳೆಗಾರರೊಂದಿಗೆ ಸಮಾಲೋಚಿಸಿ ಮಾವಿನ ತಳಿ ಬಗ್ಗೆ ಮಾಹಿತಿ ಪಡೆದರಲ್ಲದೆ, ಮೇಳದಲ್ಲಿ ಪಾಲ್ಗೊಳ್ಳುವುದರಿಂದ ಆಗುವ ಪ್ರಯೋಜನದ ಬಗ್ಗೆ ಬೆಳೆಗಾರರಿಂದ ಅಭಿಪ್ರಾಯ ಸಂಗ್ರಹಿಸಿದರು.

ಒಂದೇ ಸ್ಥಳದಲ್ಲಿ ಹಲವು ಬಗೆಯ ಹಣ್ಣು: ಮಾವು ಮೇಳದಲ್ಲಿ 24 ಮಳಿಗೆಗಳಿದ್ದು, ಮೈಸೂರು, ಮಂಡ್ಯ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧೆಡೆಯಿಂದ ಮಾವು ಬೆಳೆಗಾರರು ತಮ್ಮ ತೋಟದಲ್ಲಿ ಬೆಳೆದ ವಿವಿಧ ಬಗೆಯ ಮಾವಿನ ಹಣ್ಣನ್ನು ತಂದು ಮಾರಾಟ ಮಾಡುತ್ತಿದ್ದಾರೆ. ಒಂದೇ ಸೂರಿನಡಿ 12 ಬಗೆಯ ಮಾವಿನ ಹಣ್ಣುಗಳು ಗ್ರಾಹಕರಿಗೆ ದೊರೆಯುತ್ತಿದ್ದು, ಮಾರುಕಟ್ಟೆಗೆ ಹೋಲಿಸಿದರೆ ಮಾವು ಮೇಳದಲ್ಲಿ ದೊರೆಯುತ್ತಿರುವ ಮಾವಿನ ಹಣ್ಣು ಕಡಿಮೆ ಬೆಲೆಗೆ ದೊರೆಯುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದರು.

ಮಾವಿನ ಹಣ್ಣಿನ ಸಮಯ ಇದಾಗಿದ್ದು, ಮೈಸೂರಿನ ಜನರು ಮೇಳದ ಸೌಲಭ್ಯ ಪಡೆದುಕೊಳ್ಳಬೇಕು. ನೈಸರ್ಗಿಕ ಪದ್ಧತಿಯಲ್ಲಿ ಮಾಗಿದ ಹಣ್ಣುಗಳನ್ನೇ ಮೇಳದಲ್ಲಿ ಮಾರಾಟ ಮಾಡುತ್ತಿದ್ದು, ಇದು ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ. ಯಾವುದೇ ರಾಸಾಯನಿಕ ವಸ್ತುಗಳ ಬಳಸದೇ ಹಣ್ಣು ಮಾಗಿಸಲಾಗಿದ್ದು, ಗ್ರಾಹಕರು ಹೊರಗಿನ ಮಳಿಗೆಯಲ್ಲಿ ಏಸಿ, ವಿದ್ಯುತ್ ಚಾರ್ಜ್ ಸೇರಿಸಿ ಹಣ್ಣನ್ನು ಮಾರಾಟ ಮಾಡುತ್ತಾರೆ. ಆದರೆ ಮೇಳದಲ್ಲಿ ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ ವಿವಿಧ ಬಗೆಯ ಹಣ್ಣುಗಳು ದೊರೆಯುತ್ತಿರುವುದರಿಂದ ಗ್ರಾಹಕರು ಮೇಳದ ಸದುಪಯೋಗ ಪಡೆದು ಕೊಳ್ಳಬೇಕು ಎಂದು ಸಲಹೆ ನೀಡಿದರು.

ಬೇಡಿಕೆ ಅನುಗುಣವಾಗಿ ಮಾರಾಟ: ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರುದ್ರೇಶ್ ಮಾತನಾಡಿ, ಎರಡು ವರ್ಷದ ನಂತರ ಮೈಸೂರಲ್ಲಿ ಮಾವು ಮೇಳ ಆಯೋಜಿಸಲಾಗಿದೆ. 24 ಮಳಿಗೆ ತೆರೆಯಲಾಗಿದ್ದು, 12 ಬಗೆಯ ಮಾವಿನಹಣ್ಣುಗಳ ಮಾರಾಟ ನಡೆಯುತ್ತಿದೆ. ರೈತರು ತಮ್ಮ ತೋಟದಲ್ಲಿ ಬೆಳೆದ ಮಾವಿನ ಹಣ್ಣನ್ನು ಮೇಳಕ್ಕೆ ತಂದಿದ್ದಾರೆ. ದಿನಕ್ಕೆ 25ರಿಂದ 30 ಟನ್ ಮಾವು ಮಾರಾಟವಾಗುವ ನಿರೀಕ್ಷೆಯಿದೆ. ಬೇಡಿಕೆಗೆ ಅನುಗುಣವಾಗಿ ಮಾವಿನ ಹಣ್ಣನ್ನು ತಂದು ಮಾರಾಟ ಮಾಡಲು ರೈತರು ಸಮ್ಮತಿಸಿದ್ದಾರೆ. ಇಂದಿನಿಂದ ಮೇ 29ರವರೆಗೆ ಬೆಳಗ್ಗೆ 9ರಿಂದ ರಾತ್ರಿ 9 ಗಂಟೆವರೆಗೆ ಗ್ರಾಹಕರು ಮೇಳಕ್ಕೆ ಬಂದು ತಮಗೆ ಇಷ್ಟವಾದ ಹಣ್ಣನ್ನು ಖರಿದಿಸಬಹುದಾಗಿದೆ. ಬಾದಾಮಿ, ರಸಪುರಿ, ನಂದಿತ, ತೋತಾಪುರಿ, ಬೈದನ್‌ಪಲ್ಲಿ, ದಶೇರಿ, ಮಲ್ಲಿಕ, ಮಲಗೋವ, ನೀಲಂ, ಸೇಂದೂರ ತಳಿಯ ಮಾವು ಮೇಳದಲ್ಲಿ ದೊರೆಯುತ್ತಿದೆ ಎಂದರು.

ಯಾವುದಕ್ಕೆ ಎಷ್ಟು ಬೆಲೆ: ಮಾವು ಮೇಳದಲ್ಲಿರುವ 24 ಮಳಿಗೆಗಳಲ್ಲೂ ಮಾರಾಟ ಮಾಡುವ ಮಾವಿನ ಹಣ್ಣುಗಳ ಬೆಲೆಯಲ್ಲಿ ಮೈಸೂರು, ಬೆಂಗಳೂರಿನ ಹಾಪ್‌ಕಾಮ್ಸ್‌ನಲ್ಲಿನ ಬೆಲೆಗೆ ಅನುಗುಣವಾಗಿ ದರ ನಿಗದಿ ಮಾಡಲಾಗುತ್ತದೆ. ಬಾದಾಮಿ ಕೆಜಿಗೆ 100 ರೂ., ರಸಪುರಿ, ಮಲ್ಲಿಕಾ 80 ರೂ., ಅಮ್ರಪಾಲಿ 110 ರೂ., ಹಿಮಾಮ್ ಪಸಂದ್ 150 ರೂ., ಸೇಂದೂರ 50 ರೂ., ದಶೇರಿ 120 ರೂ., ಮಲಗೋವಾ 150 ರೂ., ತೋತಾಪುರಿ 40 ರೂ., ಸಕ್ಕರೆಗುತ್ತಿ 150 ರೂ., ಕಾಲಪಹಡ್ 120 ರೂ., ಬೈದನ್ ಪಲ್ಲಿ ಕೆಜಿಗೆ 100 ರೂ. ದರ ನಿಗದಿ ಮಾಡಲಾಗಿದೆ

ಈ ಸಂದರ್ಭದಲ್ಲಿ ಜಿ.ಪಂ ಸಿಇಓ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥ ಸ್ವಾಮಿ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಹೆಚ್.ಎಂ. ನಾಗರಾಜ್ ಸಹಾಯಕ ನಿರ್ದೇಶಕ ನವೀನ್ ಹಾಗೂ ಇನ್ನಿತರರು ಇದ್ದರು.



ದರ ಕಡಿಮೆ ಮಾಡಿದರೆ ಒಳ್ಳೆಯದು

ಮಾವು ಮೇಳದಲ್ಲಿ ವಿವಿಧ ಬಗೆಯ ಹಣ್ಣುಗಳಿವೆ. ಆದರೆ, ಹೊರಗೆ ಮಾರಾಟ ಮಾಡುವ ದರದಂತೆ ಮೇಳದಲ್ಲೂ ದರ ನಿಗದಿ ಮಾಡಲಾಗಿದೆ. ಮಾರುಕಟ್ಟೆ ದರದಲ್ಲೇ ಮೇಳದಲ್ಲೂ ಮಾರಾಟ ಮಾಡುವುದು ಸಮಂಜಸವಲ್ಲ. ದರ ಪರಿಷ್ಕರಣೆ ಮಾಡುವುದು ಸೂಕ್ತ. ಅಲ್ಲದೆ, ಗ್ರಾಹಕರ ವಾಹನ ನಿಲುಗಡೆಗೆ ಪಾರ್ಕಿಂಗ್ ಚಾರ್ಜ್ ತೆಗೆದುಕೊಳ್ಳಲಾಗುತ್ತಿದೆ. ಬೈಕ್‌ಗೆ ಪಾರ್ಕಿಂಗ್ ಶುಲ್ಕವನ್ನು 10ರೂ.ನಿಂದ 5 ರೂ. ಇಳಿಕೆ ಮಾಡಬೇಕು.

- ಪ್ರೇಮಾ ಬೋದಿ, ರಾಮಕೃಷ್ಣನಗರ


ಸಕ್ಕರೆಗುತ್ತಿ ಸವಿದ ಜಿಲ್ಲಾಧಿಕಾರಿ



ಮಾವು ಮೇಳಕ್ಕೆ ಚಾಲನೆ ನೀಡಿದ ಬಳಿಕ ಮಳಿಗೆ ವೀಕ್ಷಿಸುತ್ತಿದ್ದ ಜಿಲ್ಲಾಧಿಕಾರಿಗಳು ಮಳಿಗೆಯೊಂದರಲ್ಲಿ ಸಣ್ಣ ಸಣ್ಣ ಗಾತ್ರದ ಮಾವಿನ ಹಣ್ಣು ವೀಕ್ಷಿಸಿ, ಆ ತಳಿಯ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಸಕ್ಕರೆಗುತ್ತಿಯ ಹಣ್ಣೊಂದನ್ನು ರೈತರೊಬ್ಬರು ರುಚಿ ನೋಡುವಂತೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಒಂದು ಸಣ್ಣ ಗಾತ್ರ ಸಕ್ಕರೆಗುತ್ತಿ ಹಣ್ಣನ್ನು ತಿಂದು, ಅದರ ರುಚಿ ಬಗ್ಗೆ ಹೇಳಿದರು. ಬಳಿಕ ರಾಮನಗರದಿಂದ ಬಂದಿದ್ದ ರೈತರೊಬ್ಬರು ತಮ್ಮ ತೋಟದಲ್ಲಿ ಬೆಳೆದ ಮಾವಿನ ಹಣ್ಣನ್ನು ಕತ್ತರಿಸಿ ಟ್ರೇನಲ್ಲಿ ತಂದು ರುಚಿ ನೋಡುವಂತೆ ಮನವಿ ಮಾಡಿದರು. ಈ ವೇಳೆ ಸುದ್ದಿ ವಾಹಿನಿಗಳ ಕ್ಯಾಮರಾಗಳಿರುವುದನ್ನು ಗಮನಿಸಿದ ಜಿಲ್ಲಾಧಿಕಾರಿಗಳು ಹಣ್ಣನ್ನು ತಿನ್ನುವುದಕ್ಕೆ ಹಿಂಜರಿದರು.

ಜಿ.ಟಿ. ದೇವೇಗೌಡರ ಮೊಮ್ಮಗಳು ಗೌರಿ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ






● ಸಂತಾಪ ಸೂಚಕ ಸಂದೇಶದಲ್ಲಿ ಜಿಟಿಡಿ ಕುಟುಂಬಕ್ಕೆ ಸಾಂತ್ವನ
● ಪ್ರಧಾನಿಯವರಿಗೆ ಜಿಟಿಡಿ ನಮನ

ಮೈಸೂರು, ಮೇ 27– ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡ ಅವರ ಮೊಮ್ಮಗಳು ಗೌರಿ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಜಿ.ಟಿ. ದೇವೇಗೌಡರಿಗೆ ಈ ಸಂಬಂಧ ಪತ್ರ ರವಾನಿಸಿರುವ ಅವರು, "ನಿಮ್ಮ ಮೊಮ್ಮಗಳು ಗೌರಿ ಅವರ ನಿಧನದ ಬಗ್ಗೆ ತಿಳಿದು ನನಗೆ ಆಘಾತವಾಗಿದೆ ಮತ್ತು ತೀವ್ರ ನೋವುಂಟಾಗಿದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಆಕೆ ಇಹಲೋಕ ತ್ಯಜಿಸಿದ್ದಾಳೆ ಎಂಬುದು ನಂಬಲಸಾಧ್ಯ. ತೀವ್ರ ದುಃಖಕರ ಸಮಯದಲ್ಲಿ ನನ್ನ ಅತೀವ ಸಂತಾಪಗಳು. ಚಿಕ್ಕ ವಯಸ್ಸಿನ ಮಗುವಿನ ಅಗಲಿಕೆ ಪೋಷಕರು ಮತ್ತು ಅಜ್ಜನಾದ ನಿಮಗೆ ಅತ್ಯಂತ ಕಷ್ಟಕರವಾದ ಸಮಯವಾಗಿದೆ. ನಿಮ್ಮ ಕುಟುಂಬಕ್ಕೆ ಆಗಿರುವ ನಷ್ಟ ಪದಗಳನ್ನು ಮೀರಿದೆ. ಗೌರಿ ಬಿಟ್ಟುಹೋಗಿರುವ ನೆನಪುಗಳು ನಿಮ್ಮ ಕುಟುಂಬಕ್ಕೆ ಸಾಂತ್ವನ ನೀಡಲಿ. ಗೌರಿ ಅಗಲಿಕೆಯ ತುಂಬಲಾರದ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತನು ಕುಟುಂಬ ಸದಸ್ಯರಿಗೆ ಮತ್ತು ಹಿತೈಷಿಗಳಿಗೆ ನೀಡಲಿ" ಎಂದು ಪ್ರಾರ್ಥಿಸುವು ದಾಗಿ ಪ್ರಧಾನಿ ಮೋದಿ ತಮ್ಮ ಸಂತಾಪ ಸೂಚಕ ಸಂದೇಶ ಪತ್ರದಲ್ಲಿ ತಿಳಿಸಿದ್ದಾರೆ.



प्रधान मंत्री
Prime Minister

New Delhi
वैशाख 29, शक संवत् 1944
19th May, 2022

Shri G T Devegowda Ji,

I am shocked and deeply pained to learn about the passing away of your granddaughter, Gowri. It is almost impossible to believe that she has left the world at such a tender age. My deepest, heartfelt condolences are with the family in this hour of intense grief.

The loss of a child at such a young age is an extremely difficult time for the parents and for you, as the grandfather. The deep sense of loss for the family is beyond words. May the memories left behind by Gowri provide solace to the family.

I pray to the Almighty to grant strength to the family members and well-wishers to bear this irreparable loss.

May the departed soul rest in peace.

(Narendra Modi)

Shri G T Devegowda
MLA, Karnataka Legislative Assembly
House No.509, New Kalidasa Road
Vijayanagar, 1st Stage, Mysuru
Karnataka – 570017

ಮೋದಿಗೆ ನಮನ: ನಮ್ಮ ಕುಟುಂಬದ ಕಂದನ ಆಕಸ್ಮಿಕ ನಿಧನದ ಸುದ್ದಿಯನ್ನು ತಿಳಿದು ತಮ್ಮೆಲ್ಲಾ ಕಾರ್ಯಗಳ ಮಧ್ಯೆಯೂ ಅಂತಃಕರಣಪೂರಿತ ಸಂತಾಪ ಸೂಚನೆಯನ್ನೊಳಗೊಂಡ ಪತ್ರವನ್ನು ರವಾನಿಸುವ ಮೂಲಕ ಪ್ರಧಾನಿ ಮೋದಿ ಸಂತಾಪ ಸೂಚಿಸಿದ್ದಾರೆ. ಪ್ರಧಾನಿಯವರ ಸಂತಾಪ ಸೂಚನೆ ನಮ್ಮಲ್ಲಿ ಅತ್ಯಂತ ಕೃತಜ್ಞತಾ ಭಾವವನ್ನುಂಟು ಮಾಡಿದೆ ಎಂದು ತಿಳಿಸಿರುವ ಶಾಸಕ ಜಿ.ಟಿ. ದೇವೇಗೌಡ, ರಾಷ್ಟ್ರದ ಬಗ್ಗೆ ಸದಾ ಚಿಂತಿಸುವ ಅತ್ಯಂತ ಉನ್ನತ ಸ್ಥಾನದಲ್ಲಿರುವ ಪ್ರಧಾನಿಯವರು, ನಮ್ಮ ಕುಟುಂಬ ದಲ್ಲಾದ ದುರ್ಘಟನೆ ಬಗ್ಗೆ ಅತ್ಯಂತ ಕಾಳಜಿ ವಹಿಸಿ ಪತ್ರ ಬರೆಯುವ ಮೂಲಕ ನನಗೆ ಹಾಗೂ ಕುಟುಂಬ ದವರಿಗೆ ಧೈರ್ಯ ತುಂಬಿದ್ದಕ್ಕಾಗಿ ಹಾಗೂ ನಮ್ಮ ದುಃಖದಲ್ಲಿ ಭಾಗಿಯಾಗಿದ್ದಕ್ಕಾಗಿ ತಾವು ಹಾಗೂ ತಮ್ಮ ಕುಟುಂಬದ ಎಲ್ಲಾ ಸದಸ್ಯರು ಪ್ರಧಾನಿ ಮೋದಿಯವರಿಗೆ ತುಂಬು ಹೃದಯದ ನಮನ ಗಳನ್ನು ಸಲ್ಲಿಸುತ್ತಿರುವುದಾಗಿ ಜಿಟಿಡಿ ತಿಳಿಸಿದ್ದಾರೆ.



ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 27– ಮೈಸೂರಿನ ಮರಿಮಲ್ಲಪ್ಪ ಶಾಲೆಯ ಡಿ.ಎಸ್.ವಿಜಯಲಕ್ಷ್ಮೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 561 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕನ್ನಡದಲ್ಲಿ 125ಕ್ಕೆ 125 ಅಂಕ ಗಳಿಸಿದ್ದಾರೆ.

ಮಾವು ಮೇಳದಲ್ಲಿ ಖದೀಮರ ಕೈಚಳಕ: ನಾಲ್ಕೈದು ಜನರ ಮೊಬೈಲ್ ನಾಪತ್ತೆ

ಮೈಸೂರು, ಮೇ 27(ಎಸ್‌ಬಿಡಿ)– ಮೈಸೂರು ಮಾವು ಮೇಳದ ಮೊದಲ ದಿನವೇ ಮೊಬೈಲ್ ಕಳ್ಳರು ಕೈಚಳಕ ತೋರಿದ್ದು, ನಾಲ್ಕೈದು ಮೊಬೈಲ್‌ಗಳನ್ನು ಕಳವು ಮಾಡಿರುವುದಾಗಿ ತಿಳಿದುಬಂದಿದೆ. ತೋಟಗಾರಿಕಾ ಇಲಾಖೆ ವತಿಯಿಂದ ಕುಪ್ಪಣ್ಣ ಪಾರ್ಕ್‌ನಲ್ಲಿ ಮೂರು ದಿನಗಳ ಮಾವು ಮೇಳಕ್ಕೆ ಶುಕ್ರವಾರ ಚಾಲನೆ ದೊರಕಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇದರ ನಡುವೆ ಜಯಲಕ್ಷ್ಮೀಪುರಂ ನಿವಾಸಿ ಶ್ರೀನಿವಾಸ್ ಸೇರಿದಂತೆ ನಾಲ್ಕೈದು ಜನ ಮೊಬೈಲ್ ಕಳೆದುಕೊಂಡಿದ್ದಾರೆ. ಮಾವು ಮೇಳದಲ್ಲಿ ಕನಿಷ್ಠ ಸುರಕ್ಷತಾ ಕ್ರಮವನ್ನೂ ಕೈಗೊಂಡಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೊಬೈಲ್ ಕಳೆದುಕೊಂಡಿರುವ ಶ್ರೀನಿವಾಸ್ ಅವರ ಪತ್ನಿ ಶೋಭಾ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಾನು ಮತ್ತು ನನ್ನ ಪತಿ ಶುಕ್ರವಾರ ಸಂಜೆ 6 ಗಂಟೆ ವೇಳೆಗೆ ಮಾವು ಮೇಳಕ್ಕೆ ಹೋಗಿದ್ದೆವು. ಮೂರ್‍ನಾಲ್ಕು ಅಂಗಡಿಗಳನ್ನು ನೋಡಿಕೊಂಡು ಮುಂದೆ ಹೋಗುವಷ್ಟರಲ್ಲಿ ನನ್ನ ಪತಿಯ ಶರ್ಟ್ ಜೇಬಿನಲ್ಲಿದ್ದ ಮೊಬೈಲ್ ಕಾಣಿಸಲಿಲ್ಲ. ತಕ್ಷಣ ಅದೇ ದಾರಿಯಲ್ಲಿ ವಾಪಸ್ಸಾಗಿ ನಾವು ಹೋಗಿದ್ದ ಮಳಿಗೆ ಬಳಿ ಹುಡುಕಾಡಿದರೂ ಮೊಬೈಲ್ ಸಿಗಲಿಲ್ಲ. ಅದೇ ವೇಳೆಗೆ ಮೂರ್‍ನಾಲ್ಕು ಜನ ತಮ್ಮ ಮೊಬೈಲ್ ಕೂಡ ಕಳುವಾಗಿದೆ ಎಂದು ಹುಡುಕಾಟ ನಡೆಸುತ್ತಿದ್ದರು ಎಂದು ತಿಳಿಸಿದರು.

ಯಾರೋ ಒಬ್ಬರು ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿದಾಗ ಅಲ್ಲಿಯೇ ಇರಿ ಗರುಡಾ ವಾಹನ ಬರುತ್ತದೆ ಎಂದು ಹೇಳಿದರು. ಆದರೆ ಗೇಟ್ ಬಳಿ ಅರ್ಧ ಗಂಟೆ ಕಾದ ನಂತರ ಪೊಲೀಸರು ಬಂದು, ಮೊಬೈಲ್‌ಗೆ ಸಂಬಂಧಿಸಿದ ದಾಖಲೆಯೊಂದಿಗೆ ದೂರು ನೀಡುವಂತೆ ಹೇಳಿದರು. ಆದರೆ ದಾಖಲೆಯೆಲ್ಲಾ ಮನೆಯಲ್ಲಿದ್ದ ಕಾರಣ ಆಗ ಯಾರೂ ಪೊಲೀಸ್ ಠಾಣೆಗೆ ಹೋಗಲಿಲ್ಲ. ಬದಲಿಗೆ ತೋಟಗಾರಿಕೆ ಇಲಾಖೆಯವರಿಗೆ ವಿಷಯ ತಿಳಿಸಿದೆವು. ಆದರೆ ಅವರು ಕಿವಿಗೂ ಹಾಕಿಕೊಳ್ಳದೆ ಉಡಾಫೆಯಿಂದ ವರ್ತಿಸಿದರು. ಇದರಿಂದ ಬೇಸತ್ತು ಕುಪ್ಪಣ್ಣ ಪಾರ್ಕ್ ಗೇಟ್ ಬಳಿ ನಿಂತು ಸಾರ್ವಜನಿಕರಿಗೆ ಮೊಬೈಲ್ ಕಳ್ಳರ ಬಗ್ಗೆ ಎಚ್ಚರಿಕೆ ನೀಡಿದೆವು ಎಂದರು.

ನಾವು ಅಲ್ಲಿಗೆ ಹೋಗಿದ್ದಾಗ ಜನಸಂದಣಿ ಹೆಚ್ಚಿರಲಿಲ್ಲ. ಆದರೂ ಆ ವೇಳೆ ನಾಲ್ಕೈದು ಜನರ ಮೊಬೈಲ್ ಕಳುವಾಗಿದೆ. ಇನ್ನು ಜನದಟ್ಟಣೆ ಉಂಟಾದರೆ ಇನ್ನೇನಾಗಬಹುದು. ಅಲ್ಲಿ ಸಾರ್ವಜನಿಕರಿಗೆ ಕನಿಷ್ಠ ಸುರಕ್ಷತೆ ಇಲ್ಲ. ಪೊಲೀಸ್ ಸಿಬ್ಬಂದಿಯಾಗಲೀ, ಭದ್ರತಾ ಸಿಬ್ಬಂದಿಯಾಗಲೀ ಕಾಣಿಸಲಿಲ್ಲ. ಈ ಬಗ್ಗೆ ತಕ್ಷಣ ಕ್ರಮ ವಹಿಸದಿದ್ದರೆ 100–200ರೂ. ಮಾವು ಕೊಳ್ಳಲು ಹೋಗಿ ಸಾವಿರಾರು ರೂ. ಬೆಲೆಯ ಮೊಬೈಲ್ ಕಳೆದುಕೊಳ್ಳಬೇಕಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಭಾನುಪ್ರಕಾಶ್ ಶರ್ಮ, ನಾರಾಯಣಗೌಡ, ಮಡ್ಡೀಕೆರೆ ಗೋಪಾಲ್ ಸೇರಿ ಹಲವರಿಗೆ ಸಾಮಾಜಿಕ ಸೇವಾ ಪ್ರಶಸ್ತಿ ಪ್ರದಾನ



ಮೈಸೂರು, ಮೇ 27(ಆರ್‌ಕೆಬಿ)– ವಿವಿಧ ಕ್ಷೇತ್ರಗಳ ಸಾಧಕರಿಗೆ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಶುಕ್ರವಾರ ಸಾಮಾಜಿಕ ಸೇವಾ ರತ್ನಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಟ್ರಸ್ಟ್‌ನ 15ನೇ ವರ್ಷದ ಸಂದರ್ಭದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಭಾನುಪ್ರಕಾಶ್ ಶರ್ಮ (ಧಾರ್ಮಿಕ), ಮಡ್ಡೀಕೆರೆ ಗೋಪಾಲ್ (ಸಾಹಿತ್ಯ), ಸಿ.ನಾರಾಯಣ ಗೌಡ (ಉದ್ಯಮ), ಅನಿಲ್ ಕುಮಾರ್ (ಪತ್ರಿಕಾರಂಗ), ದೇವೇಂದ್ರ ಪರಿಹಾರಿಯ (ಸಂಘಟನೆ), ಶೋಭಾ ದಿನೇಶ್ (ಸಾಮಾಜಿಕ), ಪ್ರಕಾಶ್ ಚಿಕ್ಕಪಾಳ್ಯ (ಕಲೆ), ಕೇಬಲ್ ಮಹೇಶ್ (ರಾಜಕೀಯ) ಮತ್ತು ಸುಹಾಸ್ (ಕ್ರೀಡಾ ಕ್ಷೇತ್ರ) ಅವರಿಗೆ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅವರು ಸಾಮಾಜಿಕ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಹಲವು ವರ್ಷಗಳಿಂದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಜನಜಾಗೃತಿ ಉಂಟು ಮಾಡುತ್ತಿದೆ. ಅದೇ ರೀತಿ ಸಾರ್ವಜನಿಕರು ಸಹ ಸಾಮಾಜಿಕ ಕಳಕಳಿ, ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಮಾಡಿದ ಕೆಲಸಕ್ಕೆ ಪ್ರತಿಫಲ ಅಪೇಕ್ಷಿಸಬಾರದು ಎಂದರು.

ಈ ಸಂದರ್ಭದಲ್ಲಿ ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಬಿಜೆಪಿ ಮುಖಂಡರಾದ ಯಶಸ್ವಿನಿ ಸೋಮಶೇಖರ್, ಚಿಂತಕ ಕೆ.ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಉಪಾಧ್ಯಕ್ಷ ನಟರಾಜ್ ಜೋಯಿಸ್, ನಗರಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಜಗದೀಶ್, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುಡಾ ಸದಸ್ಯೆ ಎಂ.ಲಕ್ಷ್ಮೀದೇವಿ, ರೇಣುಕಾ ರಾಜ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಜಯ್‌ಶಾಸ್ತ್ರೀ, ವಿನಯ್ ಕಣಗಾಲ್, ರಾಕೇಶ್ ಭಟ್ ಇನ್ನಿತರರು ಉಪಸ್ಥಿತರಿದ್ದರು.



ಎಸ್‌ಎಸ್‌ಎಲ್‌ಸಿ ಟಾಪರ್‌ಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಿಂದ ಅಭಿನಂದನೆ

ಮೈಸೂರು, ಮೇ 27(ಆರ್‌ಕೆಬಿ)– ಎಸ್‌ಎಸ್‌ಎಲ್‌ಸಿಯಲ್ಲಿ 596 ಅಂಕಗಳನ್ನು (ಶೇ.95.33) ಪಡೆದು ಅತ್ಯುನ್ನತ ಸ್ಥಾನ ಪಡೆದಿರುವ ಪೌರ ಕಾರ್ಮಿಕರ ಕಾಲೋನಿಯ ರಂಗಸ್ವಾಮಿ ಅವರ ಪುತ್ರಿ ಆರ್.ಚೇತನಾ ಅವರ ಮನೆಗೆ ಭೇಟಿ ನೀಡಿದ ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಆಕೆಯನ್ನು ಸನ್ಮಾನಿಸಿ, ಅಭಿನಂದಿಸಿದರು.


ಮೈಸೂರಿನ ವಿಶ್ವೇಶ್ವರನಗರ 3ನೇ ಹಂತದಲ್ಲಿರುವ ಧರ್ಮಸಿಂಗ್ ಕಾಲೋನಿಯ ಪೌರ ಕಾರ್ಮಿಕ ಸಮುದಾಯದ ವಿದ್ಯಾರ್ಥಿನಿ ಉತ್ತಮವಾಗಿ ಓದಿ ಸಾಧನೆ ಮಾಡಿದ್ದು, ಅವರು ಪಿಯುಸಿ ಓದಲು ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅವಕಾಶ ಕಲ್ಪಿಸಿಕೊಡಲಾಗುವುದು. ಅವರ ಮುಂದಿನ ವಿದ್ಯಾಭ್ಯಾಸಕ್ಕೆ ರಾಜ್ಯ ಸರ್ಕಾರ ಮತ್ತು ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದಿಂದ ಟ್ಯಾಬ್, ಲ್ಯಾಪ್‌ಟಾಪ್ ಇನ್ನಿತರೆ ಸೌಲಭ್ಯಗಳ ಜೊತೆಗೆ ವಿದ್ಯಾಭ್ಯಾಸಕ್ಕೆ ಅಗತ್ಯವಾದ ಎಲ್ಲಾ ನೆರವು ಕೊಡಿಸುವ ಭರವಸೆ ನೀಡಿದರು.

ವಿದ್ಯಾರ್ಥಿನಿ ಆರ್.ಚೇತನಾ ಕೆಎಎಸ್ ಅಥವಾ ಐಎಎಸ್ ಓದುವಂತೆ ಸಲಹೆ ನೀಡಿದ ಅವರು ಅದಕ್ಕೆ ಎಲ್ಲಾ ಸಹಕಾರ ನೀಡುವುದಾಗಿ ತಿಳಿಸಿದರು.

ಪೌರ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರ ಎಲ್ಲಾ ರೀತಿಯ ನೆರವು ನೀಡಲಿದ್ದು, ಅವರು ಉತ್ತಮವಾಗಿ ಓದಿ ಸಮಾಜದಲ್ಲಿ ಉತ್ತಮ ಹೆಸರು ಗಳಿಸಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಅದಕ್ಕೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು ಎಂದರು.

ಆರ್.ಚೇತನಾ (560 ಅಂಕ) ಒಳಗೊಂಡಂತೆ ಸಫಾಯಿ ಕರ್ಮಚಾರಿ ಗಳ ಮಕ್ಕಳಾದ ಕೆ.ಎನ್.ಸಿಂಚನಾ– 593 (ಭಾರತ್ ನಗರ) ನಿಖಿಲ್‌ಕುಮಾರ್– 585 (ಮೈಸೂರು), ಬಿ.ಹರ್ಷಿತಾ– 578 (ಹೆಬ್ಬಾಳ್), ಹೆಚ್.ಎಂ. ಹರ್ಷಿತಾ– 568 (ಮೈಸೂರು), ಆರ್. ಪೂರ್ಣಿಮಾ– 532 (ಕೆ.ಆರ್.ನಗರ), ಎಂ.ಯಶ್ವಂತ್– 531 (ಹೆಬ್ಬಾಳ್ ಕಾಲೋನಿ), ಬಿ.ವಂದನಾ– 520 (ಹೆಬ್ಬಾಳ್ ಕಾಲೋನಿ), ಕೆ.ಗಾನವಿ– 505 (ಕೆಆರ್.ನಗರ), ಎಂ.ವರ್ಷಿತಾ– 500 (ಮೈಸೂರು) ಇವರೆಲ್ಲರೂ ಸಾಧನೆ ಮಾಡಿದ್ದಾರೆ. ಅವರೆಲ್ಲರಿಗೂ ಜೂ.16ರ ನಂತರ ಗೌರವಿಸಿ, ಅವರ ಮುಂದಿನ ವ್ಯಾಸಂಗಕ್ಕೆ ಸರ್ಕಾರದಿಂದ ಎಲ್ಲಾ ಸೌಕರ್ಯ ದೊರಕಿಸಿಕೊಡುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯೆ ಶಾಂತಮ್ಮ ವಡಿವೇಲು, ರಾಜ್ಯ ಸಫಾಯಿ ಕರ್ಮಚಾರಿ ಸಮಿತಿ ಸದಸ್ಯ ಎಂ.ವಿ. ವೆಂಕಟೇಶ್, ಜಿಲ್ಲಾ ಸಫಾಯಿ ಕರ್ಮಚಾರಿ ವಿಚಕ್ಷಣ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಕೆ.ನಂಜಪ್ಪ ಬಸವನಗುಡಿ, ಬಿಜೆಪಿ ಜಿಲ್ಲಾ ಕಾರ್ಯಕಾರಿ ಸದಸ್ಯ ಬೋರೇಗೌಡ, ವಿದ್ಯಾರ್ಥಿನಿಯ ತಂದೆ ರಂಗಸ್ವಾಮಿ, ಸೇಂಟ್ ಥಾಮಸ್ ಪ್ರೌಢಶಾಲೆಯ ಪ್ರಾಂಶುಪಾಲ ಸ್ವಾಮಿನಾಥನ್, ಶಿಕ್ಷಕ ವೆಂಕಟೇಶ್, ಕಾಲೋನಿಯ ಮುಖಂಡ ರಾದ ಚಂದ್ರಶೇಖರ್, ವರದರಾಜು, ಸುಂದರ್, ನಂದೀಶ್, ರವಿಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕಗಳನ್ನು ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ಮೈಸೂರಿನ ಪೌರ ಕಾರ್ಮಿಕರ ಕಾಲೋನಿಯ ಆರ್.ಚೇತನಾ ಅವರನ್ನು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಸನ್ಮಾನಿಸಿ, ಅಭಿನಂದಿಸಿದರು. ಚಿತ್ರದಲ್ಲಿ ನಗರಪಾಲಿಕೆ ಸದಸ್ಯೆ ಶಾಂತಮ್ಮ ವಡಿವೇಲು, ಮಾಜಿ ಸದಸ್ಯ ಶಿವಣ್ಣ ಇನ್ನಿತರರನ್ನು ಕಾಣಬಹುದು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಜಮ್ಮು-ಕಾಶ್ಮೀರದ ಲಡಾಕ್‌ನಲ್ಲಿ ಅಪಘಾತ

ನದಿಗೆ ಬಿದ್ದ 26 ಸೈನಿಕರಿದ್ದ ವಾಹನ, 7 ಯೋಧರು ಹುತಾತ್ಮ

ಲಡಾಖ್ (ಜಮ್ಮು-ಕಾಶ್ಮೀರ): ಜಮ್ಮು-ಕಾಶ್ಮೀರದ ಲಡಾಕ್‌ನಲ್ಲಿ ಶುಕ್ರವಾರ ಭಾರೀ ಅಪಘಾತ ಸಂಭವಿಸಿದ್ದು 7 ಮಂದಿ ಯೋಧರು ಹುತಾತ್ಮರಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

26 ಮಂದಿ ಸೈನಿಕರು ಸೇನಾ ವಾಹನದಲ್ಲಿ ಸಾಗುತ್ತಿದ್ದ ವೇಳೆ ಸ್ಕಿಡ್ ಆಗಿ ಲಡಾಕ್‌ನಲ್ಲಿ ಶ್ಯೋಕ್ ನದಿಗೆ ಬಿದ್ದಿದೆ. 26 ಮಂದಿ ಸೈನಿಕರ ತಂಡವು ಪಾರ್ತಾಪುರದ ಟ್ರಾನ್ಸಿಟ್ ಕ್ಯಾಂಪ್‌ನಿಂದ ಉಪ ವಲಯದ ಹಾನಿಫ್ ಮುಂದಿನ ಸ್ಥಳಕ್ಕೆ ತೆರಳುತ್ತಿತ್ತು. ವಾಹನವು ರಸ್ತೆಯಿಂದ ಸ್ಕಿಡ್ ಆಗಿ ಶ್ಯೋಕ್ ನದಿಯಲ್ಲಿ ಬಿದ್ದಿತು. ಎಲ್ಲಾ 26 ಸೈನಿಕರನ್ನು ಸೇನಾ ಕ್ಷೇತ್ರ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಲೇಹ್‌ನಿಂದ ಶಸ್ತ್ರಚಿಕಿತ್ಸಾ ತಂಡಗಳನ್ನು ಪಾರ್ತಾಪುರಕ್ಕೆ ರವಾನಿಸಲಾಯಿತು. ಇವರಲ್ಲಿ ಏಳು ಮಂದಿ ಹುತಾತ್ಮರಾಗಿದ್ದಾರೆ.

'ಗಾಯಗೊಂಡವರಿಗೆ ಉತ್ತಮ ವೈದ್ಯಕೀಯ ಆರೈಕೆಯನ್ನು ಒದಗಿಸಲಾಗುತ್ತಿದೆ. ಗಂಭೀರವಾಗಿ ಗಾಯಗೊಂಡವರನ್ನು ವೆಸ್ಟರ್ನ್ ಕಮಾಂಡ್‌ಗೆ ಸ್ಥಳಾಂತರಿಸಲು ವಾಯುಪಡೆಯಿಂದ ನೆರವನ್ನು ಕೋರಲಾಗಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

ಒಂದನೇ ಪುಟದಿಂದ

25 ಕಂಪನಿಗಳ ಉತ್ಸುಕತೆ

ಹೂಡಲು ಕಂಪನಿಗಳು ಆಸಕ್ತಿ ತೋರಿವೆ. ಕೆಲವು ಉದ್ಯಮಿದಾರರು ನಿಮ್ಮಲ್ಲಿ ರಾಜಕೀಯ ಅಸ್ಥಿರತೆ ಇದೆಯೇ, ಹವಾಗುಣದ ಪರಿಸ್ಥಿತಿ ಹೇಗೆ ಎಂದೆಲ್ಲಾ ಮಾಹಿತಿ ಪಡೆದುಕೊಂಡರು. ಕರ್ನಾಟಕದಲ್ಲಿ ಪೂರ್ಣ ಬಹುಮತದ ಸರ್ಕಾರವಿದೆ. ನನ್ನ ನೇತೃತ್ವದಲ್ಲಿ ಉತ್ತಮ ಆಡಳಿತ ನೀಡಿ, ಜನಪ್ರಿಯ ಕಾರ್ಯಕ್ರಮಗಳ ಕೊಡುವುದರ ಜೊತೆಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಿದ್ದೇವೆ. ಅಷ್ಟೇ ಅಲ್ಲ 60 ಸಾವಿರ ಎಕರೆ ಭೂಮಿ ಕೈಗಾರಿಕೆಗಳಿಗೆಂದೇ ನಮ್ಮ ಲ್ಯಾಂಡ್ ಬ್ಯಾಂಕ್‌ನಲ್ಲಿ ಮೀಸಲಿರಿಸಲಾಗಿದೆ. ಅಸ್ಥಿರತೆ ಇದ್ದರೆ ಇದ್ಯಾವುದೂ ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ಅವರಿಗೆ ಮನವರಿಕೆ ಮಾಡಲಾಗಿದೆ.

ಲಕ್ಷ್ಮೀ ಮಿತ್ತಲ್ ಅವರು ಕರ್ನಾಟಕದ ಬಗ್ಗೆ ಈ ಪ್ರಶ್ನೆ ಮಾಡಿದರು. ಬೇರೆಯವರೂ ಕೇಳಿದರು. ಇದು ನಮಗೆ ಮಾತ್ರವಲ್ಲ, ಎಲ್ಲಾ ರಾಜ್ಯಗಳ ಸ್ಥಿತಿಯ ಬಗ್ಗೆ ಅವರು ಬಂಡವಾಳ ಹೂಡಲು ಪರಿಸ್ಥಿತಿಯನ್ನು ತಿಳಿದುಕೊಳ್ಳುತ್ತಾರೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ ಎಂದರು. ಬಂಡವಾಳ ಹೂಡಿಕೆಗೆ ರಾಜ್ಯದಲ್ಲಿನ ಪೂರಕ ಪರಿಸರ, ನೀತಿ ನಿಯಮಗಳು, ತಂತ್ರಜ್ಞಾನ ಆಧಾರ, ಕೌಶಲ್ಯಯುತ ಮಾನವಸಂಪನ್ಮೂಲ, ಆರ್ ಅಂಡ್ ಡಿ ಕೇಂದ್ರಗಳು, ಉದ್ದಿಮೆಗಳಿಗೆ ನೀಡಲಾಗುವ ಪ್ರೋತ್ಸಾಹಕಗಳು, ಭೂಮಿಯ ಲಭ್ಯತೆಗಳಿಂದಾಗಿ ಬಂಡವಾಳ ಹೂಡಿಕೆ ಸಂಸ್ಥೆಗಳಿಗೆ ಕರ್ನಾಟಕದ ರಾಜ್ಯದ ಮೇಲೆ ವಿಶ್ವಾಸವನ್ನು ಮೂಡಿಸಿದೆ.

ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸಲು ಹಲವು ಜಾಗತಿಕ ಉದ್ದಿಮೆದಾರರನ್ನು ಭೇಟಿಯಾಗಿ ಮಾತುಕತೆ ನಡೆಸಲಾಯಿತು. ಬಂಡವಾಳ ಆಕರ್ಷಣೆಯಲ್ಲಿ ನಾವು ಮುಂಚೂಣಿಯಲ್ಲಿದ್ದು, ವಿಶ್ವ ಆರ್ಥಿಕ ಶೃಂಗ ಸಭೆ ಫಲಪ್ರದವಾಗಿದೆ. ಕರ್ನಾಟಕ ಅಭಿವೃದ್ಧಿಯ ಎಲ್ಲ ರಂಗಗಳಲ್ಲಿ ಹೂಡಿಕೆದಾರರು ಆಸಕ್ತಿ ತೋರಿದರು. ಬಂಡವಾಳ ಹೂಡಿಕೆಯ ಜೊತೆಗೆ ವಿಸ್ತರಣಾ ಕಾರ್ಯಕ್ಕೂ ಉತ್ಸುಕತೆ ತೋರಿದರು. ಹೈಡ್ರೋ ಪವರ್, ಏರೋಸ್ಪೇಸ್, ನವೀಕರಿಸಬಹುದಾದ ಇಂಧನ ಸೇರಿದಂತೆ ಪ್ರಮುಖ ಕ್ಷೇತ್ರದ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಬಂಡವಾಳ ಹೂಡಿಕೆಯಲ್ಲಿ ಆಸಕ್ತಿ ತೋರಿದರು. ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನಗಳ ಬಗ್ಗೆ ಸಮಗ್ರ ಚರ್ಚೆ ನಡೆಯಿತು ಎಂದರು. ಕೋವಿಡ್ ನಂತರದ ದೇಶದ ಆರ್ಥಿಕತೆಯ ಬಲವರ್ಧನೆಯಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿದೆ. ರಾಜ್ಯದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿರುವ ಸಂಸ್ಥೆಗಳು, ಉದ್ದಿಮೆಗಳ ಸ್ಥಾಪನೆಗೆ ಅನುಕೂಲವಾಗುವಂತೆ ಮೂಲಭೂತ ಸೌಕರ್ಯ, ಉದ್ದಿಮೆ ಸ್ಥಾಪನೆಗೆ ಸರಳೀಕೃತ ಪ್ರಕ್ರಿಯೆಗಳು, ಜೊತೆಗೆ ಎಲ್ಲ ರೀತಿಯ ಸಹಕಾರವನ್ನು ನೀಡಲಾಗುವುದು ಎಂದರು.

ರೆನ್ಯೂ ಪವರ್ ಪ್ರೈ.ಲಿ. ಕಂಪೆನಿಯು 50 ಸಾವಿರ ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಂಡಿದ್ದು, ಮುಂದಿನ 7 ವರ್ಷಗಳಲ್ಲಿ ನವೀಕರಿಸಬಹು ದಾದ ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. 30 ಸಾವಿರಕ್ಕೂ ಹೆಚ್ಚು ಉದ್ಯೋಗವನ್ನು ನೀಡಲಿದೆ ಎಂದರು. ಲುಲು ಗ್ರೂಪ್ ರಾಜ್ಯದಲ್ಲಿ ಸುಮಾರು 2 ಸಾವಿರ ಕೋಟಿ ರೂ. ಹೂಡಿಕೆಗೆ ಒಪ್ಪಂದ ಮಾಡಿ ಕೊಂಡಿದ್ದು, 4 ಶಾಪಿಂಗ್ ಮಾಲ್ ಮತ್ತು ಹೈಪರ್ ಮಾರ್ಕೆಟ್ ಹಾಗೂ ರಫ್ತು ಆಧಾರಿತ ಆಹಾರ ಮಳಿಗೆಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. 10 ಸಾವಿರಕ್ಕೂ ಹೆಚ್ಚು ಉದ್ಯೋಗವನ್ನು ನೀಡಲಿದೆ ಎಂದರು. ಜ್ಯೂಬಿಲಿಯಂಟ್ ಗ್ರೂಪ್, ಹಿಟಾಚಿ ಎನರ್ಜಿ, ಸೀಮೆನ್ಸ್, ಅಬ್ ಇನ್ಬೇವ್, ದಸ್ಸಾಲ್ಟ್ ಸಿಸ್ಟಂ, ನೆಸ್ಲೇ, ಆರ್ಸೆಲಾರ್ ಮಿತ್ತಲ್ ಸಂಸ್ಥೆ–ಭಾರ್ತಿ ಎಂಟರ್‌ಪ್ರೈಸಸ್ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಂಡವಾಳ ಹೂಡುವ ಭರವಸೆ ನೀಡಿವೆ ಎಂದರು. ಇದಲ್ಲದೆ ಅದಾನಿ ಗ್ರೂಪ್, ದಾಲ್ಮಿಯಾ ಸಿಮೆಂಟ್, ಜಾನ್ಸನ್ ಕಂಟ್ರೋಲ್ಸ್, ಹನಿವೆಲ್, ಐಬಿಎಂ, ಐಕಿಯ ಸ್ಟೋರ್ಸ್, ಪೇಪಾಲ್, ಆಕ್ಸಿಸ್ ಬ್ಯಾಂಕ್ ಸಂಸ್ಥೆಗಳು ರಾಜ್ಯದ ವಿವಿಧ ವಲಯ ಗಳಲ್ಲಿ ಹೂಡಿಕೆ ಅವಕಾಶ ಬಗ್ಗೆ ಆಸಕ್ತಿ ತೋರಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು. ಕರ್ನಾಟಕ ಸರ್ಕಾರ ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಹಮ್ಮಿಕೊಂಡಿರುವ ಯೋಜನೆಯಂತೆ ಸ್ತ್ರೀ ಶಕ್ತಿ ಸಂಘಗಳಿಗೆ ಸಾಲ ಸೌಲಭ್ಯ ನೀಡಲು ಆಕ್ಸಿಸ್ ಬ್ಯಾಂಕ್ ಸಂಸ್ಥೆಗೆ ಆ್ಯಂಕರ್ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುವಂತೆ ಕೋರಲಾಗಿದೆ ಎಂದು ತಿಳಿಸಿದರು.

ಟಿಪಿಎಂ ಜಯಸಿಂಹ ಎಸಿಬಿ ಬಲೆಗೆ

ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾದರು. ಬಡಾವಣೆ ನಕ್ಷೆ ಅನು ಮೋದನೆ 3 ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದ ಜಯಸಿಂಹ, ಈಗಾಗಲೇ 1 ಲಕ್ಷ ರೂ. ಮುಂಗಡವಾಗಿ ಪಡೆದಿದ್ದರು. ಉಳಿಕೆ ಹಣಕ್ಕಾಗಿ ಒತ್ತಾಯಿಸುತ್ತಿದ್ದರಿಂದ ವೇಣುಗೋಪಾಲ್, ಗುರುವಾರ ಎಸಿಬಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಇಂದು 50 ಸಾವಿರ ರೂ.ಗಳನ್ನು ಟಿಪಿಎಂ ಸೆಕ್ಷನ್‌ನ ನಾಗೇಂದ್ರ ಪಡೆದು ಜಯಸಿಂಹ ಅವರ ಕೊಠಡಿಗೆ ತೆರಳುತ್ತಿದ್ದಾಗ ದಾಳಿ ನಡೆಸಿದ ಎಸಿಬಿ ಡಿವೈಎಸ್ಪಿ ತಮ್ಮಯ್ಯ ನೇತೃತ್ವದ ಪೊಲೀಸ್ ಅಧಿಕಾರಿಗಳು ಹಣದ ಸಮೇತ ಇಬ್ಬರನ್ನೂ ವಶಕ್ಕೆ ಪಡೆದರು. 3 ಲಕ್ಷ ರೂ.ಗಳಿಗೆ ಲಂಚಕ್ಕೆ ಬೇಡಿಕೆ ಇಟ್ಟು, ಈಗಾಗಲೇ 1 ಲಕ್ಷ ರೂ. ಮುಂಗಡವಾಗಿ ಪಡೆದಿರುವ ಬಗ್ಗೆ ಮೊಬೈಲ್ ಆಡಿಯೋ ಸಂಭಾಷಣೆ, ಲಂಚವಾಗಿ ಪಡೆದಿದ್ದ ಹಣ, ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿರುವ ಎಸಿಬಿ ಅಧಿಕಾರಿಗಳು, ಮಹಜರು ನಡೆಸಿ, ಮುಡಾದ ಇತರ ಅಧಿಕಾರಿಗಳನ್ನು ಮಹಜರು ವೇಳೆ ಸಾಕ್ಷಿದಾರರನ್ನಾಗಿ ಪರಿಗಣಿಸಿ ಹೇಳಿಕೆ ದಾಖಲಿಸಿ ಕೊಂಡಿದ್ದಾರೆ. ಮೇ 31ರಂದು ಜಯಸಿಂಹ ನಿವೃತ್ತರಾಗಲಿದ್ದರು. ಇವರು ಎಸಿಬಿ ಬಲೆಗೆ ಬಿದ್ದಿರುವುದಕ್ಕೆ ಮುಡಾ ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ನಕ್ಷೆ ಅನುಮೋದನೆ ವಿಷಯಕ್ಕೆ ಸಂಬಂಧಿಸಿದಂತೆ ಡೆವಲಪರ್ ವೇಣುಗೋಪಾಲ್ ಮತ್ತು ಜಯಸಿಂಹ ನಡುವೆ ಇತ್ತೀಚೆಗೆ ಮಾತಿನ ಚಕಮಕಿ ನಡೆದಿತ್ತು ಎಂದು ಹೇಳಲಾಗಿದೆ. ಈ ಇಬ್ಬರನ್ನೂ ಇಂದು ಸಂಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಎಸಿಬಿ ಡಿವೈಎಸ್ಪಿ ತಮ್ಮಯ್ಯ ಅವರು ತಿಳಿಸಿದ್ದಾರೆ. ಇನ್ಸ್‌ಪೆಕ್ಟರ್ ಮೋಹನ ಕೃಷ್ಣ ಸೇರಿದಂತೆ ಎಸಿಬಿಯ 8 ಮಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದ ನೂತನ ಮುಖ್ಯ ಕಾರ್ಯದರ್ಶಿ

ಅಧಿಕಾರಿಯಾಗಿರುವ ವಂದಿತಾ ಶರ್ಮಾ ಥೆರೇಸಾ ಭಟ್ಟಾಚಾರ್ಯ, ಮಾಲತಿ ದಾಸ್ ಮತ್ತು ರತ್ನ ಪ್ರಭಾ ಅವರ ನಂತರ ಈ ಸ್ಥಾನವನ್ನು ಅಲಂಕರಿಸಿದ ನಾಲ್ಕನೇ ಮಹಿಳೆಯಾಗಿದ್ದಾರೆ. ಕಾರ್ಯದರ್ಶಿ ಹುದ್ದೆಗೆ 9 ಮಂದಿ ಐಎಎಸ್ ಅಧಿಕಾರಿಗಳು ರೇಸ್‌ನಲ್ಲಿ ಇದ್ದರು. ಈ ಪೈಕಿ ವಂದಿತಾ ಶರ್ಮಾ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ.

ಹಣಕಾಸು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್, ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಶಾಲಿನಿ ರಜನೀಶ್, ಅಜಯ್ ಸೇಠ್, ಇ.ವಿ.ರಮಣ ರೆಡ್ಡಿ, ರಾಕೇಶ್ ಸಿಂಗ್, ಜಿ.ಕುಮಾರ್ ನಾಯ್ಕ್ ಮತ್ತು ಗೌರವ ಗುಪ್ತ ಹೆಸರುಗಳು ಕೇಳಿ ಬಂದಿದ್ದವು. ಸೇವಾ ಹಿರಿತನವನ್ನು ಕಡೆಗಣಿಸಿ ನೇಮಿಸಿದರೆ ಅವಕಾಶ ವಂಚಿತರು ನ್ಯಾಯಾಲಯದ ಮೊರೆ ಹೋಗಬಹುದು ಎಂಬ ಆತಂಕದಿಂದ ಅವರಿಗೆ ಮಣೆ ಹಾಕಲಾಗಿದೆ. ಜೊತೆಗೆ ವಂದಿತಾ ಶರ್ಮ ಅವರ ಮೇಲೆ ಯಾವುದೇ ರೀತಿಯ ಆರೋಪಗಳಿಲ್ಲ. ಆಡಳಿತ ಅನುಭವ ಇರುವುದರಿಂದ ಅವರನ್ನೇ ನೇಮಿಸಿದೆ.ಮುಂದಿನ ವರ್ಷ ನವೆಂಬರ್ ವರೆಗೆ ಅಧಿಕಾರಾವಧಿ ಇರಲಿದೆ.

ಕುಶಾಲನಗರ ರೈಲು ಮಾರ್ಗ ಸಮೀಕ್ಷೆ

ಮತ್ತು ಕೊಡಗು ಜಿಲ್ಲೆಯ ಕುಶಾಲನಗರ ನಡುವೆ ರೈಲು ಮಾರ್ಗ ನಿರ್ಮಾಣ ನಿರೀಕ್ಷೆ ಫಲನೀಡುವ ಕಾಲ ಸನ್ನಿಹಿತವಾಗಿದೆ.

117 ಕಿ.ಮೀ. ಮಾರ್ಗ: ಉದ್ದೇಶಿತ ನೂತನ ರೈಲು ಮಾರ್ಗ 117 ಕಿ.ಮೀ. ಸಮೀಕ್ಷೆಗಾಗಿ ಅಗತ್ಯ ಅನುದಾನವನ್ನು ಇಲಾಖೆ ಬಿಡುಗಡೆ ಮಾಡಿದೆ. ಸಮೀಕ್ಷೆ ಪೂರ್ಣಗೊಂಡ ಬಳಿಕ ಮಾರ್ಗ ನಿರ್ಮಾಣದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ.

ಹಾಸನ ಜಿಲ್ಲೆ ಶ್ರವಣಬೆಳಗೊಳದಿಂದ ಹೊರಡುವ ರೈಲು ಹೊಳೆನರಸೀಪುರ, ಕೊಣನೂರು ಮಾರ್ಗವಾಗಿ ಕೊಡಗು ಜಿಲ್ಲೆಯ ಕುಶಾಲನಗರವನ್ನು ತಲುಪಲಿದೆ. ಈ ರೈಲು ಮಾರ್ಗದಿಂದ ಆಗುವ ಲಾಭ, ವೆಚ್ಚ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮೀಕ್ಷಾ ವರದಿ ಒಳಗೊಂಡಿರಲಿದೆ. ಈಗಾಗಲೇ ರೈಲ್ವೆ ಇಲಾಖೆ ಮೈಸೂರು–ಕುಶಾಲನಗರ ರೈಲು ಮಾರ್ಗ ನಿರ್ಮಾಣಕ್ಕೆ ಒಪ್ಪಿಗೆ ನೀಡಿದ್ದು, ಈ ಎರಡೂ ರೈಲು ಮಾರ್ಗಗಳ ಸಂಪರ್ಕಿಸುವ ಲೆಕ್ಕಾಚಾರ ಇಲಾಖೆಯದ್ದಾಗಿದೆ.

ಹಿಂಪಡೆಯಲು ಮೇ 30 ಕಡೇ ದಿನ

ಡಾ.ಬಿ.ಹೆಚ್.ಚನ್ನಕೇಶವಮೂರ್ತಿ, ಪುಟ್ಟಸ್ವಾಮಿ, ಎನ್.ಪ್ರಸನ್ನ, ಕೆ.ಪಿ.ಪ್ರಸನ್ನಕುಮಾರ್, ಎಂ.ಮಹೇಶ್, ಡಾ.ಜೆ.ಸಿ.ರವೀಂದ್ರ, ಎನ್.ರಾಜೇಂದ್ರಸಿಂಗ್ ಬಾಬು, ಎಸ್.ರಾಮು, ಎನ್.ಎಸ್.ವಿನಯ್, ಡಾ.ಹೆಚ್.ಎಲ್.ವೆಂಕಟೇಶ ಹಾಗೂ ಹೆಚ್.ಪಿ.ಸುಜಾತ ಸೇರಿ ಎಲ್ಲರ ಉಮೇದುವಾರಿಕೆ ಕ್ರಮಬದ್ಧವಾಗಿದೆ ಎಂದು ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಪ್ರಕಟಿಸಿದ್ದಾರೆ. ನಾಮಪತ್ರ ಹಿಂಪಡೆಯಲು ಮೇ 30 ಕಡೇ ದಿನವಾಗಿದ್ದು, ಜೂನ್ 13ರ ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಜೂ.15ಕ್ಕೆ ಮತ ಎಣಿಕೆ ನಡೆಸಿ, ಫಲಿತಾಂಶ ಪ್ರಕಟಿಸಲಾಗುತ್ತದೆ.

ಭಾರತೀಯ ರೈಲ್ವೆಯಲ್ಲೇ ಮೈಸೂರು ವಿಭಾಗದ ಸಿಬ್ಬಂದಿಗೆ ವಿಶಿಷ್ಟ ವೈದ್ಯಕೀಯ ಗುರುತಿನ ಚೀಟಿ

ಮೈಸೂರಿನ ವಿಶ್ರಾಂತಿ ಗೃಹ, ಸಿಬ್ಬಂದಿ ಶಾಖೆಗೆ ಬೆಸ್ಟ್ ಪ್ರಶಸ್ತಿ



ಮೈಸೂರು, ಮೇ 27(ಎಸ್‌ಬಿಡಿ)– ತುರುವೇಕೆರೆ ಸಮೀಪದ ಬಾಣಸಂದ್ರ ರೈಲ್ವೆ ನಿಲ್ದಾಣ, 'ಉತ್ತಮ ನಿರ್ವಹಣೆ ನಿಲ್ದಾಣ' ಪ್ರಶಸ್ತಿಗೆ ಭಾಜನವಾಗಿದ್ದು, ಪ್ರತ್ಯೇಕ ವಿಭಾಗದಲ್ಲಿ ಮೈಸೂರು ನಿಲ್ದಾಣಕ್ಕೂ ಎರಡು ಪ್ರಶಸ್ತಿಗಳು ಸಂದಿವೆ.

ನೈರುತ್ಯ ರೈಲ್ವೆ ಮೈಸೂರು ವಿಭಾಗದಲ್ಲೇ 'ಉತ್ತಮವಾಗಿ ನಿರ್ವಹಿಸಲ್ಪಟ್ಟ ನಿಲ್ದಾಣ' ಪ್ರಶಸ್ತಿಗೆ ಬಾಣಸಂದ್ರ ರೈಲ್ವೆ ನಿಲ್ದಾಣ ಪಾತ್ರವಾಗಿದ್ದರೆ, ಮೈಸೂರಿನ ಚಾಲನಾ ಸಿಬ್ಬಂದಿಗಳ ವಿಶ್ರಾಂತಿ ಗೃಹಕ್ಕೆ 'ಅತ್ಯುತ್ತಮವಾಗಿ ನಿರ್ವಹಿಸಲಾದ ರನ್ನಿಂಗ್ ರೂಮ್' ಹಾಗೂ ಮೈಸೂರಿನ ಸಿಬ್ಬಂದಿ ಶಾಖೆಯ ಕಚೇರಿ 'ಅತ್ಯುತ್ತಮವಾಗಿ ನಿರ್ವಹಿಸಲ್ಪಟ್ಟ ಕಚೇರಿ' ಪ್ರಶಸ್ತಿ ದಕ್ಕಿದೆ. 67ನೇ ರೈಲ್ವೆ ಸಾಪ್ತಾಹಿಕ ಆಚರಣೆ ಹಿನ್ನೆಲೆಯಲ್ಲಿ ಅತ್ಯುತ್ತಮ ನಿರ್ವಹಣೆ ಆಧಾರದಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಈ ಮೂರು ವಿಭಾಗದ ಪ್ರಶಸ್ತಿಗಳ ಜೊತೆಗೆ 2021–22ನೇ ಸಾಲಿನಲ್ಲಿ ಪ್ರಶಂಸನೀಯ ಕಾರ್ಯಕ್ಷಮತೆ ತೋರಿದ 86 ಸಿಬ್ಬಂದಿಗೆ ವೈಯಕ್ತಿಕ ಪ್ರಶಸ್ತಿ ಹಾಗೂ 10 ಸಮೂಹ ಪ್ರಶಸ್ತಿಗಳನ್ನು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ಅವರು ಮೈಸೂರಿನ ರೈಲ್ವೆ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ನಡೆದ 67ನೇ ರೈಲ್ವೆ ಸಾಪ್ತಾಹಿಕ ಆಚರಣೆಯಲ್ಲಿ ಪ್ರದಾನ ಮಾಡಿದರು.

ಈ ವೇಳೆ ರಾಹುಲ್ ಅಗರ್ವಾಲ್ ಅವರು ಮಾತನಾಡಿ, ಮೈಸೂರು ವಿಭಾಗವು ವಾರ್ಷಿಕ ದಕ್ಷತೆ ಫಲಕವನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ ವಿಭಾಗದ ವಿತ್ತ ಇಲಾಖೆ, ವಿದ್ಯುತ್, ವೈದ್ಯಕೀಯ ಮತ್ತು ಕಾರ್ಯನಿರ್ವಹಣಾ ವಿಭಾಗಗಳೂ ನೈಋತ್ಯ ರೈಲ್ವೆ ವಲಯ ಮಟ್ಟದಲ್ಲಿ ದಕ್ಷತಾ ಫಲಕ ಪಡೆದುಕೊಂಡಿವೆ. ಹಾಗೆಯೇ ಹುಬ್ಬಳ್ಳಿಯಲ್ಲಿ ನಡೆದ 67ನೇ ರೈಲ್ವೆ ಸಪ್ತಾಹ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ದಾವಣಗೆರೆ ರೈಲ್ವೆ ನಿಲ್ದಾಣಕ್ಕೆ 'ಅತ್ಯುತ್ತಮ ನಿರ್ವಹಣೆಯ ಪ್ರಮುಖ ನಿಲ್ದಾಣ' ಪ್ರಶಸ್ತಿ ನೀಡಲಾಗಿದೆ. ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಧನ್ಯವಾದ ತಿಳಿಸಿದರು.

ವಿಭಾಗದ ವಾರ್ಷಿಕ ಕಾರ್ಯ ವೈಖರಿ ಬಗ್ಗೆ ಮಾತನಾಡಿ, ಒಟ್ಟಾರೆ 9.14 ದಶಲಕ್ಷ ಟನ್‌ಗಳ ಸರಕು ಸಾಗಣೆಯೊಂದಿಗೆ ಶೇ.32.20ರಷ್ಟು ಹೆಚ್ಚು ಪ್ರಗತಿ ಸಾಧಿಸಿದೆ. ಮೂಲ ಆದಾಯ ಶೇ.20.26ರಷ್ಟು ಏರಿಕೆಯೊಂದಿಗೆ 930.01 ಕೋಟಿ ರೂ. ತಲುಪಿದ್ದು, 14.04 ದಶಲಕ್ಷ ಮಂದಿ ಪ್ರಯಾಣಿಸಿದ್ದಾರೆ. 9.12 ದಶಲಕ್ಷ ಯೂನಿಟ್ ಇಂಧನ(80 ಕೋಟಿ ರೂ.) ಉಳಿತಾಯವಾಗಿದೆ. ವಿಭಾಗದ 5 ಚಾಲನಾ ಸಿಬ್ಬಂದಿ ಕೊಠಡಿಗಳನ್ನು ಐಎಸ್‌ಓ ಪ್ರಮಾಣೀಕರಿಸಿದೆ. ಹಾಸನ, ಅರಸೀಕೆರೆ, ಬೀರೂರು ಮತ್ತು ಕಡೂರು ನಿಲ್ದಾಣಗಳಲ್ಲಿ ಪ್ರಯಾಣಿಕರ ಲಿಫ್ಟ್ ಕಾರ್ಯಾರಂಭಗೊಳಿಸಲಾಗಿದೆ. ಶೇ.100ರಷ್ಟು ಕೋಚಿಂಗ್ ಬ್ಯಾಲೆನ್ಸ್ ಶೀಟ್ ಅಳವಡಿಸಿಕೊಂಡಿರುವ ಮೊದಲ ವಿಭಾಗ ನಮ್ಮದಾಗಿದೆ ಎಂದು ಹೇಳಿದರು.

ಭಾರತೀಯ ರೈಲ್ವೆಯಲ್ಲಿಯೇ ಮೈಸೂರು ವಿಭಾಗ ಶೇ.100ರಷ್ಟು ಉದ್ಯೋಗಿಗಳಿಗೆ ವಿಶಿಷ್ಟ ವೈದ್ಯಕೀಯ ಗುರುತಿನ ಚೀಟಿ ನೋಂದಣಿ ಪೂರ್ಣಗೊಳಿಸಿದ ಮೊದಲ ವಿಭಾಗವಾಗಿದೆ. ವಿವಿಧ ರೈಲುಗಳಲ್ಲಿ ಹೆಚ್ಚುವರಿಯಾಗಿ 28 ಕೋಚ್‌ಗಳನ್ನು ಶಾಶ್ವತವಾಗಿ ಮತ್ತು 384 ಕೋಚ್‌ಗಳನ್ನು ತಾತ್ಕಾಲಿಕವಾಗಿ ಒದಗಿಸಲಾಗಿದೆ. ಮೈಸೂರಿನಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸುವುದರ ಜೊತೆಗೆ ಸ್ವಚ್ಛ ಭಾರತ, ಪ್ಲಾಸ್ಟಿಕ್ ನಿಷೇಧ ಮತ್ತು ನೀರಿನ ಸಂರಕ್ಷಣೆ ಕುರಿತು ಹಲವಾರು ಜಾಥಾಗಳನ್ನು ನಡೆಸಲಾಗಿದೆ. ಹಸಿರೀಕರಣಕ್ಕಾಗಿ ನಿರಂತರ ಪರಿಶ್ರಮದಲ್ಲಿ ತೊಡಗಿದ್ದು ಪ್ರಯತ್ನದಲ್ಲಿ ಸುಮಾರು 3 ಸಾವಿರ ಮರಗಿಡಗಳನ್ನು ನೆಡಲಾಗಿದೆ. 750 ಉದ್ಯೋಗಿಗಳಿಗೆ ಬಡ್ತಿ ಹಾಗೂ ಆರ್ಥಿಕ ಉನ್ನತ ದರ್ಜೆಯನ್ನು ನಿಗದಿತ ಸಮಯದೊಳಗೆ ನೀಡಲಾಗಿದೆ ಎಂದು ತಿಳಿಸಿದರು.

ಡಿಜಿಟಲೀಕರಣ ಪ್ರಯತ್ನಗಳನ್ನು ಮುಂದುವರೆಸಿ ಕಾರ್ಯಕ್ಷಮತೆ ಮೌಲ್ಯಮಾಪನ ವರದಿಯಲ್ಲಿ ಉತ್ತಮ ಸಾಧನೆಯಾಗಿದೆ. ಅರಸೀಕೆರೆ ಮತ್ತು ಹಾವೇರಿ–ಕರ್ಜಗಿ ಭಾಗದಲ್ಲಿ 14.7 ಕಿ.ಮೀ. ದ್ವಿಪಥ ಹಳಿಯ ಕಾರ್ಯಾರಂಭ, ಚಿತ್ರದುರ್ಗ ಮತ್ತು ಹೊಸದುರ್ಗ ನಡುವೆ 64 ಕಿ.ಮೀ. ವಿದ್ಯುದ್ದೀಕರಣಗೊಳಿಸಲಾಗಿದೆ. ಲೂಪ್ ಲೈನ್ ವೇಗವನ್ನು 70 ಪಥ ಕಿ.ಮೀ.ಗಳಲ್ಲಿ ಹೆಚ್ಚಿಸಲಾಗಿದೆ. ರೈಲ್ವೆ ಸೇತುವೆ ನಿರ್ಮಾಣದ ಮೂಲಕ 8 ಲೆವೆಲ್ ಕ್ರಾಸಿಂಗ್‌ಗಳನ್ನು ತೆರವು ಮಾಡಲಾಗಿದ್ದು, 21 ಶಾಶ್ವತ ವೇಗದ ನಿರ್ಬಂಧವನ್ನೂ ಸಹ ತೆಗೆದುಹಾಕಲಾಗಿದೆ. ಸಿಬ್ಬಂದಿ ಸಂಘ ಸಂಸ್ಥೆಗಳ ಮೂಲಕ ಆಡಳಿತಕ್ಕೆ ರಚನಾತ್ಮಕ ಬೆಂಬಲ, ವಿವಿಧ ಸಾಮಾಜಿಕ ಮತ್ತು ಕಲ್ಯಾಣ ಚಟುವಟಿಕೆಗೆ ಉತ್ತೇಜನ, ನೌಕರರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಲಾಗಿದೆ ಎಂದು ವಿವರಿಸಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ದೇವಸಹಾಯಂ ಹಾಗೂ ಬುಡತಿ ಶ್ರೀನಿವಾಸುಲು, ಮೈಸೂರು ವಿಭಾಗದ ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಪ್ರಶಾಂತ್ ಮಾಸ್ತಿಹೊಳಿ ಸೇರಿದಂತೆ ಇಲಾಖೆಯ ಅನೇಕ ಅಧಿಕಾರಿಗಳು ಉಪಸ್ಥಿತರಿದ್ದರು. ಇತ್ತೀಚೆಗೆ ವಲಯ ಮಟ್ಟದಲ್ಲಿ ಮೈಸೂರು ವಿಭಾಗದ 6 ಅಧಿಕಾರಿಗಳು ಮತ್ತು 34 ಉದ್ಯೋಗಿಗಳನ್ನು ಪುರಸ್ಕರಿಸಲಾಯಿತು.

ಆರ್‌ಎಸ್‌ಎಸ್‌ನವರು ಭಾರತೀಯರಲ್ಲ, ಆರ್ಯರು!

ಮಾಜಿ ಸಿಎಂ ಸಿದ್ದರಾಮಯ್ಯ ವಾಗ್ದಾಳಿ



ಬೆಂಗಳೂರು: ಮಾಜಿ ಪ್ರಧಾನಿ ದಿ. ಪಂಡಿತ್ ಜವಾಹರ್ ಲಾಲ್ ನೆಹರು ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ಮೂಲಕ್ಕೆ 'ಕೈ' ಹಾಕಿದ್ದಾರೆ. ಆ ಮೂಲಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಜೆಂಡಾವನ್ನು ಪರೋಕ್ಷವಾಗಿ ಜನರಿಗೆ ತಲುಪಿಸಿದ್ದಾರೆ. ಮಲ್ಲಿಕಾರ್ಜುನ್ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ಒಂದೇ ವೇದಿಕೆಯಲ್ಲಿ ಬಿಜೆಪಿ ಮೇಲೆ ವಾಗ್ದಾಳಿ ನಡೆಸಿದರು.

ಒಬ್ಬೊಬ್ಬ ನಾಯಕರು ಒಂದೊಂದು ವಿಚಾರವನ್ನಿಟ್ಟುಕೊಂಡು ಬಿಜೆಪಿ ನಾಯಕರನ್ನು ತರಾಟೆಗೆ ತೆಗೆದುಕೊಂಡರು. ಮಾಜಿ ಪ್ರಧಾನಿ ದಿ. ಪಂಡಿತ್ ನೆಹರು ಅವರೊಂದಿಗೆ ಈಗಿನ ಪ್ರಧಾನಿ ಮೋದಿಯನ್ನು ಹೋಲಿಕೆ ಮಾಡಲು ಬರಲ್ಲ. ಆಕಾಶಕ್ಕೂ ಭೂಮಿಗೂ ಹೋಲಿಕೆ ಮಾಡಿದಂತಾಗುತ್ತದೆ ಎನ್ನುವ ಮೂಲಕ ಪ್ರಧಾನಿ ಮೋದಿ ಅವರನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು. ಜೊತೆಗೆ ಪಠ್ಯ ಪರಿಷ್ಕರಣೆ ಸೇರಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಕಿಡಿಕಾರಿದರು.

ಆರ್‌ಎಸ್‌ಎಸ್ ಮೂಲವನ್ನೇ ಪ್ರಶ್ನಿಸಿದ ಸಿದ್ದರಾಮಯ್ಯ: ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಪಠ್ಯ ಪರಿಷ್ಕರಣೆಯ ವಿರುದ್ಧ ಕಿಡಿಕಾರಿ, ಹೆಡಗೆವಾರ್‌ಗಿಂತ ಆ ರೋಹಿತ್ ಚಕ್ರತೀರ್ಥ ಒಂದು ಹೆಜ್ಜೆ ಮುಂದಿದ್ದಾನೆ. ಅಂಥವನ ಕೈಗೆ ಪಠ್ಯ ಪರಿಷ್ಕರಣೆ ಕೊಟ್ಟರೆ ನಮ್ಮ ದೇಶ ಎತ್ತ ಸಾಗುತ್ತದೆ ಎಂದು ಆಕ್ಷೇಪಿಸಿದರು. ಇದೇ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮೂಲವನ್ನೇ ಸಿದ್ದರಾಮಯ್ಯ ಪ್ರಶ್ನೆ ಮಾಡಿದರು. ಇಷ್ಟೆಲ್ಲ ಮಾಡುತ್ತಿದ್ದಾರಲ್ಲ ಈ ಆರ್‌ಎಸ್‌ಎಸ್‌ನವರು, ಇವರೆಲ್ಲ ನಮ್ಮ ದೇಶದ ಮೂಲ ನಿವಾಸಿಗಳಾ, ಅವರು ಮೂಲ ಭಾರತೀಯರಾ, ಅಲ್ಲ. ಆರ್‌ಎಸ್‌ಎಸ್‌ನವರು ಆರ್ಯರು. ಆರ್ಯರು ಭಾರತದವರಲ್ಲ. ಹೊರಗಿನಿಂದ ಬಂದವರು. ದ್ರಾವಿಡರು ಇಲ್ಲಿನ ಮೂಲ ನಿವಾಸಿಗಳು ಎಂದರು.

ರಾಜ್ಯಸಭಾ ವಿಪಕ್ಷ ನಾಯಕ ಮಲ್ಲಿಕಾರ್ಜುನ್ ಖರ್ಗೆ ಅವರು ಮಧ್ಯೆ ಪ್ರವೇಶಿಸಿ, ನಾನಾಗಲೇ ಇದರ ಬಗ್ಗೆ ಸಂಸತ್ತಿನಲ್ಲಿಯೇ ಮಾತನಾಡಿದ್ದೇನೆ. ಶಾರುಖ್ ಖಾನ್ ದೇಶ ತೊರೆಯಬೇಕು ಎಂದಿದ್ದರು. ಅವರು ಎಲ್ಲಿಗೆ ಹೋಗಬೇಕಪ್ಪಾ ಎಂದು ನಾನಾಗ ಪ್ರಶ್ನೆ ಮಾಡಿದ್ದೆ. ಮಧ್ಯಪ್ರಾಚ್ಯದಿಂದ ಬಂದವರು ನೀವು. ಇಲ್ಲಿಂದ ನೀವು ಹೋಗಬೇಕು ಎಂದು ರಾಜನಾಥ್ ಸಿಂಗ್‌ಗೆ ಆಗಲೇ ನಾನು ಹೇಳಿದ್ದೆ ಎಂದರು. ನೀವು ಹೇಳಿದ್ದರೆ, ಅದು ಸರಿಯಾಗಿದೆ ಎಂದು ಸಿದ್ದರಾಮಯ್ಯ ತಮ್ಮ ಮಾತು ಮುಂದುವರೆಸಿದರು.

ಹೆಡಗೆವಾರ್ ಮೇಲೆ ಏಕವಚನದಲ್ಲಿ ವಾಗ್ದಾಳಿ!: ಇನ್ನು ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೆವಾರ್ ಅವರ ಮೇಲೆ ರಾಜ್ಯಸಭಾ ವಿಪಕ್ಷ ನಾಯಕ ಮಲ್ಲಿಕಾರ್ಜುನ್ ಖರ್ಗೆ ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಪಠ್ಯ ಪುಸ್ತಕದಲ್ಲಿ ಹೆಡಗೆವಾರ್ ವಿಚಾರ ಸೇರಿಸಿದ್ದಾರೆ. ಅವನ 1921ರ ಭಾಷಣವನ್ನು ಸೇರಿಸಿದ್ದಾರೆ. ಅವನು ಇಲ್ಲಿ ಬಂದು ಏನು ಮಾಡಿದ್ದ, ದೇಶ ಒಡೆಯುವವರನ್ನು ಪಠ್ಯದಲ್ಲಿ ಸೇರಿಸುತ್ತಿದ್ದಾರೆ.

ಆರ್‌ಎಸ್‌ಎಸ್ ವಿಚಾರಗಳನ್ನು ಮಕ್ಕಳ ಪಠ್ಯ ಪುಸ್ತಕದಲ್ಲಿ ಸೇರಿಸಿ, ಮಕ್ಕಳ ಮನಸ್ಸು ಕೆಡಿಸುವ ಕೆಲಸ ಮಾಡಲು ಮುಂದಾಗಿದ್ದಾರೆ. ಈ ಬಗ್ಗೆ ನಾವು ಒಗ್ಗಟ್ಟಿನಿಂದ ಹೋರಾಟ ಮಾಡಬೇಕು. ನಮ್ಮ ರಾಜ್ಯದಲ್ಲಿ ಅವರ ಸಿದ್ಧಾಂತ ಸೇರಿಸಲು ಬಿಡಬಾರದು. ಜೊತೆಗೆ ಪಂ. ನೆಹರು, ಭಗತ್ ಸಿಂಗ್ ಅವರ ಪಾಠ ತೆಗೆಯುತ್ತಿದ್ದಾರೆ ಎಂದು ಮಲ್ಲಿಕಾರ್ಜುನ್ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಪಠ್ಯ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರ ಮೇಲೆ ವಾಗ್ದಾಳಿ ನಡೆಸಿದರು. ರೋಹಿತ್ ಚಕ್ರತೀರ್ಥ ಕನ್ನಡ ಬಾವುಟವನ್ನು ಅಂಡರ್ ವೇರ್‌ಗೆ ಹೋಲಿಸಿದ್ದವನು. ಆದರೆ ಈಗ ಕನ್ನಡ ಸಂಘಟನೆಗಳು ಏನು ಮಾಡುತ್ತಿವೆ ನಾನು ಹೇಳುತ್ತೇನೆ. ಕನ್ನಡ ನೆಲ, ಜಲ ಉಳಿಸಿಕೊಳ್ಳ ಬೇಕಾದರೆ ಹೋರಾಟ ಮಾಡಿ. ಇದರ ವಿರುದ್ಧವೂ ಹೋರಾಟ ಮಾಡಬೇಕು ಎಂದರು.

ಸಿದ್ದರಾಮಯ್ಯ ವಿರುದ್ಧ ಈಶ್ವರಪ್ಪ ಆಕ್ರೋಶ

ಬೆಂಗಳೂರು: ಸ್ಥಾನಮಾನಕ್ಕಾಗಿ ಪಕ್ಷಾಂತರ ಮಾಡುತ್ತಾರೆ. ಇಂಥವರು ಪ್ರಧಾನಿ, ಆರ್.ಎಸ್.ಎಸ್. ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುತ್ತಾರೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೆಹರೂ ಮತ್ತು ಮೋದಿ ಅವರನ್ನು ಹೋಲಿಕೆ ಮಾಡಿ ನೀಡಿದ ಹೇಳಿಕೆ ಹಾಗೂ ಆರ್.ಎಸ್.ಎಸ್. ಸಂಘಟನೆ ವಿದೇಶಿ ಸಂಘಟನೆ ಎಂದು ಹೇಳಿಕೆ ನೀಡಿರುವುದನ್ನು ಖಂಡಿಸಿದ್ದಾರೆ. ಆರ್.ಎಸ್.ಎಸ್. ಸ್ವಾತಂತ್ರ್ಯ ಪೂರ್ವದಿಂದಲೂ ರಾಷ್ಟ್ರಭಕ್ತರನ್ನು ನಿರ್ಮಾಣ ಮಾಡಲು ಮತ್ತು ಹಿಂದುತ್ವ ಉಳಿಸಲು ಶ್ರಮಿಸುತ್ತಿದೆ. ಕೂಡಲೇ ಸಿದ್ಧರಾಮಯ್ಯ ಅವರು ಜನರ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು. ಅಲೆಮಾರಿ ಸಿದ್ಧರಾಮಯ್ಯ ಅಧಿಕಾರಕ್ಕೋಸ್ಕರ ಒಂದು ಸಲ ಚಾಮುಂಡೇಶ್ವರಿ, ಇನ್ನೊಮ್ಮೆ ಬಾದಾಮಿ. ಈಗ ಅಲ್ಲಿಯೂ ಸೋಲುವ ಭೀತಿಯಿಂದ ಜಮೀರ್ ಅಹ್ಮದ್ ಕ್ಷೇತ್ರಕ್ಕೆ ಹೋಗ್ತಾರೆ ಎಂದು ಟೀಕಿಸಿದ್ದಾರೆ. ಸೋನಿಯಾ ವಿದೇಶಿಯರು. ಇಂದು ಕಾಂಗ್ರೆಸ್ ಇಟಲಿ ಪ್ರೇರಿತ ನಾಯಕತ್ವದ ಹಿಡಿತದಲ್ಲಿದೆ. ಹಿಂದೆ ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯ ಅಧಿಕಾರಕ್ಕಾಗಿ ಕಾಂಗ್ರೆಸ್‌ಗೆ ಹೋಗಿದ್ದಾರೆ. ಅವರು ಆರ್.ಎಸ್.ಎಸ್. ಬಗ್ಗೆ ಮಾತನಾಡಲು ಅಯೋಗ್ಯರು ಎಂದಿದ್ದಾರೆ.

ಕಾವೇರಿ ನದಿಗಿಳಿದ ಮಾನಸಿಕ ಅಸ್ವಸ್ಥನ ಕಾರು

ಅದೃಷ್ಟವಶಾತ್ ಅಪಾಯದಿಂದ ಪಾರು





ಶ್ರೀರಂಗಪಟ್ಟಣ, ಮೇ 27(ಆರ್‌ಕೆ)– ಮಾನಸಿಕ ಖಿನ್ನತೆಗೊಳಗಾಗಿದ್ದ ಯುವಕ ಚಾಲನೆ ಮಾಡಿದ ಕಾರು ನಿಯಂತ್ರಣ ತಪ್ಪಿ ಕಾವೇರಿ ನದಿಗಿಳಿದ ಘಟನೆ ಶ್ರೀರಂಗಪಟ್ಟಣದ ನಿಮಿಷಾಂಬ ಮತ್ತು ಕರಿಘಟ್ಟ ನಡುವೆ ಸಂಭವಿಸಿದೆ.

ಗುರುವಾರ ಮುಂಜಾನೆ ಕಾವೇರಿ ನದಿಯಲ್ಲಿ ಬಿಎಂಡಬ್ಲ್ಯೂ ಕಾರು (ಹೆಚ್‌ಆರ್ 26–ಬಿಸಿ 1333) ತೇಲುತ್ತಿರುವುದನ್ನು ಕಂಡ ಸಾರ್ವಜನಿಕರು ನೀಡಿದ ಮಾಹಿತಿಯನ್ವಯ ಶ್ರೀರಂಗಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಪುನೀತ್ ಮತ್ತು ಸಬ್ ಇನ್ಸ್‌ಪೆಕ್ಟರ್ ರೇಖಾ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕ್ರೇನ್ ಮೂಲಕ ಕಾರನ್ನು ಮೇಲೆತ್ತಿ ಠಾಣೆಗೆ ಕೊಂಡೊಯ್ದರು. ಕಾರಿನಲ್ಲಿದ್ದ ಕೆಲ ದಾಖಲೆಗಳ ಸಹಾಯದಿಂದ ಕಾರು ಮಾಲೀಕನ ಮೊಬೈಲ್ ಸಂಖ್ಯೆಯನ್ನು ಪತ್ತೆಹಚ್ಚಿದ ಪೊಲೀಸರು, ಆತನಿಗೆ ಕರೆ ಮಾಡಿ ಕರೆದಿದ್ದಾರೆ.

ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಿವಾಸಿ ರೂಪೇಶ್ ಎಂಬಾತ ಠಾಣೆಗೆ ಬಂದಿದ್ದು, ಆತ ಕಳೆದ ತಿಂಗಳು ಮೃತಪಟ್ಟ ತಮ್ಮ ತಾಯಿಯ ನೆನಪಿನಲ್ಲಿ ಕೊರಗಿ ಮಾನಸಿಕ ಖಿನ್ನತೆಗೆ ಒಳಗಾಗಿರುವುದು ಗೊತ್ತಾಗಿದೆ. ರಾತ್ರಿ ವೇಳೆ ನಿಯಂತ್ರಣ ತಪ್ಪಿದ ಕಾರು ನದಿಗಿಳಿದಾಗ ಈತ ಕಾರಿನಿಂದ ಹೊರಬಂದು ಸುತ್ತಾಡುತ್ತಿದ್ದ ಎಂಬುದು ಆತನ ಹೇಳಿಕೆಯಿಂದ ತಿಳಿದುಕೊಂಡ ಪೊಲೀಸರು, ಯುವಕನ ಸಂಬಂಧಿಕರನ್ನು ಕರೆಸಿಕೊಂಡು ಕಾರು ಮತ್ತು ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಯುವಕನನ್ನು ಅವರ ವಶಕ್ಕೆ ಒಪ್ಪಿಸಿದ್ದಾರೆ.

ಪ್ಯಾರಾ ಅಥ್ಲೆಟಿಕ್‌ನಲ್ಲಿ ಭಾರತಿಗೆ ಚಿನ್ನದ ಪದಕ



ಮೈಸೂರು,ಮೇ 27(ಜಿಎ)– ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಈವೆಂಟ್‌ನಲ್ಲಿ ಮೈಸೂರಿನ ವಿದ್ಯಾರ್ಥಿನಿ ಬಿ. ಭಾರತಿ ಎರಡು ಚಿನ್ನದ ಪದಕಗಳಿಸಿದ್ದಾರೆ.

ಮೇ 4 ರಿಂದ 7ರವರೆಗೆ ನವದೆಹಲಿಯ ಜವಾಹರಲಾಲ್ ನೆಹರು ಸ್ಟೇಡಿಯಂನಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್‌ನಲ್ಲಿ ಭಾಗವಹಿಸಿದ್ದ ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿನಿ ಬಿ. ಭಾರತಿ ತನ್ನ ಮೊದಲ ಪ್ರದರ್ಶನದಲ್ಲಿ, 100 ಮೀಟರ್ ಓಟ ಮತ್ತು ಶಾಟ್–ಪುಟ್‌ನಲ್ಲಿ ಎರಡು ಚಿನ್ನದ ಪದಕಗಳಿಕೊಂಡಿದ್ದಾರೆ. ತಂದೆ ಸಂಪತ್ ಹಾಗೂ ತಾಯಿ, ಅವರ ಕೋಚ್ ಮೋಹನ್, ಸಿಪಿಎಸ್‌ಎಫ್‌ಐ ನ ಕವಿತಾ ಸುರೇಶ್, ರಾಮಚಂದ್ರ, ಶ್ರೀಧರ್ ಅವರು ವಿದ್ಯಾರ್ಥಿನಿಯ ಸಾಧನೆಗೆ ಅಪಾರ ಬೆಂಬಲ ನೀಡಿ ಪ್ರೋತ್ಸಾಹಿಸಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಅಕ್ಷರ ಸಂಸ್ಕೃತಿ ಅಪಾಯದಲ್ಲಿದೆ

● ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ಆತಂಕ ● ಪಕ್ಷದ ಪರವಾಗಿ ಪಠ್ಯಪುಸ್ತಕ ರಚನೆ ಮಾಡಿಸಿದರೆ ಸಾಹಿತ್ಯಕ್ಕೆ ಅಪಮಾನ ● ಅಕ್ಷರ ಸಂಸ್ಕೃತಿ ಕತ್ತಲು ಬಿತ್ತದೆ ಬೆಳಕು ಬಿತ್ತಬೇಕು ● ಮಕ್ಕಳ ಮನಸ್ಸಿನೊಂದಿಗೆ ಚೆಲ್ಲಾಟ ಬೇಡ



ಮೈಸೂರು,ಮೇ 27(ಎಂಟಿವೈ)– ಶಾಲಾ ಪಠ್ಯಪುಸ್ತಕ ರಚನೆಯು ಯಾವುದೇ ಸಿದ್ಧಾಂತ ಮತ್ತು ಪಕ್ಷದ ಪರವಾಗಿ ಮಾಡಿಸುವುದು ಅಕ್ಷರ ಮತ್ತು ಸಾಹಿತ್ಯಕ್ಕೆ ಮಾಡುವ ಅವಮಾನವಾಗಿದ್ದು, ಮಕ್ಕಳ ಮನಸನ್ನು ದಿವಾಳಿ ಮಾಡುವ ಸಂಚಾಗುತ್ತದೆ ಎಂದು ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ಬಿಎಂಶ್ರೀ ಸಭಾಂಗಣದಲ್ಲಿ ಕನ್ನಡ ಅಧ್ಯಯನ ಸಂಸ್ಥೆ, ಯದುನಂದನ ಪ್ರಕಾಶನದ ಸಹಯೋಗದಲ್ಲಿ ಶುಕ್ರವಾರ ಜರುಗಿದ ಡಾ.ಎಸ್.ಡಿ.ಶಶಿಕಲಾ ಅವರ 15 ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಜಾಬ್, ಜಟ್ಕಾ ಕಟ್ ಹಾಗೂ ಇನ್ನಿತರ ಧಾರ್ಮಿಕ ಭಾವನೆ ಕೆರಳಿಸುವ ವಿವಾದದ ಬಳಿಕ ಇದೀಗ ಪಠ್ಯಪುಸ್ತಕವನ್ನು ತಿರುಚುವ ರೋಗ ಹರಡಿದೆ ಎಂದರು.

ಈ ಅವಾಂತರ ಗಮನಿಸಿದರೆ ಅಯ್ಯೋ ಎನಿಸುವುದಲ್ಲದೆ, ಮಕ್ಕಳ ಭವಿಷ್ಯ ನೆನೆದರೆ ಆತಂಕವಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಅಕ್ಷರ ಸಂಸ್ಕೃತಿ ಅಪಾಯದಲ್ಲಿ ಇದೆ. ಶಿಕ್ಷಕರು ಈ ಸಂಸ್ಕೃತಿಯ ಘನತೆ ಮತ್ತು ಗೌರವ ಕಾಪಾಡಬೇಕು. ಶೈಕ್ಷಣಿಕ ಕ್ಷೇತ್ರದ ಶಕ್ತಿಯನ್ನು ಉಳಿಸಿ, ರಕ್ಷಿಸಬೇಕು ಎಂದು ಸಲಹೆ ನೀಡಿದರು.

ಅಕ್ಷರ ಸಂಸ್ಕೃತಿಯೂ ಎಂದಿಗೂ ಕತ್ತಲು ಬಿತ್ತುವ ಕೆಲಸ ಮಾಡಬಾರದು. ಅದು ಯಾವಾಗಲೂ ದೀಪ ಬೆಳಗುವಂತಿರಬೇಕು. ಮನುಷ್ಯರನ್ನು ಬೆಸೆಯುವ, ಪುನರ್ ರೂಪಿಸುವ ಕೆಲಸ ಮಾಡಬೇಕು. ಆದರೆ ಈಗ ಪಕ್ಷ, ಸಿದ್ಧಾಂತವನ್ನು ಬಿತ್ತಲು ಪಠ್ಯಪುಸ್ತಕವನ್ನು ಬಳಸಿಕೊಳ್ಳಲಾಗುತ್ತಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ಅರ್ಹತೆ ಇಲ್ಲದವರು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗೆ ಸೇರಿಸಿದರೆ ಏನು ಆಗುತ್ತದೆ ಎಂಬುದಕ್ಕೆ ಈಗಿನ ದುಸ್ಥಿತಿಯೇ ಉತ್ತಮ ಉದಾಹರಣೆಯಾಗಿದೆ ಎಂದು ಕಿಡಿಕಾರಿದರು.

ಅಕ್ಷರ ಅನ್ನವಾಗಬೇಕೇ ಹೊರತು, ನೀರುಗಂಜಿ ಆಗಬಾರದು. ಅಕ್ಷರ ಸಂಸ್ಕೃತಿ ಬಲಿಷ್ಠವಾಗಬೇಕೆ ಹೊರತು ದುರ್ಬಲಗೊಳಿಸಬಾರದು. ಮಾನವೀಯತೆ, ಮನುಷ್ಯತ್ವ, ಸಂವಿಧಾನದ ಮುಖಿ ಆಗಿ ಪುಸ್ತಕ ರಚನೆಯಾಗದಿದ್ದರೆ ಮಕ್ಕಳ ಮನಸ್ಸು ದಿವಾಳಿ ಆಗಲಿದೆ. ಮಕ್ಕಳ ಮನಸ್ಸಿನೊಂದಿಗೆ ಎಂದೂ ಚೆಲ್ಲಾಟವಾಡಬಾರದು. ಬೌದ್ಧಿಕ ಸಂಘರ್ಷ ಬೇಕಾದರೂ ಉನ್ನತ ಶಿಕ್ಷಣ ಹಂತದಲ್ಲಿ ಇರಲಿ. ಆಗ ಅದಕ್ಕೊಂದು ಅರ್ಥ ಬರುತ್ತದೆ ಅದು ಹೊಸ ದಾರಿಯ ಶೋಧಕ್ಕೆ ಕಾರಣವಾಗಬಹುದು. ಆದರೆ, ಪ್ರಾಥಮಿಕ, ಮಾಧ್ಯಮಿಕ ಶಾಲಾ ಹಂತದಲ್ಲಿ ಈ ರೀತಿಯ ಗುದ್ದಾಟ ಸರಿಯಲ್ಲ ಯಾವುದೇ ಕ್ಷೇತ್ರದಲ್ಲಿ ಬದಲಾವಣೆ ಅಗತ್ಯವಾಗಿದೆ. ಅದು ಆರೋಗ್ಯಪೂರ್ಣವಾಗಿ ಇರಬೇಕು ಎಂದರು.

ವಿಜಯಾ ದಬ್ಬೆ ಅವರು ಸ್ತ್ರೀವಾದಕ್ಕೆ ಭದ್ರ ನೆಲೆ ಕಟ್ಟಿಕೊಟ್ಟರು. ಈ ಹಿಂದೆಯೇ ಕನ್ನಡದಲ್ಲಿ ಸ್ತ್ರೀಮುಖಿ ನಡೆ ಕಾಣಸಿಗುತ್ತದೆ. ಅದಕ್ಕೆ ತಾತ್ವಿಕ ನೆಲೆ ಸೃಷ್ಟಿಸಿದವರು ವಿಜಯಾ ಅವರು. ಕನ್ನಡಕ್ಕೆ ಕನ್ನಡತನದ ಮಹಿಳಾವಾದ ಕುರಿತು ಚಿಂತಿಸಿದರು. ಪಾಶ್ಚಿಮಾತ್ಯ ಚಿಂತನೆಯ ಹಿನ್ನೆಲೆಯ ಈ ವಾದಕ್ಕೆ ಪರ್ಯಾಯ ಹೇಗೆ ಸಾಧ್ಯವಿದೆ ಎಂಬುದನ್ನು ತೋರಿಸಿಕೊಟ್ಟರು. ಅವರದ್ದು ಭಿನ್ನ ಮಾರ್ಗ. ಅದುವೇ ಅವರ ಅಸ್ತಿತ್ವ ನೆಲೆಗೊಳ್ಳಲು ಕಾರಣ ಎಂದು ವಿಶ್ಲೇಷಿಸಿದರು.

ಇದೇ ವೇಳೆ ಡಾ.ಎಸ್.ಡಿ.ಶಶಿಕಲಾ ರಚನೆಯ ವಿಮರ್ಶಾ ಕೃತಿಗಳಾದ ಪ್ರಾಯೋಗಿಕ ವಿಮರ್ಶೆ, ಕುವೆಂಪು ಸಾಹಿತ್ಯೋದ್ಯಾನದಲ್ಲೊಂದು ವಿಹಾರ, ಕೌರವಹತಿ ವ್ಯಾಪಾರದೊಳ್, ಗುರುವಗ್ರಹಿಕೆ, ವಿಜಯಾ ದಬ್ಬೆಯವರ ಜೀವನ ಮತ್ತು ಕಾವ್ಯ, ಸಂಪಾದಿತ ಕೃತಿಗಳಾದ ಎಂ.ಶಿಂಗ್ರಯ್ಯ ವಿರಚಿತ ಶ್ರೀಚಾಮರಾಜೇಂದ್ರ ಒಡೆಯರವರು, ಎಂ.ಶಿಂಗ್ರಯ್ಯ ವಿರಚಿತ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರವರು, ಕನ್ನಡ ಭಾಷೆ–ಸಾಹಿತ್ಯ ಮತ್ತು ಸಂಸ್ಕೃತಿ, ವಿಜಯಾ ದಬ್ಬೆ ಸಮಗ್ರ ಸಾಹಿತ್ಯದ 7 ಸಂಪುಟಗಳನ್ನು ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೈವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ನಿಕಟಪೂರ್ವ ನಿರ್ದೇಶಕ ಪ್ರೊ.ಎಂ.ಜಿ. ಮಂಜುನಾಥ, ವಿಶ್ರಾಂತ ನಿರ್ದೇಶಕಿ ಪ್ರೊ.ಪ್ರೀತಿ ಶುಭಚಂದ್ರ ಸಹ ಪ್ರಾಧ್ಯಾಪಕಿ, ಕೃತಿ ಕರ್ತೃ ಡಾ.ಎಸ್.ಡಿ.ಶಶಿಕಲಾ, ಯದುನಂದನ ಪ್ರಕಾಶನದ ರಾಜೇಶ್ ಜಿ.ಹೊನ್ನೇನಹಳ್ಳಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 28 ಮೇ 2022

ಮಧು ಜಿ. ಮಾದೇಗೌಡರ ಪರ ಧ್ರುವನಾರಾಯಣ್ ಮತಯಾಚನೆ

ನಂಜನಗೂಡು, ಮೇ 27(ಸುದರ್ಶನ್)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ಪದವೀಧರರ ಕಷ್ಟ ಸುಖಗಳನ್ನು ಅರಿತಿದ್ದಾರೆ. ಪದವೀಧರರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ನಿರ್ವಹಿಸುವ ಅರ್ಹ ಅಭ್ಯರ್ಥಿಯಾಗಿರುವ ಕಾರಣ ಪದವೀಧರರು ಮೊದಲ ಪ್ರಾಶಸ್ತ್ಯದ ಮತ ನೀಡಿ ಅವರನ್ನು ಜಯಶೀಲರನ್ನಾಗಿ ಮಾಡುವಂತೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮನವಿ ಮಾಡಿದರು.



ನಗರದ ಕನಕದಾಸ ಸಾರ್ವಜನಿಕ ವಿದ್ಯಾ ಸಂಸ್ಥೆಯಲ್ಲಿ ಮಧು ಜಿ.ಮಾದೇಗೌಡ ಪರ ಮತ ಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಎಲ್ಲೆ ಮೀರಿದೆ. ದೇಶದಲ್ಲೆ ರಾಜ್ಯ ಬಿಜೆಪಿ ಸರ್ಕಾರ ಅತ್ಯಂತ ಕೆಟ್ಟ ಭ್ರಷ್ಟ ಸರ್ಕಾರ ಎಂದ ಅವರು, ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ ಪದವೀಧರರ ಪರ ಕೆಲಸ ಮಾಡುವ ಅಭ್ಯರ್ಥಿ ಮಧು. ಜಿ. ಮಾದೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಿ ಎಂದರು. ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ಬಿಜೆಪಿ ಸರ್ಕಾರದ ದುರಾಡಳಿತ ವಿರುದ್ಧ ಪದವೀಧರರು ಎಚ್ಚೆತ್ತುಕೊಳ್ಳಬೇಕು. ಕೆಟ್ಟಿರುವ ವ್ಯವಸ್ಥೆ ಸರಿಪಡಿಸುವ ಕೆಲಸ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪದವೀಧರರು ಜವಾಬ್ದಾರಿಯಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸಿ ಎಂದು ಮನವಿ ಮಾಡಿದರು.

ಈ ವೇಳೆ ನಗರದ ಆದರ್ಶ ಶಾಲೆ, ಲಯನ್ಸ್ ಶಾಲೆ, ರೋಟರಿ ಶಾಲೆ, ಜೆಎಸ್‌ಎಸ್ ಪಾಲಿಟೆಕ್ನಿಕ್‌ಗಳಲ್ಲಿ ಪದವೀಧರ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದರು. ಈ ವೇಳೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಎ.ಆರ್.ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ಕೆ.ತಿಮ್ಮಯ್ಯ, ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ, ಜಿಪಂ ಮಾಜಿ ಅಧ್ಯಕ್ಷ ಹಾಗೂ ಕನಕದಾಸ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು, ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ. ಬಸವರಾಜು, ಮುಖಂಡರಾದ ಕೆ.ಮಾರುತಿ, ಹುಚ್ಚಯ್ಯ, ನೀಲಿಸಿದ್ದು, ನಾಗೇಂದ್ರ, ದೊರೆ ಸ್ವಾಮಿನಾಯಕ, ನಾಗರಾಜಯ್ಯ, ಕೆ.ಬಿ.ಸ್ವಾಮಿ, ಸೇರಿದಂತೆ ಪಕ್ಷದ ಮುಖಂಡರಿದ್ದರು.

ನಾಳೆ ನರಸೀಪುರದಲ್ಲಿ ಎತ್ತಿನಗಾಡಿ ಓಟದ ಸ್ಪರ್ಧೆ

ತಿ.ನರಸೀಪುರ, ಮೇ 27 (ಎಸ್‌ಕೆ)– ಪಟ್ಟಣದ ಶ್ರೀಚೌಡೇಶ್ವರಿ ಅಮ್ಮನವರ ಯುವಕರ ಸ್ನೇಹ ಬಳಗ ಹಾಗೂ ಆಟೋ ಚಾಲಕರು ಮತ್ತು ಕಾರು ಚಾಲಕರ ನೇತೃತ್ವದಲ್ಲಿ 5ನೇ ವರ್ಷದ ರಾಜ್ಯ ಮಟ್ಟದ ಜೋಡಿ ಎತ್ತಿನ ಗಾಡಿ ಓಟದ ಸ್ಪರ್ಧೆ ಮೇ 29 ರಂದು ಭಾನುವಾರ ನಡೆಯಲಿದೆ ಎಂದು ಶ್ರೀಚೌಡೇಶ್ವರಿ ಅಮ್ಮನವರ ಯುವಕರ ಸ್ನೇಹ ಬಳಗದ ಅಧ್ಯಕ್ಷ ಆರ್.ಮಣಿಕಂಠ ರಾಜುಗೌಡ ತಿಳಿಸಿದರು.

ಪಟ್ಟಣದ ತಾಯೂರು ರಸ್ತೆಯಲ್ಲಿರುವ ಮೈದಾನದಲ್ಲಿ ಎತ್ತಿನಗಾಡಿ ಓಟದ ಸ್ಪರ್ಧೆಗೆ ಸಿದ್ಧಗೊಳ್ಳುತ್ತಿರುವ ಸ್ಥಳ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕಾರ್ಯಕ್ರಮವನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಲಿದ್ದಾರೆ. ಸಂಸದ ವಿ.ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಯತಿಂದ್ರ ಸಿದ್ದರಾಮಯ್ಯ, ಎಂ.ಅಶ್ವಿನ್ ಕುಮಾರ್, ಹರ್ಷವರ್ಧನ್, ನಿರಂಜನ್ ಕುಮಾರ್, ಎನ್.ಮಹೇಶ್, ಡಾ.ತಿಮ್ಮಯ್ಯ, ಮಂಜೇಗೌಡ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಹಳ್ಳಿಕಾರ್ ಸಂಘದ ಅಧ್ಯಕ್ಷ ವರ್ತೂರ್ ಸಂತೋಷ್ ಭಾಗವಹಿಸಲಿದ್ದಾರೆ.

ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸುವವರು ಆರ್.ಮಣಿಕಂಠ ರಾಜುಗೌಡ ಮೊ:9740021436 ಸಂಪರ್ಕಿಸಬಹುದು. ಪ್ರಥಮ ಬಹುಮಾನ 1 ಲಕ್ಷ, ದ್ವಿತೀಯ ಬಹುಮಾನ 75 ಸಾವಿರ, ತೃತೀಯ ಬಹುಮಾನ 50 ಸಾವಿರ, ನಾಲ್ಕನೇ ಬಹುಮಾನ 25 ಸಾವಿರ, ಐದನೇ ಬಹುಮಾನ 15 ಸಾವಿರ, 6ನೇ ಬಹುಮಾನವಾಗಿ 10 ಸಾವಿರ ನೀಡಲಾಗುವುದು. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ದೇಸಿ ಕ್ರೀಡೆ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು. ಈ ವೇಳೆ ಸಂಘದ ಕ್ರೇಜಿ ಸುರೇಶ್, ಕಿರಣ್ ಉಪಸ್ಥಿತರಿದ್ದರು.

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಹುಣಸೂರು, ಮೇ 27(ಕೆಕೆ)– ರೋಹಿತ್ ಚಕ್ರತೀರ್ಥರ ನೇತೃತ್ವದಲ್ಲಿ ರಚನೆ ಮಾಡಿರುವ ಪಠ್ಯಪುಸ್ತಕ ಪರಿಷ್ಕರಣ ಸಮಿತಿ ರದ್ದುಗೊಳಿಸಿ, ನಾಡಿನ ರಸಋಷಿ ಕುವೆಂಪು ಅವರಿಗೆ ಅವಹೇಳನ ಮಾಡಿರುವ ಚಕ್ರತೀರ್ಥರನ್ನು ಬಂಧಿಸುವಂತೆ ಒತ್ತಾಯಿಸಿ ಹುಣಸೂರಿನ ಪ್ರಗತಿಪರ ಸಂಘಟನೆಗಳು ಸಂವಿಧಾನ ಸರ್ಕಲ್‌ನಲ್ಲಿ ಪರಿಷ್ಕೃತ ಪಠ್ಯದಲ್ಲಿನ ಪ್ರತಿಗಾಮಿ ಪಾಠದ ಕೃತಿ ಸುಡುವ ಮೂಲಕ ಪ್ರತಿಭಟನೆ ನಡೆಸಿದವು.

ಸಂವಿಧಾನ ಸರ್ಕಲ್‌ನಲ್ಲಿ ಸಮಾವೇಶಗೊಂಡ ರೈತ ಸಂಘ, ಸಿಪಿಎಂ, ದಸಂಸ, ಆದಿಜಾಂಬವ ಸಂಘ ಡಿಎಚ್‌ಎಸ್ ಸೇರಿದಂತೆ ವಿವಿದ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ರದ್ದಾಗಲಿ. ಕೋಮುವಾದಿ ಸರ್ಕಾರಕ್ಕೆ ಧಿಕ್ಕಾರ. ಕುವೆಂಪು ಮತ್ತು ನಾಡಗೀತೆ ಅವಮಾನ ಮಾಡಿರುವ ಚಕ್ರತೀರ್ಥರನ್ನು ಬಂಧಿಸಬೇಕು ಎಂದು ಘೋಷಣೆ ಕೂಗಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಸರ್ಕಾರ ರಚಿಸಿರುವ ಸಮಿತಿಯಲ್ಲಿ ಯಾವುದೇ ಶೈಕ್ಷಣಿಕ ಅರ್ಹತೆ ಇಲ್ಲದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಅಲ್ಲದೇ ಇತರ 7 ಸದ್ಯಸರು ಕೂಡ ಸಂಘ ಪರಿವಾರದವರೇ ಆಗಿದ್ದಾರೆ. ಇಂತಹ ಅನರ್ಹ ವ್ಯಕ್ತಿಗಳ ನೇತೃತ್ವದಲ್ಲಿ ಬ್ರಾಮ್ಹಣ್ಯವೇ ತುಂಬಿವೆ ಅವು ಮಕ್ಕಳ ಮನಸ್ಸು ಮತ್ತು ಮೆದುಳನ್ನು ಕಸದ ಬುಟ್ಟಿಯಾಗಿಸುತ್ತಿವೆ ಎಂದರು.

ದಸಂಸ ಮುಖಂಡ ಪುಟ್ಟಸಾಮಿ ಮಾತನಾಡಿ, ಇಂದು ರಾಜ್ಯದಲ್ಲಿ ಅನರ್ಹರ ಹಾವಳಿ ಇದೆ ಆಡಳಿತದಲ್ಲಿ ಮತ್ತು ಪಠ್ಯ ಪರಿಷ್ಕರಣೆಯಲ್ಲಿ ಸರ್ಕಾರ ಏಕಪಕ್ಷೀಯವಾಗಿದ್ದು, ಸಂಘ ಪರಿವಾರದ ಆದೇಶದಂತೆ ಆಡಳಿತ ನಡೆಸುತ್ತಿದೆ. ಈ ಸರ್ಕಾರ ಎಂದು ಭಾಸವಾಗುತ್ತಿದೆ. ಅಲ್ಲದೇ ಭಗತ್ ಸಿಂಗ್, ನಾರಾಯಣಗುರು, ಟಿಪ್ಪು ಕುರಿತು ಪಠ್ಯಕ್ರಮಗಳನ್ನು ಸೇರಿಬೇಕೆಂದು ಒತ್ತಾಯಿಸಿದರು.

ಸಿಪಿಎಂ ಮುಖಂಡ ವಿ.ಬಸವರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಆದಿಜಾಂಬವ ಸಂಘದ ತಾಲೂಕು ಅಧ್ಯಕ್ಷ ಜೆ.ಮಹದೇವು, ದಸಂಸ ರಾಮ ಕೃಷ್ಣ, ಸಿಪಿಎಂ ತಾಲೂಕು ಕಾರ್ಯದರ್ಶಿ ವೆಂಕಟೇಶ್, ರೈತ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಬಸವರಾಜು, ಮಣಿ, ತಾಪಂ ಮಾಜಿ ಸದಸ್ಯ ನಾಗರಾಜು, ದಸಂಸದ ರಾಜು, ಕಾಂತರಾಜು, ಸಿದ್ದೇಶ್, ಪಿಸ್ ಕಮಿಟಿಯ ಸಯ್ಯೆದ್ ರಿಜ್ವಾನ್ ಪಾಷ, ಸುರೇಶ್, ಗ್ರಾಪಂ ಮಾಜಿ ಸದಸ್ಯ ಚಾಮನಾಯಕ, ದೇವರಾಜು, ಸುರೇಶ್ ಇತರರಿದ್ದರು.

ತಂಬಾಕು ಬೆಳೆಗೆ ಗೊಬ್ಬರ ವಿತರಿಸಲು ಆಗ್ರಹ



ಹೆಚ್.ಡಿ.ಕೋಟೆ, ಮೇ 27(ಮಂಜು)– ಗೊಬ್ಬರ ವಿತರಿಸಲು ತಂಬಾಕು ಮಂಡಳಿ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ತಂಬಾಕು ರೈತರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಮೀಪದ ಶಾಂತಿಪುರ ತಂಬಾಕು ಮಂಡಳಿ ಹರಾಜು ಅಧೀಕ್ಷಕರ ಕಚೇರಿ ಆವರಣದಲ್ಲಿ ನೂರಾರು ರೈತರ ಗೊಬ್ಬರ ವಿತರಣೆ ಮಾಡುವಂತೆ ಅಧಿಕಾರಿಗಳನ್ನು ಒತ್ತಾಯಿಸಿದರು. ಈಗಾಗಲೇ ಸುಮಾರು 4 ಸಾವಿರಕ್ಕೂ ಹೆಚ್ಚು ರೈತರು ತಂಬಾಕು ನಾಟಿ ಮಾಡಿದ್ದಾರೆ. ಆದರೆ ಮಂಡಳಿ ಅಧಿಕಾರಿಗಳು ಸರಿಯಾದ ಸಮಯದಲ್ಲಿ ಗೊಬ್ಬರ ವಿತರಣೆ ಮಾಡದೆ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮಳೆ ಬೀಳುತ್ತಿರುವ ಸಂದರ್ಭ ಗೊಬ್ಬರ ಹಾಕಿದರೆ ಮಾತ್ರ ಉತ್ತಮ ಬೆಳೆ ಬರಲು ಸಾಧ್ಯ. ಈಗಾಗಲೇ ರೈತರು ಬ್ಯಾಂಕ್‌ಗಳಿಂದ ತಂಬಾಕು ಬೆಳೆ ನಂಬಿಕೊಂಡು ಲಕ್ಷಾಂತರ ರೂ. ಸಾಲ ಮಾಡಿದ್ದಾರೆ. ಸರಿಯಾದ ಸಮಯದಲ್ಲಿ ಗೊಬ್ಬರ ಹಾಕದೆ ಇದ್ದರೆ ಬೆಳೆ ನಷ್ಟವುಂಟಾಗಿ ಸಾಲದ ಸುಳಿಯಲ್ಲಿ ಸಿಲಕುಬೇಕಾಗುತ್ತದೆ. ಇದಕ್ಕೆ ಮಂಡಳಿ ಅಧಿಕಾರಿಗಳ ಹೊಣೆಗಾರರಾಗಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೈತ ಗಂಗಾಧರ್ ಮಾತನಾಡಿ, ಕಳೆದ ಮೂರು ನಾಲ್ಕು ದಿನಗಳಿಂದ ಗೊಬ್ಬರಕ್ಕಾಗಿ ಬರುತ್ತಿದ್ದೇವೆ. ಆದರೆ, ಅಧಿಕಾರಿಗಳು ಇಂದು ನಾಳೆ ಎಂದು ಅಲೆಸುತ್ತಿದ್ದಾರೆ ಎಂದು ಆರೋಪಿಸಿದರು. ಈ ವೇಳೆ ರೈತರಾದ ಶಿವರಾಜ್, ಮರಿಲಿಂಗೇಗೌಡ, ಕಾಂತೇಗೌಡ, ಸಣ್ಣಸ್ವಾಮಿ, ಮಾದೇವ ನಾಯ್ಕ ಸೇರಿದಂತೆ ಇತರರಿದ್ದರು.

ಕೆಂಪಯ್ಯನಹುಂಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಸನ್ಮಾನ

ತಿ.ನರಸೀಪುರ, ಮೇ 27 (ಎಸ್‌ಕೆ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ ಕೆಂಪಯ್ಯನಹುಂಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಸನ್ಮಾನಿಸಿದರು.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆ ಸಲ್ಲಿಸಿ ಮಾತನಾಡಿದ ಅವರು, ಗ್ರಾಮದ ಮುಖಂಡರಾದ ಕೆ.ಪಿ.ಬಾಬು ಹಾಗೂ ಶ್ರೀಧರ್ ಅವರು ಪರೀಕ್ಷೆ ಆರಂಭವಾಗುವ ಮುನ್ನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ 5 ಸಾವಿರ ರೂ, 3 ಸಾವಿರ ರೂ. 2 ಸಾವಿರ ರೂ. ನೀಡುವುದಾಗಿ ಘೋಷಿಸಿದ್ದರು. ಅದರಂತೆ ಶುಕ್ರವಾರ ವಿದ್ಯಾರ್ಥಿಗಳಾದ ಪಾರ್ವತಿ, ನಂದಶ್ರೀ, ಆರ್.ವಿಕಾಸ್ ಹಾಗೂ ಸಿ. ಚಂದನ್ ಅವರಿಗೆ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು. ಗ್ರಾಮದ ಜನತೆ ಶಾಲೆ ಬಗ್ಗೆ ಕಾಳಜಿ ವಹಿಸಿದಾಗ ಮಕ್ಕಳು ವಿದ್ಯಾವಂತರಾಗಲು ಅನುಕೂಲವಾಗುತ್ತದೆ ಹಾಗೂ ಮಾದರಿ ಶಾಲೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಗ್ರಾಮೀಣ ಹೆಣ್ಣು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವಂತೆ ಮನವಿ ಮಾಡಿದರು. ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿದ ಗ್ರಾಮದ ಕೆ.ಪಿ.ಬಾಬು ಹಾಗೂ ಶ್ರೀಧರ್ ಮಾತನಾಡಿ, ಗ್ರಾಮದ ಮಕ್ಕಳು ಛಲ ಹಾಗೂ ಗುರಿ ಇಟ್ಟುಕೊಂಡು ವಿದ್ಯಾಭ್ಯಾಸದ ಕಡೆ ಗಮನ ನೀಡಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದರು.

ಈ ವರ್ಷದಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ನಮ್ಮ ಗ್ರಾಮದ ಮಕ್ಕಳಿಗೆ ನಗದು ಪುರಸ್ಕಾರವನ್ನು ಮುಂದುವರಿಸಿಕೊಂಡು ಹೋಗುವುದಾಗಿ ಘೋಷಿಸಿದರು. ಅಲ್ಲದೆ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕಿ ಮಹದೇವಮ್ಮ, ಕರಿಯಪ್ಪ, ಮಹದೇವಶೆಟ್ಟಿ, ರಾಘವೇಂದ್ರ, ಪದ್ಮಿನಿ, ಶಂಶಿಯನಾಸ್, ಮಹದೇವ, ನಾಗಮಣಿ, ಆರ್.ಸುಮಾ, ಗ್ರಾಪಂ ಅಧ್ಯಕ್ಷ ಆನಂದ್, ಸದಸ್ಯರಾದ ಗಂಗಾಧರ್, ಶಿವಣ್ಣ, ಮುಖಂಡರಾದ ಕೆ.ಪಿ.ಶಿವಣ್ಣ, ಜವರೇಗೌಡ, ಹರೀಶ್ ಮತ್ತಿತರರಿದ್ದರು.

ಲಾಟರಿ ಮೂಲಕ ಒಲಿದ ಗ್ರಾಪಂ ಅಧ್ಯಕ್ಷ ಸ್ಥಾನ

ದೇವರಾಯಶೆಟ್ಟಿಪುರ ಗ್ರಾಪಂ ಅಧ್ಯಕ್ಷರಾಗಿ ಸಿದ್ದರಾಜು ಆಯ್ಕೆ



ಮಲ್ಲುಂಡಿ, ಮೇ 27(ಚನ್ನಪ್ಪ)– ನಂಜನಗೂಡು ತಾಲೂಕಿನ ದೇವರಾಯ ಶೆಟ್ಟಿಪುರ ಗ್ರಾಪಂ ಅಧ್ಯಕ್ಷರ ಸ್ಥಾನ ಅದೃಷ್ಟದ ಮೂಲಕ ಕಾಂಗ್ರೆಸ್ ಪಾಲಾಯಿತು. ಲಾಟರಿ ಮೂಲಕ ನಡೆದ ಆಯ್ಕೆ ವೇಳೆ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ಸಿದ್ದರಾಜು ಆಯ್ಕೆಯಾದರು.

ಒಂದೂವರೆ ವರ್ಷ ಅವಧಿಯ ಒಪ್ಪಂದ ಮೇರೆಗೆ ಅಧ್ಯಕ್ಷೆ ವನಿತಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಎಸ್.ಸಿದ್ದರಾಜು, ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಶಾರದ ನಾಮಪತ್ರ ಸಲ್ಲಿಸಿದ್ದರು.

ಚುನಾವಣೆಯಲ್ಲಿ ಎಸ್.ಸಿದ್ದರಾಜು, ಶಾರದ ತಲಾ 8 ಮತಗಳನ್ನು ಪಡೆದಿದ್ದರು. ಇಬ್ಬರಿಗೂ ಸಮಬಲದ ಮತಗಳು ಬಿದ್ದಿದ್ದರಿಂದ ಚುನಾವಣಾಧಿಕಾರಿ ಲಾಟರಿ ಮೂಲಕ ಆಯ್ಕೆ ಮಾಡಲು ತೀರ್ಮಾನಿಸಿ ಆಯ್ಕೆ ಮಾಡಿದಾಗ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಸ್.ಸಿದ್ದರಾಜು ಆಯ್ಕೆಯಾದರೆ, ಬಿಜೆಪಿ ಬೆಂಬಲಿತ ಅಭ್ಯರ್ಥಿ ಶಾರದ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಸಮಾಜ ಕಲ್ಯಾಣ ಅಧಿಕಾರಿ ಶ್ರೀನಿವಾಸ್ ಪ್ರಸಾದ್ ಕಾರ್ಯ ನಿರ್ವಹಿಸಿದರು.

ಕಾಂಗ್ರೆಸ್ ಮುಖಂಡ ನಾಗೇಶ್‌ರಾಜ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಸರ್ಕಾರ ಬಂದು 4 ವರ್ಷವಾದರು ಪಂಚಾಯತಿ ಅಭಿವೃದ್ಧಿಪಡಿಸಲು ವಿಫಲವಾಗಿದೆ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಪಂಚಾಯತಿಯಿಂದ ಸಾವಿರಾರು ಬಡಜನರಿಗೆ ವಸತಿ ಯೋಜನೆ ಕಲ್ಪಿಸಲಾಗಿತ್ತು. ಆದರೆ ಈ ಸರ್ಕಾರ ಇದುವರೆಗೂ ವಸತಿಗಳನ್ನು ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ. ಮುಂದಿನ ದಿನಗಳ ಅಧ್ಯಕ್ಷರ ಆಯ್ಕೆಯಲ್ಲಿ ಹೆಚ್ಚಿನ ಗ್ರಾಪಂಗಳನ್ನು ಕಾಂಗ್ರೆಸ್ ಪಕ್ಷ ಹಿಡಿಯಲಿದೆ ಎಂದರು.

ಮುಖಂಡರಾದ ಮಂಜು ಪಟೇಲ್, ಮಹೇಶ್, ಸೋಮಶೇಖರ್, ಗ್ರಾಪಂ ಸದಸ್ಯ ಪಾಂಡು, ಚೆನ್ನಕೇಶವ, ಶಿಲ್ಪ, ಸುರೇಶ್, ಜವರೇಗೌಡ, ಪುಟ್ಟಮ್ಮ, ಭಾನುಬೇಗಂ ಸೇರಿದಂತೆ ಪ್ರಮುಖರಿದ್ದರು.

ಹರದನಹಳ್ಳಿ ಪಿಎಸಿಎಸ್ ಕಾರ್ಯದರ್ಶಿ ನೇಣಿಗೆ ಶರಣು

ಭೇರ್ಯ, ಮೇ 27– ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಕಾರ್ಯದರ್ಶಿ) ವೆಂಕಟೇಶ್ (45) ಸಹಕಾರ ಸಂಘದ ಕಚೇರಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



60 ರಿಂದ 70 ಲಕ್ಷ ಕೈ ಸಾಲ ಮಾಡಿಕೊಂಡಿದ್ದೇನೆ ಎಂದು ನಮ್ಮ ಬಳಿ ಹೇಳುತ್ತಿದ್ದರು. ಇಂದು ಮುಂಜಾನೆ ಮನೆಯಿಂದ ಹೊರ ಹೋದವರು ಮನೆಗೆ ಬರಲಿಲ್ಲ. ನೋಡಲಾಗಿ ಸಹಕಾರ ಸಂಘದ ಕಚೇರಿಯಲ್ಲಿ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ದೀಪು ಸಾಲಿಗ್ರಾಮ ಠಾಣೆಗೆ ದೂರು ನೀಡಿದ್ದಾರೆ. ಸ್ಥಳಕ್ಕೆ ಸಾಲಿಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್ ಭೇಟಿ ನೀಡಿ ಸ್ಥಳ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಹೊಟ್ಟೆ ನೋವು ತಾಳಲಾರದೆ ಯುವಕ ಆತ್ಮಹತ್ಯೆ

ಮಲ್ಲುಂಡಿ, ಮೇ 27(ಚನ್ನಪ್ಪ)– ಹೊಟ್ಟೆನೋವು ತಾಳಲಾರದೇ ಯುವಕನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಸಿದ್ದೇಗೌಡನಹುಂಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಮದನ್(18) ಆತ್ಮಹತ್ಯೆ ಮಾಡಿಕೊಂಡವರು. ಈತ ತನಗೆ ಆಗಾಗ ಬರುತ್ತಿದ್ದ ಹೊಟ್ಟೆನೋವು ತಾಳಲಾರದೇ ಮನನೊಂದು ತಮ್ಮ ಜಮೀನಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಎಸ್‌ಐ ಮಹೇಶ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಪರಿಷತ್‌ಗೆ ಛಲವಾದಿ ನಾರಾಯಣಸ್ವಾಮಿ ಆಯ್ಕೆ ಹಿನ್ನೆಲೆ

ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿರುವ ಬಿಜೆಪಿ

ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಎಂ.ಮಹದೇವಯ್ಯ

ತಿ.ನರಸೀಪುರ, ಮೇ 27(ಎಸ್‌ಕೆ)– ದಲಿತ ಸಮುದಾಯದ ಛಲವಾದಿ ನಾರಾಯಣಸ್ವಾಮಿ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡುವ ಮೂಲಕ ಭಾರತೀಯ ಜನತಾ ಪಕ್ಷ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದೆ ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಎಂ.ಮಹದೇವಯ್ಯ ಹೇಳಿದರು.



ಬಿಜೆಪಿ ಪಕ್ಷದ ಎಸ್‌ಸಿ ಮೋರ್ಚಾದ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಅವರನ್ನು ಪಕ್ಷದ ವತಿಯಿಂದ ವಿಧಾನ ಪರಿಷತ್‌ಗೆ ಆಯ್ಕೆ ಮಾಡಿದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದ ಸಮಸ್ತ ದಲಿತರ ಆಶಯದಂತೆ ನಾರಾಯಣಸ್ವಾಮಿ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡುವ ಮೂಲಕ ಪಕ್ಷವು ಸದಾ ದಲಿತರ ಹಿತ ಕಾಯುತ್ತದೆ ಎಂಬುದನ್ನು ಸಾಬೀತು ಪಡಿಸಿದೆ. ವಿರೋಧ ಪಕ್ಷದವರು ಬಿಜೆಪಿ ದಲಿತರ ವಿರೋಧಿ ಪಕ್ಷ ಎಂಬ ಆರೋಪವನ್ನು ರಾಜ್ಯ ನಾಯಕರು ಅಳಿಸಿ ಹಾಕಿದ್ದು ಅಂಬೇಡ್ಕರ್ ಅವರ ಆಶಯವನ್ನು ಸಾಕಾರಗೊಳಿಸುವ ಮೂಲಕ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದೆ ಎಂದರು.

ಛಲವಾದಿ ನಾರಾಯಣಸ್ವಾಮಿ ಅವರ ಪಕ್ಷ ನಿಷ್ಠೆ ಮತ್ತು ಕಾರ್ಯ ಚಟುವಟಿಕೆಗಳನ್ನು ಗುರುತಿಸಿ ಪಕ್ಷ ಅವರಿಗೆ ಸ್ಥಾನಮಾನ ಕಲ್ಪಿಸಿರುವುದು ದಲಿತರಿಗೆ ಮತ್ತಷ್ಟು ಬಲಬಂದಂತಾಗಿದೆ. ಈಗಾಗಲೇ ರಾಜ್ಯದಲ್ಲಿ ಹಲವಾರು ಬಾರಿ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡಿ ದಲಿತರನ್ನು ಒಗ್ಗೂಡಿಸುವ ಮೂಲಕ ಸಮುದಾಯದ ಹಿತವನ್ನು ಬಲ ಪಡಿಸಿದ ನಾರಾಯಣ ಸ್ವಾಮಿಯವರು ತಮಗೆ ದೊರೆತ ಹೆಚ್ಚಿನ ಜವಾಬ್ದಾರಿಯಿಂದ ಮತ್ತೊಮ್ಮೆ ಪ್ರವಾಸ ಮಾಡಿ ಪಕ್ಷವನ್ನು ಮತ್ತಷ್ಟು ಬಲಪಡಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ದಲಿತ ಸಮುದಾಯದವರ ಮನಪರಿವರ್ತನೆ ಮಾಡಿ ಓಟ್ ಬ್ಯಾಂಕ್ ಮಾಡಿಕೊಳ್ಳಲು ಬಿಜೆಪಿ ಸಂವಿಧಾನ ಬದಲಾವಣೆ ಮಾಡಲೊರಟಿದ್ದು, ಸಮು ದಾಯದವರು ಇಲ್ಲಸಲ್ಲದ ಆರೋಪಗಳಿಗೆ ಕಿವಿ ಗೊಡದೇ ರಾಜ್ಯ ಮತ್ತು ರಾಷ್ಟ್ರದಲ್ಲಿ ಎಲ್ಲಾ ವರ್ಗದ ಪರವಾಗಿ ಕೆಲಸ ಮಾಡುತ್ತಿರುವ ಬಿಜೆಪಿ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸುವಂತೆ ಮನವಿ ಮಾಡಿದರು.

ಎಸ್‌ಸಿ ಮೋರ್ಚಾ ತಾಲೂಕು ಅಧ್ಯಕ್ಷ ಅಧ್ಯಕ್ಷ ಸೋಸಲೆ ಶಿವಕುಮಾರ್ (ಬಡ್ಡು)ಮಾತನಾಡಿ, ದಲಿತ ಸಮುದಾಯವನ್ನು ಸಂಘಟಿಸಿ, ಪಕ್ಷದ ತತ್ವ ಸಿದ್ಧಾಂತಗಳನ್ನು ಜನತೆಗೆ ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತ ಸಮುದಾಯವನ್ನು ಪಕ್ಷದತ್ತ ಸೆಳೆಯುತ್ತಿರುವ ಛಲವಾದಿ ನಾರಾಯಣಸ್ವಾಮಿ ಅವರಿಗೆ ಪಕ್ಷವು ಅವರ ಸೇವೆಯನ್ನು ಗುರುತಿಸಿ ವಿ.ಪರಿಷತ್ ಸ್ಥಾನ ದೊರಕಿಸಿ ಕೊಡುವ ಮೂಲಕ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬುದನ್ನು ಸಾಬೀತು ಪಡಿಸಿದೆ ಪರ್ವದಿಂದ ಹೇಮಲತಾ ನಾಯಕ್, ಓಬಿಸಿ ಯಿಂದ ಕೇಶವ ಪ್ರಸಾದ್ ಹಾಗೂ ಲಿಂಗಾಯತ ಸಮುದಾಯದಿಂದ ಲಕ್ಷ್ಮಣ ಸವದಿ ಅವರನ್ನು ಆಯ್ಕೆ ಮಾಡಿರುವ ಪಕ್ಷದ ನಡೆ ಸಮರ್ಥನೀಯವಾಗಿದ್ದು ನಾರಾಯಣಸ್ವಾಮಿ ಅವರು ಪ.ಜಾತಿ ಸಮಸ್ಯೆಯನ್ನು ಸದನದಲ್ಲಿ ಮಂಡಿಸುವ ಮೂಲಕ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಎಂ.ಎಸ್. ಪರಮಾನಂದ, ಜಿಲ್ಲಾ ಕಾರ್ಯದರ್ಶಿ ಸಾಮ್ರಾಟ್ ಸುಂದರೇಶನ್, ಅನಿಲ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಕೃಷ್ಣ ಮೂರ್ತಿ, ಡಿ.ಮಂಜುನಾಥ ಬಾಬು, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಅನಿಲ್, ವಾಟಾಳ್ ಜಿ.ಎನ್.ಪುಟ್ಟಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.

ಬಟ್ಲರ್ ಶತಕ: ಫೈನಲ್‌ಗೆ ರಾಜಸ್ಥಾನ್

ಟ್ರೋಫಿ ಗೆಲ್ಲುವ ಆರ್‌ಸಿಬಿ ಕನಸು ಮತ್ತೊಮ್ಮೆ ಭಗ್ನ


ಅಹಮದಾಬಾದ್, ಮೇ 27– ಜೋಸ್ ಬಟ್ಲರ್ ಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ಗುಜರಾತ್ ವಿರುದ್ಧ ಸೆಣಸಾಡಲಿದೆ. ಮತ್ತೊಂದೆಡೆ ಸೋಲು ಅನುಭವಿಸಿದ ಆರ್‌ಸಿಬಿ ಟ್ರೋಫಿ ಗೆಲ್ಲುವ ಕನಸು ಮತ್ತೊಮ್ಮೆ ಛಿದ್ರಗೊಂಡಿದೆ.



ಇಲ್ಲಿನ ನರೇಂದ್ರ ಮೋದಿ ಮೈದಾನ ದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ತಂಡದ ಪರ ನಾಯಕ ಡುಪ್ಲೆಸಿ 25, ರಜತ್ ಪಾಟೀದಾರ್ 58, ಮ್ಯಾಕ್ಸ್‌ವೆಲ್ 24 ರನ್ ಗಳಿಸಿದರು. ಆರ್‌ಆರ್ ಪರ ಪ್ರಸಿದ್ಧ ಕೃಷ್ಣ, ಮೆಕಾಯ್ ತಲಾ 3, ಬೋಲ್ಟ್, ಅಶ್ವಿನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ನಂತರ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 18.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಜಯದ ನಗೆ ಬೀರಿತು. ತಂಡದ ಪರ ಜೋಸ್ ಬಟ್ಲರ್ 60 ಎಸೆತಗಳಲ್ಲಿ 6 ಸಿಕ್ಸರ್, 10 ಬೌಂಡರಿ ಒಳಗೊಂಡ 106 ರನ್ ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ಯಶಸ್ವಿ ಜೈಸ್ವಾಲ್ 21, ಸಂಜು ಸ್ಯಾಮ್ಸನ್ 23 ರನ್ ಗಳಿಸಿದರು. ಆರ್‌ಸಿಬಿ ಪರ ಜೋಶ್ ಹ್ಯಾಸೆಲ್‌ವುಡ್ 2, ವಾನಿಂದು ಹಸರಂಗ 1 ವಿಕೆಟ್ ಉರುಳಿಸಿದರು. ಜೋಸ್ ಬಟ್ಲರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

ನಂಜನಗೂಡು, ಮೇ 27– ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ನಿವೃತ್ತ ಕೆಎಸ್‌ಆರ್‌ಟಿಸಿ ನೌಕರ ಶಿವರಾಜಪ್ಪ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಸಾವನ್ನಪ್ಪಿದ್ದಾರೆ. ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ಅವರ ಮಾವ ಶಿವರಾಜಪ್ಪ ಬುಧವಾರ ಮುಂಜಾನೆ ವಾಯುವಿಹಾರ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ವೇಳೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ನಗರದ ನ್ಯಾಯಾಲಯದ ಮುಂಭಾಗ ಅವರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಶುಕ್ರವಾರ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.



ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ,

ಕುದೇರು, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ
ಇದರ ರಿಟರ್ನಿಂಗ್ ಆಫೀಸರ್ ರವರ ಕಾರ್ಯಾಲಯ
(ನಮೂನೆ xii ನಿಯಮ 14(3))

ಚುನಾವಣಾ ವೇಳಾಪಟ್ಟಿ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಕುದೇರು, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ ಇದರ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ 05 ವರ್ಷಗಳ ಅವಧಿಗೆ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ ರವರ ಆದೇಶ ಸಂಖ್ಯೆ: ಸಚುಪ್ರಾ/ಮೈ/ಚಾ.ಜಿ/ರಿಆನೇ–ಆಮಂ/75/2021–22/161/5 ದಿನಾಂಕ 04.03.2022 ರನ್ವಯ ರಿಟರ್ನಿಂಗ್ ಆಫೀಸರ್ ಆಗಿ ನನ್ನನ್ನು ನೇಮಕಾತಿಗೊಳಿಸಿ ಆದೇಶಿಸಿದ್ದು, ಸದರಿ ಆದೇಶದನ್ವಯ ಮತ್ತು ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಕುದೇರು ಇದರ ಉಪನಿಯಮಗಳು ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960 ಮತ್ತು ಸಹಕಾರ ಚುನಾವಣಾ ಪ್ರಾಧಿಕಾರದ ನಿರ್ದೇಶನದನ್ವಯ ದಿನಾಂಕ: 14.06.2022 ರಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಒಕ್ಕೂಟದ ಕಛೇರಿಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಗಳಿಗೆ ಚುನಾವಣೆ ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

ಕ್ರ.ಸಂ	ವಿವರಗಳು	ದಿನಾಂಕ, ವಾರ, ಸ್ಥಳ ಮತ್ತು ವೇಳೆ ವಿವರ
1.	ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ದಿನಾಂಕ ಮತ್ತು ಸಮಯ	ದಿನಾಂಕ:30.05.2022 ರಿಂದ 06.06.2022 ರವರೆಗೆ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ / ನಿಯೋಜಿತ ಅಧಿಕಾರಿಗೆ
2.	ನಿಯಮ 14ಎ ರಂತೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ:06.06.2022 ನೇ ಸೋಮವಾರ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆ ಒಳಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ / ನಿಯೋಜಿತ ಅಧಿಕಾರಿಗೆ ಸಲ್ಲಿಸುವುದು.
3.	ನಿಯಮ 14ಬಿ ರಂತೆ ನಾಮಪತ್ರಗಳನ್ನು ಪರಿಶೀಲಿಸುವುದು	ದಿನಾಂಕ:07.06.2022 ನೇ ಮಂಗಳವಾರ ಬೆಳಿಗ್ಗೆ 11.00 ಘಂಟೆಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ ನಾಮಪತ್ರಗಳನ್ನು ಪರಿಶೀಲಿಸುವುದು.
4.	ನಿಯಮ 14ಬಿ (4)ರಂತೆ ಅರ್ಹತೆ ಪಡೆದ ನಾಮಪತ್ರಗಳ ಪಟ್ಟಿ ಪ್ರಕಟಿಸುವುದು	ದಿನಾಂಕ: 07.06.2022 ನೇ ಮಂಗಳವಾರ ನಾಮಪತ್ರಗಳ ಪರಿಶೀಲನೆಯ ನಂತರ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ.
5.	ನಿಯಮ 14(ಸಿ) ರಂತೆ ನಾಮಪತ್ರಗಳನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 08.06.2022 ನೇ ಬುಧವಾರ ಮಧ್ಯಾಹ್ನ 3.00 ಘಂಟೆಯ ಒಳಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ / ನಿಯೋಜಿತ ಅಧಿಕಾರಿಗೆ.
6.	ನಿಯಮ 14ಡಿ ರಂತೆ ನಾಮಪತ್ರ ವಾಪಸ್ಸು ಪಡೆದವರ ಮತ್ತು ಸ್ಪರ್ಧಾಕಣದಲ್ಲಿ ಉಳಿದವರ ಅಂತಿಮ ಪಟ್ಟಿ ಪ್ರಕಟಿಸುವುದು	ದಿನಾಂಕ: 08.06.2022 ನೇ ಬುಧವಾರ ಮಧ್ಯಾಹ್ನ 3.00 ಘಂಟೆಯ ನಂತರ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ.
7.	ನಿಯಮ 14ಇ ರಂತೆ ಚುನಾವಣೆ ನಡೆಸಬೇಕಾದಲ್ಲಿ ಅರ್ಹತೆ ಪಡೆದವರಿಗೆ ಚಿಹ್ನೆ ನೀಡುವುದು.	ದಿನಾಂಕ: 08.06.2022 ನೇ ಬುಧವಾರ ಮಧ್ಯಾಹ್ನ 3.30 ಘಂಟೆಯ ನಂತರ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ.
8.	ನಿಯಮ 14ಇ ರಂತೆ ಚುನಾವಣೆಗೆ ಸ್ಪರ್ಧಿಸಲು ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿ ಚಿಹ್ನೆ ಸಮೇತ ಪ್ರಕಟಣೆ.	ದಿನಾಂಕ: 08.06.2022 ನೇ ಗುರುವಾರ ಸಂಜೆ 04.00 ಘಂಟೆಯ ನಂತರ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ., ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ.
9.	ಚುನಾವಣೆ ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆ	ದಿನಾಂಕ: 14.06.2022 ನೇ ಮಂಗಳವಾರ ಸ್ಥಳ: ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಕುದೇರು, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ ಇದರ ಸಂಕೀರ್ಣದಲ್ಲಿ ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ.
10.	ಮತಗಳ ಎಣಿಕೆಯ ದಿನಾಂಕ ಹಾಗೂ ವೇಳೆ	ದಿನಾಂಕ: 14.06.2022 ನೇ ಮಂಗಳವಾರ ರಂದು ಮತದಾನ ಮುಕ್ತಾಯವಾದ ನಂತರ ಚುನಾವಣೆ ನಡೆದ ಸ್ಥಳದಲ್ಲಿ ಮತ ಎಣಿಕೆ ನಡೆಸಲಾಗುತ್ತದೆ.
11.	ರಿಟರ್ನಿಂಗ್ ಆಫೀಸರ್ ರವರಿಂದ ಚುನಾವಣಾ ಫಲಿತಾಂಶ ಪ್ರಕಟಣೆ	ದಿನಾಂಕ: 14.06.2022 ನೇ ಮಂಗಳವಾರ ರಂದು ಮತ ಎಣಿಕೆ ಮುಕ್ತಾಯವಾದ ನಂತರ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ,. ಕುದೇರು ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಆಫೀಸರ್ ರವರ ಕಛೇರಿಯ ನೋಟಿಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ ಫಲಿತಾಂಶ ಪ್ರಕಟಣೆ.

ಸೂಚನೆಗಳು:

1. ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ನಿ,. ಕುದೇರು ಇದರ ಉಪನಿಯಮದಂತೆ ಆಡಳಿತ ಮಂಡಳಿಯ 09 ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಗುತ್ತದೆ. ವಿವರಗಳು ಕೆಳಕಂಡಂತೆ ಇರುತ್ತದೆ.
   1) ಚಾಮರಾಜನಗರ ತಾಲ್ಲೂಕಿನ ಸಾಮಾನ್ಯ ಸದಸ್ಯರ ಕ್ಷೇತ್ರದಿಂದ ಚುನಾಯಿಸಲ್ಪಡುವ –02 ಸ್ಥಾನ
   2) ಗುಂಡ್ಲುಪೇಟೆ ತಾಲ್ಲೂಕಿನ ಸಾಮಾನ್ಯ ಸದಸ್ಯರ ಕ್ಷೇತ್ರದಿಂದ ಚುನಾಯಿಸಲ್ಪಡುವ –02 ಸ್ಥಾನ
   3) ಕೊಳ್ಳೇಗಾಲ ತಾಲ್ಲೂಕಿನ ಸಾಮಾನ್ಯ ಸದಸ್ಯರ ಕ್ಷೇತ್ರದಿಂದ ಚುನಾಯಿಸಲ್ಪಡುವ –01 ಸ್ಥಾನ
   4) ಹನೂರು ತಾಲ್ಲೂಕಿನ ಸಾಮಾನ್ಯ ಸದಸ್ಯರ ಕ್ಷೇತ್ರದಿಂದ ಚುನಾಯಿಸಲ್ಪಡುವ –02 ಸ್ಥಾನ
   5) ಯಳಂದೂರು ತಾಲ್ಲೂಕಿನ ಸಾಮಾನ್ಯ ಸದಸ್ಯರ ಕ್ಷೇತ್ರದಿಂದ ಚುನಾಯಿಸಲ್ಪಡುವ –01 ಸ್ಥಾನ
   6) ಒಕ್ಕೂಟದ ವ್ಯಾಪ್ತಿಯ ಎಲ್ಲಾ ಮಹಿಳಾ ಸ.ಹಾ.ಉ.ಸಂಘಗಳ ಕ್ಷೇತ್ರದಿಂದ ಚುನಾಯಿಸಲ್ಪಡುವ –01 ಸ್ಥಾನ
2. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವ ಸದಸ್ಯ ಸಂಘದ ಪ್ರತಿನಿಧಿಯು ನಾಮಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಗಳ ಕಛೇರಿ ವೇಳೆಯಲ್ಲಿ ಪಡೆಯಬಹುದು.
3. ನಿಯಮ 14(1) ರಂತೆ ನಾಮಪತ್ರಗಳನ್ನು ಉಮೇದುವಾರರು/ಸೂಚಕರು ಖುದ್ದಾಗಿ ಹಾಜರಾಗಿ ನಾಮಪತ್ರಗಳನ್ನು ಭರ್ತಿಮಾಡಿ, ಸಹಿ ಮಾಡಿ ದಿನಾಂಕ:– 30.05.2022 ರಿಂದ 06–06–2022 ರವರೆಗೆ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಕುದೇರು, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ ಇದರ ಹೆಚ್.ಎಸ್.ಎಂ. ಆಡಳಿತ ಸಂಕೀರ್ಣದಲ್ಲಿ ರಿಟರ್ನಿಂಗ್ ಅಧಿಕಾರಿಗಳ ಕಛೇರಿಯಲ್ಲಿ ನೀಡತಕ್ಕದ್ದು. (ರಿಟರ್ನಿಂಗ್ ಅಧಿಕಾರಿ / ನಿಯೋಜಿತ ಅಧಿಕಾರಿಗೆ.)
4. ಆಡಳಿತ ಮಂಡಳಿಯ ಸದಸ್ಯರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಒಕ್ಕೂಟದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರಬೇಕು.
5. ಇತರೆ ಸೂಚನೆಗಳನ್ನು ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ,. ಕುದೇರು ಗ್ರಾಮ, ಸಂತೇಮರಳ್ಳಿ ಹೋಬಳಿ, ಚಾಮರಾಜನಗರ ಇದರ ಹೆಚ್.ಎಸ್.ಎಂ ಆಡಳಿತ ಸಂಕೀರ್ಣದ ರಿಟರ್ನಿಂಗ್ ಅಧಿಕಾರಿ ರವರ ಕಛೇರಿಯಲ್ಲಿ ಪಡೆಯಲು ಸೂಚಿಸಿದೆ.

ದಿನಾಂಕ : 27–05–2022
ಸ್ಥಳ : ಕುದೇರು

ಸಹಿ/–(ರಾಜೇಂದ್ರ ಪ್ರಸಾದ್.ಕೆ.ಎ)
ರಿಟರ್ನಿಂಗ್ ಅಧಿಕಾರಿ
ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಕುದೇರು, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ ಹಾಗೂ
ಉಪ ನಿರ್ದೇಶಕರು (ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಚಾಮರಾಜನಗರ

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು